ವಾರ್ಷಿಕ ಚಂದಾ ರೂ.25/-

ಮಾಸಿಕ

# ಜನಪದ

ಸಂಪುಟ–05 • ಸಂಚಿಕೆ–02 • ನವೆಂಬರ್ 2021


ನವೆಂಬರ್ 2021



## ರಾಜ್ಯದ 31ನೇ ಜಿಲ್ಲೆ

# ವಿಜಯನಗರ

Downloaded From: www.kpscvaani.com




ಅಕ್ಟೋಬರ್ 2 ರಂದು ಗಾಂಧಿ ಭವನದಲ್ಲಿ ಗಾಂಧಿ ಜಯಂತಿ ನಿಮಿತ್ತ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ
ಮುಖ್ಯಮಂತ್ರಿಗಳು ವಾರ್ತಾ ಜನಪದವನ್ನು ಓದುತ್ತಿರುವುದು.




ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು  ಮತ್ತು ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು
ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡುವ ಮೂಲಕ ನಾಡಹಬ್ಬ ಮೈಸೂರು ದಸರಾ ಮಹೋತ್ಸವಕ್ಕೆ ಚಾಲನೆ ನೀಡಿದ ಸಂದರ್ಭ.
ಸಂಸದರು, ಸಚಿವರು, ಶಾಸಕರು ಸೇರಿದಂತೆ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

Downloaded From: www.kpscvaani.com

ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-05 • ಸಂಚಿಕೆ-02 • ನವೆಂಬರ್ 2021





06 ನನ್ನ ಕಲ್ಪನೆಯ ಕರ್ನಾಟಕ
• ಬಸವರಾಜ ಬೊಮ್ಮಾಯಿ
ನಿರೂಪಣೆ : ವೈ. ಸಿ. ಸಂಪತ್ ಕುಮಾರ್






13 ರಾಜ್ಯದ 31ನೇ ಜಿಲ್ಲೆ ವಿಜಯನಗರ
• ರಾಮಲಿಂಗಪ್ಪ ಬಿ.ಕೆ.






19 ಅಮೃತ ಯೋಜನೆಯಡಿ 750 ಗ್ರಾಮ ಪಂಚಾಯಿತಿಗಳ ಅಭಿವೃದ್ಧಿ
• ಚಾರುಸ್ಮಿತಾ

22 ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತಂದ ಹೆಗ್ಗಳಿಕೆ ನಮ್ಮ ರಾಜ್ಯದ್ದು
• ಪಿ. ಪ್ರದೀಪ್

27 ಯಶಸ್ವಿಯಾಗಿ ನಡೆದ ವಿಧಾನಮಂಡಲ ಮುಂಗಾರು ಅಧಿವೇಶನ
• ನಂಜುಂಡಪ್ಪ ವಿ.

30 ಜಂಟಿ ಸದನದಲ್ಲಿ ಲೋಕಸಭಾಧ್ಯಕ್ಷರ ಭಾಷಣ
• ಬಿ. ಜಿ. ಪೂರ್ಣಿಮ

32 ತಂತ್ರಜ್ಞಾನ ಕೇಂದ್ರಗಳಾಗಿ ಐಟಿಐ
• ರೋಹಿಣಿ ಕೆ

34 ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೊಂದಿಗೆ ಮಾತು ಮಂಥನ
• ಕೆ. ಎಸ್. ರಾಜಮನ್ನಾರ್

37 ಅಪ್ಪಟ ಕನ್ನಡ ಅಭಿಮಾನಿ ಬಶೀರ ಅಹ್ಮದ ಹೊಸಮನಿ
• ಈರಣ್ಣ ಬೆಂಗಾಲಿ

39 ಸಾರ್ವಜನಿಕ ಸೇವೆಗೆ ಅನಾವರಣಗೊಂಡ ಮೊದಲ ವಿದ್ಯುತ್ ಚಾಲಿತ ಬಸ್
• ರೇಖಾಚವ್ಹಾಣ್ ಆರ್. ಇ.






40 ಧಾರವಾಡ ಪೇಡಾ ಒಮ್ಮೆ ತಿಂದು ನೋಡಾ !
• ಡಿ. ಪಿ. ಮುರಳೀಧರ್

44 ಗಾಂಧಿ ಸೇವಾ ಪ್ರಶಸ್ತಿ ಪುರಸ್ಕೃತರು
• ಮಂಜುನಾಥ್ ಸುಳ್ಳೊಳ್ಳಿ
ಆರ್. ಚಂದ್ರಕಲಾ

48 ತುಮಕೂರಿನಲ್ಲಿ ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಆಸ್ಪತ್ರೆ
• ರಿಶಿಕೇಶ್

50 ಪದಬಂಧ-24



ಪ್ರಧಾನ ಸಂಪಾದಕರು
ಜಿ. ಜಗದೀಶ, ಐಎಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಡಿ.ಪಿ. ಮುರಳೀಧರ್
ಜಂಟಿ ನಿರ್ದೇಶಕರು

ಸಹನಾ ಎಂ.
ಉಪ ನಿರ್ದೇಶಕರು

ಉಪ ಸಂಪಾದಕರು
ಬಿ. ಜಿ. ಪೂರ್ಣಿಮ

ಪ್ರಕಾಶಕರು
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001
Ph : 080-22028103 / 22028023
email : varthajanapada@yahoo.co.in
https://dipr.karnataka.gov.in

ಮುದ್ರಕರು
ಲಾವಣ್ಯ ಮುದ್ರಣ
# 19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು–50


ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From: www.kpscvaani.com

# ನಿಮ್ಮ ಅನಿಸಿಕೆ

ಕೃಷಿ ಚಟುವಟಿಕೆಗಳಿಗೆ ನೀಡುವ ಹಲವಾರು ರೀತಿಯ ಕಾರ್ಯಕ್ರಮಗಳ ನಡುವೆ ಸನ್ಮಾನ್ಯ ಮುಖ್ಯಮಂತ್ರಿ ಅವರು ದೇಶದಲ್ಲೇ ಮೊದಲ ಬಾರಿಗೆ ರಾಜ್ಯದ ರೈತರ ಮಕ್ಕಳ ಹೆಚ್ಚಿನ ವಿದ್ಯಾಭ್ಯಾಸಕ್ಕೆ ನೆರವಾಗುವಂತಹ ವಿದ್ಯಾನಿಧಿ ಯೋಜನೆಯನ್ನು ಸ್ಥಾಪಿಸಿರುವುದು ಅತ್ಯಂತ ಶ್ಲಾಘನೀಯ. ಜಾತಿ, ಧರ್ಮಗಳ ಭೇದ-ಭಾವವಿಲ್ಲದ ಈ ಯೋಜನೆ ನಿಜಕ್ಕೂ ಸುತ್ತ್ಯಾರ್ಹವಾಗಿದೆ. ಮುಖ್ಯಮಂತ್ರಿಗಳಿಗೆ ನನ್ನ ತುಂಬು ಹೃದಯದ ಧನ್ಯವಾದಗಳು.

**–ಜವರೇಗೌಡ, ಕೆ.ಆರ್. ನಗರ**

* * *

ವೈದ್ಯಕೀಯ ಕ್ಷೇತ್ರದ ದೀಮಂತ ವ್ಯಕ್ತಿ ಡಾ.ರಮಣ ರಾವ್ ಅವರ ನಿಸ್ವಾರ್ಥ ಸೇವೆಯ ಮೇಲೆ ಬೆಳಕು ಚೆಲ್ಲಿರುವ ಶ್ರೀಯುತ ಮುರಳೀಧರ್ ಅವರ ಲೇಖನ ಅತ್ಯಂತ ಸೊಗಸಾಗಿ ಮೂಡಿ ಬಂದಿದೆ. ಡಾ. ರಮಣ ರಾವ್ ಅವರ 47 ವರ್ಷಗಳ ಸುದೀರ್ಘ ಸೇವೆಯಲ್ಲಿ ಸುಮಾರು 20 ಲಕ್ಷ ಮಂದಿಗೆ ಉಚಿತ ಚಿಕಿತ್ಸೆ ನೀಡಿರುವುದು ವೈದ್ಯಕೀಯ ಕ್ಷೇತ್ರದಲ್ಲಿ ಅತ್ಯಂತ ಮಹತ್ವದ್ದಾಗಿರುತ್ತದೆ. ಇವರ ಸೇವೆ ಇತರ ವೈದ್ಯರಿಗೂ ಸ್ಫೂರ್ತಿದಾಯಕವಾಗಿದೆ.

ಈ ನಿಸ್ವಾರ್ಥ ಅಮೋಘ ಸೇವೆಗಾಗಿ ಅವರಿಗೆ ಇನ್ನೂ ಹೆಚ್ಚಿನ ಸೇವಾ ಪ್ರಶಸ್ತಿಗಳು ಲಭಿಸಲಿ ಹಾಗೂ ಇವರ ಪ್ರೇರಣೆಯಿಂದ ಮತ್ತಷ್ಟು ಯುವ ವೈದ್ಯರು ಬಡವರ ಸೇವೆ ಮಾಡುವಂತಾಗಲಿ ಎಂಬುದ ನನ್ನ ಹಾರೈಕೆ.

**–ಗೌಡಯ್ಯ, ಮೈಸೂರು**

ಯಾರಿಗೂ ಬೇಡವಾದ ಅನಾಥ ಶವಗಳ ಶವ ಸಂಸ್ಕಾರ ಮಾಡಿ ಅವುಗಳಿಗೆ ಮುಕ್ತಿ ಕಾಣಿಸುವ ಈ ಮಹತ್ಕಾರ್ಯವನ್ನು ಒಬ್ಬ ಒಂಟಿ ಹೆಂಗಸು ತನ್ನ ಸ್ನೇಹಿತರ ಸಹಕಾರದೊಂದಿಗೆ ಮಾಡುತ್ತಿರುವುದು ಸಾಹಸ ಗಾಥೆಯೇ ಸರಿ.

ಶ್ರೀಮತಿ ಆಶಾ ಅವರ ಈ ಮಾನವೀಯ ಕೆಲಸದ ಕುರಿತು ಶ್ರೀಯುತ ವೃಷಾಂಕ್ ಖಾಡ್ಕುರ್ ಅವರು ಲೇಖನವನ್ನು ಬರೆಯುವ ಮೂಲಕ ಸಮಾಜದ ಗಮನ ಸೆಳೆದಿದ್ದಾರೆ. ಜೀವನೋಪಾಯಕ್ಕೆ ಕೂಲಿ ಕೆಲಸ ಮಾಡುತ್ತಿದ್ದರೂ ಈವರೆವಿಗೂ ಸುಮಾರು 4500ಕ್ಕೂ ಹೆಚ್ಚು ಅನಾಥ ಶವಗಳಿಗೆ ಅಂತ್ಯ ಸಂಸ್ಕಾರ ಮಾಡಿ, ಅವರುಗಳಿಗೆ ಮುಕ್ತಿ ಕರುಣಿಸಿರುವುದು ಸಾಹಸವೇ ಸರಿ. ಇವರ ಈ ಕಾರ್ಯದಲ್ಲಿ ಅವರ ಪತಿ ಕೈಜೋಡಿಸಿರುವುದು ನಿಜಕ್ಕೂ ಅಭಿನಂದನೀಯ ಸಂಗತಿ. ಇವರ ಈ ಸಮಾಜ ಸೇವೆಯನ್ನು ಬೆಂಬಲಿಸಿ ಅನೇಕ ಸಂಘ ಸಂಸ್ಥೆಗಳು ಬೆಂಬಲ ನೀಡಿರುವುದು ಪ್ರಶಂಸನೀಯವಾದುದು.

**–ತೇಜಾವತಿ, ಬೆಂಗಳೂರು**

* * *

ಮಾಹಿತಿ ತಂತ್ರಜ್ಞಾನ ನಗರಿ ಕರ್ನಾಟಕದ ರಾಜಧಾನಿ ಬೆಂಗಳೂರು ನಗರದಲ್ಲಿ ಹಳ್ಳಿಗರ ಸರಳ ಜೀವನದ ಸೊಗಡನ್ನು ಬಿಂಬಿಸುವ ಮಾದರಿ ಪಾರಂಪರಿಕ ಗ್ರಾಮದ ಕುರಿತು ಶ್ರೀಯುತ ಅಶೋಕ ಅವರ ಲೇಖನ ತುಂಬಾನೇ ಮನಮುಟ್ಟುವಂತಿದೆ. ನಗರವಾಸಿಗರಿಗೆ ಹಳ್ಳಿ ಜನರ ಜೀವನವನ್ನು ಪರಿಚಯಿಸಲು ಕರ್ನಾಟಕ ಸರ್ಕಾರ ಸುಮಾರು 12 ಕೋಟಿ ರೂಪಾಯಿ ವೆಚ್ಚದಲ್ಲಿ ಮಾದರಿ ಪಾರಂಪರಿಕ ಗ್ರಾಮ ಸ್ಥಾಪನೆ ಮಾಡಿರುವುದು ಒಳ್ಳೆಯ ಕಾರ್ಯವಾಗಿದೆ.

ಮಹಾನಗರಿಯ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ವರ್ಷಕ್ಕೊಮ್ಮೆ ಈ ಮಾದರಿ ಗ್ರಾಮಕ್ಕೆ ಭೇಟಿ ನೀಡಲು ಅವಕಾಶ ಮಾಡಿಕೊಟ್ಟರೆ ನಮ್ಮ ಹಳ್ಳಿಗರ ಸರಳ ಜೀವನ ಅವರ ಮೇಲೆ ಪ್ರಭಾವ ಬೀರಿ, ಅವರು ಹಳ್ಳಿಗಳ ಬಗ್ಗೆ ಹೆಚ್ಚು ತಿಳಿದುಕೊಳ್ಳಲು ಅವಕಾಶ ಮಾಡಿಕೊಟ್ಟಂತಾಗುತ್ತದೆ.

**–ಶಿವಕುಮಾರ್, ನಂಜನಗೂಡು**

* * *

ತಮ್ಮ ಪತ್ರಿಕೆಯಲ್ಲಿ ವಿವಿಧ ಇಲಾಖೆಯಲ್ಲಿ ಸಿಗುವ ಸೇವಾ ಸೌಲಭ್ಯಗಳ ಕುರಿತು ಪ್ರಕಟಿಸಲಾಗುವ ಲೇಖನಗಳು ಬಹಳಷ್ಟು ಜನರಿಗೆ ಉಪಯೋಗವಾಗಲಿದೆ. ಅದೇ ರೀತಿಯಲ್ಲಿ ಅಕ್ಟೋಬರ್ ಸಂಚಿಕೆಯಲ್ಲಿ ಪಶುಸಂಗೋಪನೆ ಇಲಾಖೆಯಲ್ಲಿ ಅನುಗ್ರಹ ಕೊಡುಗೆ ಯೋಜನೆಯಡಿ ಪರಿಹಾರ ಧನ ಪಡೆಯುವ ವಿಧಾನ ಹಾಗೂ ಕೃಷಿ ಜಮೀನಿನಲ್ಲಿ ಅರಣ್ಯ ಕೃಷಿ ಮಾಡಲು ಅರಣ್ಯ ಇಲಾಖೆಯಿಂದ ಸಿಗುವ ಪ್ರೋತ್ಸಾಹ ಧನದ ಕುರಿತು ಮಾಹಿತಿ ದೊರೆಯಿತು.

**–ಸಂಗಮೇಶ್ ಬಿರಾದರ್, ಕೊಪ್ಪಳ**

* * *

ದೇಶದಲ್ಲೇ ಪ್ರಪ್ರಥಮ ಬಾರಿಗೆ ಮುಖ್ಯಮಂತ್ರಿಗಳು ರೈತ ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕೆ ಆರ್ಥಿಕ ನೆರವು ನೀಡುವ ಸಲುವಾಗಿ ಹಮ್ಮಿಕೊಂಡಿರುವ ವಿದ್ಯಾ ನಿಧಿ ಯೋಜನೆಯ ಲೇಖನದ ಶೀರ್ಷಿಕೆಯಂತೆ ಸತ್ಯವಾಗಿ ಅನ್ನದಾತನ ಮನೆಯಲ್ಲಿ ವಿದ್ಯಾದೀಪ ಬೆಳಗಿಸಲಿದೆ. ಆರ್ಥಿಕ ಸಂಕಷ್ಟದಿಂದಾಗಿ ಬಹಳಷ್ಟು ಕೃಷಿಕರು ತಮ್ಮ ಮಕ್ಕಳನ್ನು ಉನ್ನತ ವ್ಯಾಸಂಗಕ್ಕೆ ಕಳುಹಿಸಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಈ ಯೋಜನೆಯಿಂದ ಇನ್ನು ಮುಂದೆ ರೈತರ ಮಕ್ಕಳೂ ಉನ್ನತ ವಿದ್ಯಾಭ್ಯಾಸ ಮಾಡಲು ಸಾಧ್ಯವಾಗಲಿದೆ. ರೈತರ ಮನೆಯಲ್ಲಿ ವಿದ್ಯಾದೀಪ ಬೆಳಗಿಸಲು ಮುಂದಾಗಿರುವ ಮುಖ್ಯಮಂತ್ರಿಗಳಿಗೆ ಒಳ್ಳೆಯದಾಗಲಿ.

**–ಸಿಂಚನ, ಬಸವರಾಜಪುರ**




ದಾವಣಗೆರೆ ಜಿಲ್ಲೆಯಲ್ಲಿ ನಿರ್ಮಾಣವಾಗಿರುವ ಗಾಂಧಿ ಭವನದ ಕುರಿತು ಪ್ರಕಟವಾಗಿರುವ ಲೇಖನ ಓದಿ ತುಂಬಾ ಸಂತೋಷವಾಯಿತು. ಇದೇ ಜಿಲ್ಲೆಯವನಾದ ನನಗೆ ನಮ್ಮ ಜಿಲ್ಲೆಯಲ್ಲಿ ಗಾಂಧೀಜಿ ಅವರ ಜೀವನ ಗಾಥೆ ಸಾರುವ ಗಾಂಧಿ ಭವನ ನಿರ್ಮಾಣವಾಗಿರುವುದು ಹೆಮ್ಮೆ ಎನಿಸಿತು. ಗಾಂಧೀಜಿಯರವ ಜೀವನಾದರ್ಶಗಳನ್ನು, ವಿಚಾರಧಾರೆಗಳನ್ನು ತಿಳಿಸುವ ನಿಟ್ಟಿನಲ್ಲಿ ವರ್ಷವಿಡೀ ಈ ಭವನದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದರಿಂದ ಯುವ ಪೀಳಿಗೆಯವರಿಗೆ ಮತ್ತು ಕಲಾವಿದರಿಗೆ ಹೆಚ್ಚು ಅನುಕೂಲವಾಗಲಿದೆ.

**ಗಿರಿನಾಥ್ ಡಿ.ಎಸ್, ದಾವಣಗೆರೆ**

'ವಾರ್ತಾ ಜನಪದ' ಮಾಸಿಕ ಈಗ **www.kanaja.inನಲ್ಲಿ ಲಭ್ಯ**

ವಾರ್ತಾ ಜನಪದ ಮಾಸಿಕಕ್ಕೆ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಪಾವತಿಸಲು ಕಡ್ಡಾಯವಾಗಿ ಸೇವಾಸಿಂಧುವಿನ **https://sevasindhu.karnataka.gov.in** ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ-ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ-ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Downloaded From: www.kpscvaani.com



# ಸಂಪಾದಕೀಯ...

**ಪ್ರಿಯ ಓದುಗ ಮಿತ್ರರೆ**

ರಾಜ್ಯದಲ್ಲಿ ಕೋವಿಡ್-19 ಹತೋಟಿಗೆ ಬರತೊಡಗಿದ್ದು, ಜನ-ಜೀವನ ಕ್ರಮೇಣ ಮೊದಲಿನ ಹಂತಕ್ಕೆ ಬರುತ್ತಿದೆ. ಇದಕ್ಕೆ ಸರ್ಕಾರವು ತೆಗೆದುಕೊಂಡ ಮುಂಜಾಗ್ರತಾ ಕ್ರಮಗಳೇ ಕಾರಣ. ಹಾಗಾಗಿಯೇ ಕೋವಿಡ್-19 ಸಾಂಕ್ರಾಮಿಕ ತಡೆಗಟ್ಟುವ ನಿಟ್ಟಿನಲ್ಲಿ ಅತ್ಯುತ್ತಮ ನಿರ್ವಹಣೆ ಮಾಡಿದುದಕ್ಕಾಗಿ ನಮ್ಮ ರಾಜ್ಯಕ್ಕೆ ಇಂಡಿಯಾ ಟುಡೇ ಗ್ರೂಪ್‌ನ ಹೆಲ್ತ್ ಗಿರಿ ಪ್ರಶಸ್ತಿಯು ದೊರೆಕಿದೆ.

ಬಸವರಾಜ ಎಸ್ ಬೊಮ್ಮಾಯಿ ಅವರು ಮುಖ್ಯಮಂತ್ರಿಗಳಾದ ನಂತರ ಕಳೆದ ಮಾಹೆಯಲ್ಲಿ ಜರುಗಿದ ತಮ್ಮ ಮೊದಲ ವಿಧಾನಮಂಡಲ ಅಧಿವೇಶನವನ್ನು ಅತ್ಯಂತ ಅರ್ಥಪೂರ್ಣವಾಗಿ ನಡೆಸಿದ ಜೊತೆಗೆ ಅಧಿವೇಶನದಲ್ಲಿ ಹಲವಾರು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಕೂಡ ಸಫಲರಾಗಿದ್ದಾರೆ. ಆ ಮೂಲಕ ಅವರು ಒಬ್ಬ ನುರಿತ ಸಂಸದೀಯ ಪಟು ಎಂಬುದನ್ನು ಸಾಬೀತು ಪಡಿಸಿದ್ದಾರೆ.

ಅಧಿವೇಶನದಲ್ಲಿ ನೀರಾವರಿ ವಿಷಯಗಳ ಕುರಿತಂತೆ ಗಹನವಾದ ಚರ್ಚೆ ನಡೆಯಿತು. ಮಹದಾಯಿ, ಕೃಷ್ಣಾ, ಮೇಕೆದಾಟು, ಎತ್ತಿನ ಹೊಳೆ ಯೋಜನೆಗಳ ಬಗ್ಗೆ ಸದನದಲ್ಲಿ ಚರ್ಚೆ ನಡೆಸಲಾಯಿತು. ನೆರೆ ಹಾವಳಿಗೆ ಸರ್ಕಾರ ಕಲ್ಪಿಸಿದ ನೆರವು, ರಾಷ್ಟ್ರೀಯ ಶಿಕ್ಷಣ ನೀತಿ, ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಅಗತ್ಯ ವಸ್ತುಗಳಾದ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲದ ಬೆಲೆ ಏರಿಕೆ, ಕೋವಿಡ್ ಸಂಕಷ್ಟದ ನಂತರ ದಿನದಿಂದ ದಿನಕ್ಕೆ ದುಬಾರಿಯಾಗುತ್ತಿರುವ ಜನಸಾಮಾನ್ಯರ ಬದುಕಿನ ಬವಣೆಗಳು ಇವೇ ಮುಂತಾದ ಕುರಿತು ಪ್ರತಿಪಕ್ಷಗಳ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಮುಖ್ಯಮಂತ್ರಿಗಳು ಪ್ರಬುದ್ಧತೆಯಿಂದ ಸ್ಪಷ್ಟ ಉತ್ತರ ನೀಡಿದುದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಅಕ್ಟೋಬರ್ 2 ರಂದು ರಾಜ್ಯದಲ್ಲಿ ಐತಿಹಾಸಿಕ ಕಾರ್ಯಕ್ರಮವೊಂದು ಜರುಗಿತು. ಅದುವೇ ಸರ್ಕಾರವು 31 ನೇ ಜಿಲ್ಲೆಯಾಗಿ ವಿಜಯನಗರವನ್ನು ಉದ್ಘಾಟಿಸಿದ್ದು. ಸ್ಥಳೀಯ ಜನರ ಬಹುದಿನಗಳ ಬೇಡಿಕೆಯನ್ನು ಪೂರೈಸಿರುವ ಸರ್ಕಾರವು 6 ತಾಲ್ಲೂಕುಗಳನ್ನು ಒಳಗೊಂಡ ವಿಜಯನಗರ ಜಿಲ್ಲೆಯನ್ನು ಸ್ಥಾಪನೆ ಮಾಡಿದೆ. ನೂತನ ಜಿಲ್ಲೆಯ ಸ್ವಾಗತಕ್ಕೆ ಸರ್ಕಾರವು ಅತ್ಯಂತ ವೈಭವದಿಂದ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಅಂದು ಮುಖ್ಯಮಂತ್ರಿಗಳು ವಿಜಯನಗರ ಜಿಲ್ಲೆಯ ಪಾರಂಪರಿಕ ಪ್ರವಾಸೀ ಸ್ಥಳದ ಅಭಿವೃದ್ಧಿಗಾಗಿ 643 ಕೋಟಿ ರೂಗಳ ವಿಶೇಷ ಯೋಜನೆಯನ್ನು ರೂಪಿಸಲಾಗಿದೆ ಎಂದು ತಿಳಿಸಿದ್ದಾರೆ.

ಸರ್ಕಾರದ ಎಲ್ಲಾ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಚುರುಕುಗೊಳಿಸಿರುವ ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ಕರ್ನಾಟಕ ರಾಜ್ಯವನ್ನು ಎಲ್ಲಾ ವಲಯಗಳಲ್ಲಿಯೂ ಅಭಿವೃದ್ಧಿ ಮಾಡುವ ಮೂಲಕ ಸ್ವಾವಲಂಬಿ ಕರ್ನಾಟಕವನ್ನು ಕಟ್ಟಲು ಮುಂದಾಗಿದ್ದಾರೆ.

ಸರತಿಯ ಕೊನೆಯಲ್ಲಿ ನಿಂತಿರುವ ವ್ಯಕ್ತಿಗೂ ತನ್ನ ಅಹವಾಲುಗಳನ್ನು ಆಲಿಸುವ ಸರ್ಕಾರ ಇದೆ ಎನಿಸುವಂತೆ ಕೆಲಸ ಮಾಡಬೇಕು ಎನ್ನುವ ಆಶಯ ಮುಖ್ಯಮಂತ್ರಿಯವರದು. ಹಾಗಾಗಿ ಎಲ್ಲಾ ವರ್ಗದವರಿಗೂ ಉದ್ಯೋಗ ಒದಗಿಸುವ ಮೂಲಕ ತಲಾವಾರು ಆದಾಯವನ್ನು ವೃದ್ಧಿ ಮಾಡಬೇಕೆಂಬುದು ಅವರ ಮಹಾದಾಸೆಯಾಗಿದೆ. ಆ ನಿಟ್ಟಿನಲ್ಲಿ ಅವರು ಯೋಜನೆಗಳನ್ನು ಸಿದ್ಧಪಡಿಸುತ್ತಿದ್ದಾರೆ.

ಸದನದಲ್ಲಿ ಅವರು ಭರವಸೆ ನೀಡಿದಂತೆ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಪೂರ್ಣ ಪ್ರಮಾಣದ ಕಾರ್ಯದರ್ಶಿಯನ್ನು ನೇಮಕ ಮಾಡುವ ಜೊತೆಗೆ ಕಲ್ಯಾಣ ಕರ್ನಾಟಕ 371 ಜೆ ಕೋಶವನ್ನು ಕಲಬುರಗಿಗೆ ಸ್ಥಳಾಂತರಿಸಿ ಆದೇಶ ಹೊರಡಿಸಿದ್ದಾರೆ. ಅಲ್ಲದೆ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಪ್ರಸ್ತುತ ನೀಡುತ್ತಿರುವ 1500 ಕೋಟಿ ರೂ ಜೊತೆಗೆ ಹೆಚ್ಚುವರಿಯಾಗಿ ಅನುದಾನ ನೀಡಲು ಸರ್ಕಾರ ಸಿದ್ಧವಿದೆ ಎಂದು ತಿಳಿಸಿದ್ದಾರೆ. ಇದರಿಂದ ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಅವರು ಎಷ್ಟು ಬದ್ಧರಾಗಿದ್ದಾರೆ ಎಂಬುದು ತಿಳಿಯುತ್ತದೆ.

ಇತ್ತೀಚೆಗಷ್ಟೇ ಮುಖ್ಯಮಂತ್ರಿಗಳು ಮುಂಬೈ ಕರ್ನಾಟಕವನ್ನು "ಕಿತ್ತೂರು ಕರ್ನಾಟಕ" ಎಂದು ನಾಮಕರಣ ಮಾಡುವುದಾಗಿ ಘೋಷಿಸುವ ಮೂಲಕ ಆ ಭಾಗದ ಜನರ ಬಹುದಿನಗಳ ಬೇಡಿಕೆಯನ್ನು ಈಡೇರಿಸಿದ್ದಾರೆ.

**ಸಮಸ್ತ ಓದುಗರಿಗೆ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು**

**ಜಿ. ಜಗದೀಶ, ಐಎಎಸ್**
**ಪ್ರಧಾನ ಸಂಪಾದಕರು**

**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001. email : feedbackjanapada@gmail.com



Downloaded From: www.kpscvaani.com

# ನನ್ನ ಕಲ್ಪನೆಯ ಕರ್ನಾಟಕ





**ರಾಜ್ಯದಲ್ಲಿ ಇರುವ ವಿಫುಲ ಅವಕಾಶಗಳನ್ನು ಬಳಸಿಕೊಂಡು ಎಲ್ಲಾ ಕ್ಷೇತ್ರಗಳಲ್ಲೂ ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಳ್ಳುವ ಮೂಲಕ ಒಟ್ಟಾರೆ ಕರ್ನಾಟಕ ರಾಜ್ಯದ ಅಭಿವೃದ್ಧಿಗೆ ಮುಂದಾಗಿರುವ ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ತಮ್ಮ ಕಲ್ಪನೆಯ ಕರ್ನಾಟಕ ಹೇಗಿದೆ ಎಂಬುದನ್ನು ಸ್ವತಃ ಅವರೇ ಪ್ರಸ್ತುತ ಪಡಿಸಿದ್ದಾರೆ.**

**ಬಸವರಾಜ ಎಸ್ ಬೊಮ್ಮಾಯಿ**
ಮುಖ್ಯಮಂತ್ರಿಗಳು

ನಿರೂಪಣೆ–ವೈ.ಸಿ.ಸಂಪತ್ ಕುಮಾರ್

ಭಾರತದಲ್ಲಿರುವ ಯಾವುದೇ ರಾಜ್ಯವನ್ನು ನೋಡಿದಾಗ ಕರ್ನಾಟಕಕ್ಕೆ ತನ್ನದೇ ಆದ ವೈಶಿಷ್ಟ್ಯವಿದೆ. ಕರ್ನಾಟಕದ ನೆಲ, ಜಲ, ಜನ, ಇಲ್ಲಿ ಬೆಳೆಯುವ ಆಹಾರ ಧಾನ್ಯಗಳು, ಇಲ್ಲಿನ ವಿವಿಧ ಸಂಸ್ಕೃತಿ, ಕಲೆಗಳು ವಿಶಿಷ್ಟವಾಗಿವೆ. ಬೇರೆ ಬೇರೆ ಪ್ರಾಂತ್ಯಗಳಲ್ಲಿ ಹಂಚಿ ಹೋಗಿದ್ದ ಪ್ರದೇಶಗಳು ಒಂದಾಗಿ ಕರ್ನಾಟಕದ ಏಕೀಕರಣವಾಗಿದೆ. ಇದರಿಂದಾಗಿ ನಮ್ಮ ರಾಜ್ಯದ ಭಾಷೆಗಳು ಬಹಳಷ್ಟು ವಿಭಿನ್ನತೆಯನ್ನು ಹೊಂದಿದ್ದು, ಸಂಸ್ಕೃತಿಯಲ್ಲಿ ವೈವಿಧ್ಯ ಹೊಂದಿರುವುದನ್ನು ಕಾಣುತ್ತೇವೆ.

ಏಕೀಕರಣವಾದ ಮೇಲೆ ಕರ್ನಾಟಕ ರಾಜ್ಯದಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳು ಆಗಿವೆ, ಹಲವಾರು ಸಾಧನೆಗಳಾಗಿವೆ. ಸಾಧನೆಗಳಿಗೆ ಕಾರಣರಾದ ಸಾಧಕರನ್ನು ನಾವು ಕಂಡಿದ್ದೇವೆ. ಇಂತಹ ಕನ್ನಡದ ನೆಲದಲ್ಲಿ ಹುಟ್ಟಿರುವ ನಾವೇ ಅದೃಷ್ಟವಂತರು. ಸುಂದರವಾದ ನಮ್ಮ ಕನ್ನಡ ನಾಡನ್ನು  ಮುಂದಿನ ಜನಾಂಗಕ್ಕೆ ಮತ್ತಷ್ಟು ಸುಂದರವಾಗಿ ಕಟ್ಟುವಂತಹ ಕೆಲಸ ನಮ್ಮ ಮುಂದಿದೆ. ಕನ್ನಡ ನಾಡಲ್ಲಿ ಇರುವಂತಹ ವಾತವರಣ ಬೇರೆ ಯಾವ ರಾಜ್ಯದಲ್ಲೂ ಸಹ ಇಲ್ಲ. ಎಲ್ಲರನ್ನೂ ಒಳಗೊಂಡ ಮತ್ತು ಎಲ್ಲರನ್ನೂ ಅಪ್ಪಿಕೊಂಡಂತಹ ಸಂಸ್ಕೃತಿ ನಮ್ಮ ಕನ್ನಡ ನಾಡಿನದು. ಎಲ್ಲರಲ್ಲಿಯೂ ತಾನು ಒಂದಾಗುವಂತಹ ವಿಶಿಷ್ಟವಾದ ಸಂಸ್ಕೃತಿಯನ್ನು ಹೊಂದಿದೆ. ನಮ್ಮ ಕನ್ನಡ ನಾಡು ಬಹಳ ಹೃದಯ ವೈಶಾಲ್ಯದಿಂದ ಕೂಡಿರುವ ನಾಡು. ಪ್ರತಿಯೊಬ್ಬ ಕನ್ನಡಿಗನ ಮನಸ್ಸು ಬಹಳ ಹೃದಯ ವೈಶಾಲ್ಯದಿಂದ, ಸಹಾನುಭೂತಿಯಿಂದ ಕೂಡಿದೆ.

ಕೆಲವು ಸಂದರ್ಭಗಳಲ್ಲಿ ಈ ಹೃದಯ ವೈಶಾಲ್ಯವೇ ನಮ್ಮ ದೌರ್ಬಲ್ಯಕ್ಕೂ ಸಾಕ್ಷಿಯಾಗಿದೆ.



Downloaded From: www.kpscvaani.com



ನ್ಯಾಮತಿ ತಾಲ್ಲೂಕಿನ ಸುರಹೊನ್ನೆ ಗ್ರಾಮದಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಗೆ ಸ್ಥಳದಲ್ಲೇ ಅವರ ಸಮಸ್ಯೆಗೆ ಪರಿಹಾರ ವಿತರಣೆ ಮಾಡಿದ ಸಂದರ್ಭ.

ನಮ್ಮಲ್ಲಿರುವ ಸಹನಾ ಶಕ್ತಿಯಿಂದಾಗಿಯೇ ನಮಗೆ ತೊಂದರೆ ಉಂಟು ಮಾಡುವವರು ಇದ್ದಾರೆ. ಎಲ್ಲರನ್ನೂ ಪ್ರೀತಿಸುವ ಗುಣ ಈ ನಮ್ಮ ಕನ್ನಡ ನಾಡಲ್ಲಿದೆ. ಈ ಗುಣವನ್ನು ನಾವು ಬೇರೆ ಯಾವ ರಾಜ್ಯದಲ್ಲೂ ಕಾಣಲು ಸಾಧ್ಯವಿಲ್ಲ. ನಮ್ಮಲ್ಲಿ ಹಿರಿಯರು, ಗುರುಗಳು, ಪೂಜ್ಯರು, ಜ್ಞಾನಿಗಳಿಗೆ ಅಪಾರವಾದ ಗೌರವ ಪ್ರೀತಿ ತೋರುವ ಸಂಸ್ಕೃತಿ ಇದೆ.

ನಮ್ಮ ಕನ್ನಡ ನಾಡಿನ ಕಲೆ, ಸಂಸ್ಕೃತಿ, ಸಾಹಿತ್ಯ, ಜ್ಞಾನ, ವಿಜ್ಞಾನ ಎಲ್ಲವನ್ನು ನಾವು ಮುಂದಿನ ಪೀಳಿಗೆಗೂ ತೋರಿಸಿಕೊಡಬೇಕಾಗಿದೆ. ಈ ನಿಟ್ಟಿನಲ್ಲಿ ನಾವು ಶ್ರಮಿಸಬೇಕಾದ ಹಾದಿ ಬಹಳಷ್ಟಿದೆ.

ಕರ್ನಾಟಕದ ಕಲ್ಪನೆಯ ಬಗ್ಗೆ ಹೇಳಬೇಕಾದರೆ ಇಲ್ಲಿ ಹಲವಾರು ವಲಯಗಳನ್ನು ನಾವು ಮತ್ತಷ್ಟು ಅಭಿವೃದ್ಧಿ ಪಡಿಸಬೇಕಾಗಿದೆ. ಅವುಗಳ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತರಬೇಕಾಗಿದೆ.

## ಕೃಷಿ ವಲಯದ ಅಭಿವೃದ್ಧಿ :

ನಮ್ಮ ನಾಡಿನಲ್ಲಿ ಫಲವತ್ತಾದ ಭೂಮಿ ಜೊತೆಗೆ ಉತ್ತಮವಾದ ಹವಾಗುಣ ಇದೆ. ಬೇಸಿಗೆ, ಮಳೆ, ಚಳಿಗಾಲಕ್ಕೆ ಹೊಂದಿಕೊಂಡು ನಮ್ಮ ರಾಜ್ಯದಲ್ಲಿ ಬೆಳೆಗಳನ್ನು ಬೆಳೆಯಬಹುದು. ವೈಜ್ಞಾನಿಕ ತಾಂತ್ರಿಕತೆಯನ್ನು ಬಳಸಿಕೊಂಡಲ್ಲಿ ಅನೇಕ ತೋಟಗಾರಿಕಾ ಬೆಳೆಗಳು, ಕೃಷಿ ಉತ್ಪನ್ನಗಳನ್ನು ಎರಡು ಪಟ್ಟು ಬೆಳೆಯಬಹುದಾಗಿದೆ.

ಕರ್ನಾಟಕದಲ್ಲಿ ಹತ್ತು ಕೃಷಿ ಹವಾಮಾನ ವಲಯಗಳಿವೆ (Agro Climatic Zones). ಇಷ್ಟೊಂದು ಕೃಷಿ ಹವಮಾನ ವಲಯಗಳು ಬೇರೆ ಯಾವ ರಾಜ್ಯದಲ್ಲೂ ಸಹ ಇಲ್ಲ. ಈ ಹತ್ತು ಕೃಷಿ ಹವಾಮಾನ ವಲಯಗಳಲ್ಲಿ ನಾವು ವಿವಿಧ ತೋಟಗಾರಿಕೆ ಮತ್ತು ಕೃಷಿ ಬೆಳೆಗಳನ್ನು ಬೆಳೆಯಬಹುದಾಗಿದೆ.

ಕೃಷಿ ವಿಶ್ವ ವಿದ್ಯಾಲಯಗಳಲ್ಲಿ ಇದನ್ನು ಅಧ್ಯಯನ ಮಾಡಿ ರೈತರಿಗೆ ತಿಳಿಸಿಕೊಡುವಂತ ವ್ಯವಸ್ಥೆ ಆಗಬೇಕಾಗಿದೆ. ಯೋಚನೆ ಮತ್ತು ಯೋಜನೆಗಳು ಈ ಹತ್ತು ಕೃಷಿ ಹವಾಮಾನ ವಲಯಗಳಿಗೆ ಹೊಂದಿಕೊಳ್ಳುವಂತೆ ಮಾಡಿದಾಗ ಮಾತ್ರ ನಾವು ಕೃಷಿ ಕ್ಷೇತ್ರದಲ್ಲಿ ಯಶಸ್ಸನ್ನು ಕಾಣುತ್ತೇವೆ.

ನಾವು ಕೃಷಿ ಕ್ಷೇತ್ರಕ್ಕೆ ಬಹಳ ಒತ್ತು ನೀಡಿ ವೈಜ್ಞಾನಿಕವಾಗಿ ಬಳಸಿಕೊಳ್ಳಬೇಕಾಗಿದೆ. ಹೊಸ ಹೊಸ ತಂತ್ರಜ್ಞಾನಗಳನ್ನು ಅಳವಡಿಸಕೊಳ್ಳಬೇಕಾಗಿದೆ. ಇದಕ್ಕಾಗಿ ಸರ್ಕಾರ ಸಂಪೂರ್ಣ ಸಹಕಾರ ನೀಡಲಿದೆ. ಈ ನಿಟ್ಟಿನಲ್ಲಿ ಕೃಷಿ ವಲಯವನ್ನು ಮೊದಲನೆಯದಾಗಿ ಅಭಿವೃದ್ಧಿಯತ್ತ ಕೊಂಡೊಯ್ಯುವ ಕಲ್ಪನೆ ನನ್ನದು.

## ಜಲ ಸಂಪನ್ಮೂಲ ವಲಯ ಅಭಿವೃದ್ಧಿ :

ಕರ್ನಾಟಕದ ನಕ್ಷೆಯನ್ನು ನೋಡಿದರೆ, ಬೀದರ್‌ನಿಂದ ಹಿಡಿದು ಕೊಳ್ಳೇಗಾಲದವರೆಗೂ ಹಲವಾರು ನದಿಗಳು ಹರಿಯತ್ತಿವೆ. ಕಾರಂಜಾ



ಉಡುಪಿ ಜಿಲ್ಲೆಯ ಕುಂತಲ ನಗರದಲ್ಲಿ ಮಾಧವ ನಗರದಿಂದ ಬಂಟಕಲ್ಲು ರಸ್ತೆ ಅಭಿವೃದ್ಧಿಗೆ ಶಂಕುಸ್ಥಾಪನೆ ನೆರವೇರಿಸಿದ ಸಂದರ್ಭ.



Downloaded From: www.kpscvaani.com




**ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಆಯೋಜಿಸಿದ್ದ ಉದ್ಯಮಿಯಾಗು–ಉದ್ಯೋಗ ನೀಡು ಕಾರ್ಯಕ್ರಮವನ್ನು ಉದ್ಘಾಟಿಸಿದ ಸಂದರ್ಭ.**

**ಕರ್ನಾಟಕದಲ್ಲಿನ ಸಂಶೋಧನೆ ಮತ್ತು ಅಭಿವೃದ್ಧಿಯಿಂದಾಗಿ ಐ.ಟಿ, ಬಿ.ಟಿ ಬೆಳೆದಿದೆ. ಖಾಸಗಿ ವಲಯದವರು ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಅಗತ್ಯವಾದ ಮಾನವ ಶಕ್ತಿ ಬಳಸಿಕೊಂಡು, ಒಳ್ಳೆಯ ರೀತಿಯಲ್ಲಿ ಉಪಯೋಗ ಮಾಡಿಕೊಂಡು ಅವರು ಬೆಳೆದಿದ್ದಾರೆ. 180ಕ್ಕೂ ಹೆಚ್ಚು ಸಂಶೋಧನೆ ಮತ್ತು ಅಭಿವೃದ್ಧಿ ವಲಯಗಳು ಕರ್ನಾಟಕದಲ್ಲಿವೆ.**

ನದಿಯಿಂದ ಹಿಡಿದು, ತುಂಗಭದ್ರಾ, ಘಟಪ್ರಭಾ, ಮಲಪ್ರಭಾ, ದೂದ್‌ಗಂಗಾ, ಕೃಷ್ಣಾ, ಕಾವೇರಿ, ಪೆನ್ನಾರ್ ನದಿ, ಕಬಿನಿ ಹೀಗೆ ಹಲವಾರು ನದಿಗಳು, ಉಪನದಿಗಳು ಇವೆ. ಇವೆಲ್ಲವೂ ಪಶ್ಚಿಮದಿಂದ ಪೂರ್ವಕ್ಕೆ ಹರಿಯುವಂತಹ ನದಿಗಳು. ಆದರೆ ಈ ನದಿಗಳು ವ್ಯರ್ಥವಾಗಿ ನಮ್ಮ ಪಕ್ಕದ ರಾಜ್ಯಗಳಿಗೆ ಹರಿದು ಹೋಗುತ್ತಿವೆ. ಹಾಗಾಗಿ ನೈಸರ್ಗಿಕ ಜಲ ಸಂಪತ್ತನ್ನು ಸಮರ್ಪಕವಾಗಿ ಬಳಸುವಂತಹ ಚಿಂತನೆಯಾಗಬೇಕಾಗಿದೆ.

ಇದರಲ್ಲಿ ಸ್ವಲ್ಪ ಮಟ್ಟಿಗೆ ಯಶಸ್ಸು ಕಂಡಿದ್ದರೂ ಸಹ ಪೂರ್ಣ ಪ್ರಮಾಣದಲ್ಲಿ ಯಶಸ್ಸು ಕಾಣಲಾಗಿಲ್ಲ. ಈ ನೈಸರ್ಗಿಕ ಜಲ ಸಂಪತ್ತನ್ನು ನಾವು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಬೇಕಾಗಿದೆ. ಆಲಮಟ್ಟಿ ಅಣೆಕಟ್ಟನ್ನು 524 ಅಡಿ ಎತ್ತರಕ್ಕೆ ಏರಿಸಿದಲ್ಲಿ, ಸುಮಾರು ಹದಿಮೂರು ಲಕ್ಷ ಎಕರೆ ಭೂಮಿ ನೀರಾವರಿ ಭೂಮಿ ಆಗುತ್ತದೆ. ಇದರಿಂದ ಕರ್ನಾಟಕದ ಆರ್ಥಿಕತೆಯಲ್ಲಿ ಬಹಳ ಬದಲಾವಣೆಯನ್ನು ನಾವು ಕಾಣಬಹುದು. ಇಂತಹ ಯೋಜನೆಗಳನ್ನು ಪೂರ್ಣ ಮಾಡಬೇಕಿದೆ.

K8 ಸೀರಿಸ್ ಅಂತ ಕರೆಯಲ್ಪಡುವ ತುಂಗಾ ಮತ್ತು ಭದ್ರಾ ನದಿಗಳು ಮತ್ತು ಅದರ ಉಪ ನದಿಗಳು ಎಲ್ಲವೂ ಸೇರಿ ತುಂಗಭದ್ರಾ ಆಗುತ್ತದೆ. ಇದು ಸಹ ಪಶ್ಚಿಮದಿಂದ ಪೂರ್ವಕ್ಕೆ ಹರಿಯವ ನದಿ. ಇದು ಹರಿದು ಮುಂದೆ ಕೃಷ್ಣಾ ನದಿಯನ್ನು ಸೇರುತ್ತದೆ. ಈ ತುಂಗಭದ್ರಾ ನದಿ ತೀರದಿಂದ ಹಿಡಿದು, ಕೃಷ್ಣಾ ನದಿ ತೀರದವರೆಗೂ ಸುಮಾರು ಏಳು ಲಕ್ಷ ಎಕರೆ ಜಮೀನಿಗೆ ಹನಿ ನೀರಾವರಿ ಮಾಡುವ ಅವಕಾಶವಿದೆ. ಇದು ಸರಿಯಾಗಿ ಮಾಡಿದ್ದೇ ಆದಲ್ಲಿ, ಅಲ್ಪ ಪ್ರಮಾಣದ ನೀರಿನಲ್ಲಿ ದೊಡ್ಡ ಪ್ರಮಾಣದ ಬೆಳೆಯನ್ನು ಬೆಳೆಯಬಹುದಾಗಿದೆ. ವಿಶೇಷವಾಗಿ ತೋಟಗಾರಿಕೆ ಬೆಳೆಯನ್ನು ಬೆಳೆಯಬಹುದು. ಹೆಚ್ಚಿನ ಪ್ರಮಾಣದಲ್ಲಿ ಬೆಳೆದ ಬೆಳೆಗಳನ್ನು ಸಂರಕ್ಷಿಸಲು ಆಹಾರ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಬೇಕಾಗುತ್ತದೆ. ಈಗಿರುವ ಆರು ಸಂಸ್ಕರಣಾ ಘಟಕಗಳನ್ನು ಕನಿಷ್ಠ 100 ಸಂಸ್ಕರಣಾ ಘಟಕಗಳಿಗೆ ಏರಿಕೆ ಮಾಡಬೇಕು. ಆಗ ರೈತರು ಬೆಳೆದ ಬೆಳೆಗಳು ಸುರಕ್ಷಿತವಾಗಿರುವುದಲ್ಲದೆ, ಆ ಬೆಳೆಗಳಿಗೆ ಉತ್ತಮವಾದ ಬೆಲೆ ಸಿಗಲಿದೆ. ಇದರಿಂದ ಹಲವಾರು ಜನರಿಗೆ ಉದ್ಯೋಗ ಸಹ ಸಿಗಲಿದೆ. ನಿಸರ್ಗ ಸ್ನೇಹಿ ಉದ್ಯಮಗಳ ಸ್ಥಾಪಿಸುವ ಚಿಂತನೆ ನನ್ನ ಮುಂದಿದೆ.

## ಭದ್ರಾ ಮೇಲ್ದಂಡೆ ಯೋಜನೆ :

ಮಧ್ಯ ಕರ್ನಾಟಕದಲ್ಲಿ ನೀರಿನ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ಎರಡು ಮೂರು ಯೋಜನೆಗಳನ್ನು ಮಾಡಲಾಗುತ್ತಿದೆ. ಭದ್ರಾ ಮೇಲ್ದಂಡೆ ಯೋಜನೆ ಈಗ ಪ್ರಗತಿಯಲ್ಲಿದೆ. ಈ ಯೋಜನೆ ರಾಷ್ಟ್ರೀಯ ಯೋಜನೆಯಾಗಿ ಪರಿವರ್ತನೆಯಾಗಿದೆ. ಬರುವ ಎರಡು ಮೂರು ವರ್ಷಗಳಲ್ಲಿ ಅದರ ನೀರನ್ನು ನಾವು ಬಳಸಿಕೊಳ್ಳಬಹುದಾಗಿದೆ. ಇದರಿಂದ ಸ್ವಲ್ಪ ಮಟ್ಟಿಗೆ ನೀರಿನ ಸಮಸ್ಯೆಯನ್ನು ನೀಗಲಿದೆ.

## ಎತ್ತಿನ ಹೊಳೆ ಯೋಜನೆ :

ಹಲವಾರು ವರ್ಷಗಳಿಂದ ಕುಂಠಿತವಾಗಿದ್ದ ಈ ಯೋಜನೆಗೆ ಇನ್ನಷ್ಟು ವೇಗ ನೀಡುವ ಪ್ರಯತ್ನ ಮಾಡಲಾಗಿದೆ. ಪಶ್ಚಿಮಕ್ಕೆ ಹರಿಯುವ ನದಿಯ ನೀರನ್ನು ನಾವು ಪೂರ್ವಕ್ಕೆ ತಿರುಗಿಸಿ ಅತ್ಯಂತ ಕಡಿಮೆ ಮಳೆ ಬರುವ ಮತ್ತು ಅಂತರ್ಜಲ ಸಾವಿರಾರು ಅಡಿಗಳ ಆಳಕ್ಕೆ ಕುಸಿದಿರುವ ಪ್ರದೇಶಗಳಾದ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ನೀರು ಹರಿಸುವ ಕಾರ್ಯವಾಗಬೇಕಿದೆ.

ರಾಜ್ಯದ ಹಲವಾರು ಜಿಲ್ಲೆಗಳು ಪ್ರಗತಿ ಹೊಂದಿ ಒಂದು ಜಿಲ್ಲೆ ಪ್ರಗತಿ ಕಾಣದಿದ್ದಲ್ಲಿ ಅದನ್ನು ಸಂಪೂರ್ಣ ಪ್ರಗತಿ ಎನ್ನಲು ಸಾಧ್ಯವಿಲ್ಲ. ಹೀಗಾಗಿ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ನೀರಿನ ಕೊರತೆಯನ್ನು ನೀಗಿಸುವ ಪ್ರಯತ್ನ ಮಾಡಲಾಗುತ್ತಿದ್ದು, ಎತ್ತಿನಹೊಳೆ ಯೋಜನೆಗೆ ಹೆಚ್ಚಿನ ಒತ್ತು ನೀಡಿ ವೇಗವನ್ನು ಹೆಚ್ಚಿಸಲಾಗುತ್ತಿದೆ.

ದಕ್ಷಿಣ ಕರ್ನಾಟಕದಲ್ಲಿ ಕಾವೇರಿ ಜಲಾನಯನ ಪ್ರದೇಶದಲ್ಲಿನ ಕೆಲವು ಯೋಜನೆಗಳನ್ನು ಪೂರ್ಣಗೊಳಿಸುವ ಕೆಲಸ ಆಗಬೇಕಾಗಿದೆ. ಅದರ ಜೊತೆಗೆ ಮೈಸೂರು, ಹಾಸನ, ತುಮಕೂರು,



Downloaded From: www.kpscvaani.com

ಜಿಲ್ಲೆಗಳನ್ನು ಕೈಗಾರಿಕಾ ವಲಯಗಳನ್ನಾಗಿ ಅಭಿವೃದ್ಧಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

### ಬೆಂಗಳೂರಿನ ಅಭಿವೃದ್ಧಿಗೆ ಯೋಜನಾ ಬದ್ಧವಾದ ಬದಲಾವಣೆಗೆ ಆದ್ಯತೆ :

ವಿಶೇಷವಾಗಿ ಬೆಂಗಳೂರಿನ ಬಗ್ಗೆ ಚಿಂತಿಸಿದಾಗ ಬೆಂಗಳೂರು ಬಹಳಷ್ಟು ಬೆಳೆದಿದೆ. ಆದರೆ ಯೋಜನಾ ಬದ್ಧವಾಗಿಲ್ಲ. ಹೀಗಾಗಿ ಹಲವಾರು ಸವಲತ್ತುಗಳನ್ನು ಸಮರ್ಪಕವಾಗಿ ಸಕಾಲದಲ್ಲಿ ಮುಗಿಸಲು ಸಾಧ್ಯವಾಗುತ್ತಿಲ್ಲ. ಇದನ್ನು ಯೋಜನಾ ಬದ್ಧವಾಗಿ ಅಭಿವೃದ್ಧಿ ಮಾಡಲು ಬದಲಾವಣೆಯ ಅಗತ್ಯತೆ ಇದೆ.

ಹಾಗೆಯೇ ಬೆಂಗಳೂರಿನಲ್ಲಿ ದೊಡ್ಡ ಪ್ರಮಾಣದ ಹಣಕಾಸಿನ ಹೂಡಿಕೆ ಆಗಬೇಕಿದೆ. ಬೆಂಗಳೂರು ಅತಿ ಹೆಚ್ಚು ಆದಾಯ ತರುವ (Revenue) ನಗರವಾಗಿದೆ. ಅದನ್ನು ಅಷ್ಟೇ ಜವಾಬ್ದಾರಿಯಿಂದ ಮಹತ್ವ ನೀಡಿ ಅಭಿವೃದ್ಧಿ ಮಾಡಬೇಕಿದೆ.

ಬೆಂಗಳೂರಿನ ಸುತ್ತಮುತ್ತಲಿನ ಪ್ರದೇಶಗಳು ಔದ್ಯೋಗಿಕವಾಗಿ ಬೆಳೆಯುವ ಜೊತೆಗೆ ಮತ್ತಷ್ಟು ವಿಸ್ತರಣೆಯಾಗಬೇಕಾಗಿದೆ. ಬೆಂಗಳೂರು ಹೊರತುಪಡಿಸಿ, ಹೊರ ವಲಯಗಳಲ್ಲಿ, ಕರ್ನಾಟಕದ ವಿವಿಧ ಭಾಗಗಳಲ್ಲಿ ಔದ್ಯೋಗಿಕರಣವಾಗಬೇಕಾಗಿದೆ.

### ಕೈಗಾರಿಕೀಕರಣ:

ಕರ್ನಾಟಕಕ್ಕೆ ಪ್ರಾರಂಭದಲ್ಲಿ ಬಹಳಷ್ಟು ಅನುಕೂಲ ಇತ್ತು. ಸರ್. ಎಂ. ವಿಶ್ವೇಶ್ವರಯ್ಯನವರು ಹಲವಾರು ಕೈಗಾರಿಕೆಗಳನ್ನು ರಾಜ್ಯದಲ್ಲಿ ಪ್ರಾರಂಭ ಮಾಡಿದ್ದರು. ಅದು ಭದ್ರಾವತಿ ವಿ.ಐ.ಎಸ್.ಎಲ್ ನಿಂದ ಹಿಡಿದು, ಸಿಮೆಂಟ್ ಕಾರ್ಖಾನೆ, ಸೋಪ್ ಕಾರ್ಖಾನೆ, ಇಂಕ್ ತಯಾರಿಸುವಂತಹ ಕೈಗಾರಿಕೆಗಳು, ಕಾಗದ ಕಾರ್ಖಾನೆಗಳು ಹೀಗೆ ನಮ್ಮ ಅವಶ್ಯಕತೆಯ ವಸ್ತುಗಳೆಲ್ಲವನ್ನು ನಾವು ತಯಾರು ಮಾಡಬೇಕು ಎಂಬ ದೃಷ್ಟಿಯಿಂದ ಅವರು ಹಲವಾರು ಕೈಗಾರಿಕೆಗಳನ್ನು ಕರ್ನಾಟಕದಲ್ಲಿ ಸ್ಥಾಪನೆ ಮಾಡಿದ್ದರು.

ಇದರ ಜೊತೆಗೆ ಕೇಂದ್ರ ಸರ್ಕಾರ ಸಹ ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಹೆಚ್.ಎ.ಎಲ್, ಬಿ.ಎಚ್.ಇ.ಎಲ್, ಬಿ.ಎ.ಎಂ.ಎಲ್, ಹೆಚ್.ಎಂ.ಟಿ, ಎನ್.ಎ.ಎಲ್ ನಂತಹ ಸಾರ್ವಜನಿಕ ಉದ್ದಿಮೆಗಳನ್ನು ಸ್ಥಾಪಿಸಿತು. ಇದರಿಂದಾಗಿ ತಂತ್ರಜ್ಞಾನ (Technology) ನಮ್ಮಲ್ಲಿಗೆ ಬಂತು. ಇದು ಬೇರೆ ಯಾವ ರಾಜ್ಯಗಳಿಗೂ ಸಹ ಬಂದಿಲ್ಲ. ಇವುಗಳನ್ನು ನಾವು ಇವತ್ತಿನವರೆಗೂ ಸಹ ಬಳಕೆ ಮಾಡುತ್ತಿದ್ದೇವೆ. ನಮಗೆ ನುರಿತ ಮಾನವ ಶಕ್ತಿ, ಕಲಿಯುವ ಮತ್ತು ಕಲಿತ ಮಾನವ ಶಕ್ತಿ, ವೈಜ್ಞಾನಿಕ ಮಾನವ ಶಕ್ತಿ (Skilled Man Power, Learned Man power, Scientific Man Power) ಇದೆ. ಹೀಗಾಗಿ ವಿವಿಧ ಖಾಸಗಿ ವಲಯಗಳು ಇಲ್ಲಿ ದೊಡ್ಡ ಪ್ರಮಾಣದಲ್ಲಿ ಬಂಡವಾಳ ಹೂಡಿಕೆ ಮಾಡಿದ್ದಾರೆ.

ಇಲ್ಲಿನ ಸಂಶೋಧನೆ ಮತ್ತು ಅಭಿವೃದ್ಧಿಯಿಂದಾಗಿ ಐ.ಟಿ, ಬಿ.ಟಿ ಬೆಳೆದಿದೆ. ಖಾಸಗಿ ವಲಯದವರು ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಅಗತ್ಯವಾದ ಮಾನವ ಶಕ್ತಿ ಬಳಸಿಕೊಂಡು, ಒಳ್ಳೆಯ ರೀತಿಯಲ್ಲಿ ಉಪಯೋಗ ಮಾಡಿಕೊಂಡು ಅವರು ಬೆಳೆದಿದ್ದಾರೆ. 180ಕ್ಕೂ ಹೆಚ್ಚು ಸಂಶೋಧನೆ ಮತ್ತು ಅಭಿವೃದ್ಧಿ ವಲಯಗಳು ಕರ್ನಾಟಕದಲ್ಲಿವೆ.



ನವ ದೆಹಲಿಯಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾ ರಾಮನ್ ಅವರನ್ನು ಭೇಟಿಯಾಗಿ ವಿವಿಧ ವಿಷಯಗಳ ಕುರಿತು ಚರ್ಚಿಸಿದ ಸಂದರ್ಭ.



ದಾವಣಗೆರೆ ಜಿಲ್ಲೆಯ ನ್ಯಾಮತಿ ತಾಲ್ಲೂಕಿನಲ್ಲಿ ಜಿಲ್ಲಾಧಿಕಾರಿಕಗಳ ನಡೆ ಹಳ್ಳಿಗಳ ಕಡೆ ಮತ್ತು ಗ್ರಾಮ ವಾಸ್ತವ್ಯ ಕಾರ್ಯಕ್ರಮವನ್ನು ಉದ್ಘಾಟಿಸಿದ ಸಂದರ್ಭ.



Downloaded From: www.kpscvaani.com



ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಡಾ.ಮನ್ಸುಖ್ ಎಲ್ ಮಾಂಡವೀಯ ಅವರು ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿ ನೂತನ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಉದ್ಘಾಟಿಸಿದ ಸಂದರ್ಭ.




ಚಾಮರಾಜನಗರದ ಯಾಡಾಪುರ ಗ್ರಾಮದಲ್ಲಿ 450 ಹಾಸಿಗೆಯ ಬೋಧನಾ ಆಸ್ಪತ್ರೆಯನ್ನು ಗೌರವಾನ್ವಿತ ರಾಷ್ಟ್ರಪತಿಗಳು ಉದ್ಘಾಟಿಸಿದ ಸಂದರ್ಭ.

ವಿವಿಧ ಕ್ಷೇತ್ರಗಳಲ್ಲಿ ನಾವು ಊಹೆ ಮಾಡಲೂ ಸಾಧ್ಯವಿಲ್ಲದ ವಲಯಗಳಲ್ಲಿ ಜೆನೆಟಿಕ್ಸ್‌ನಿಂದ ಹಿಡಿದು ಬಾಹ್ಯಕಾಶದವರೆಗೂ ಅಂದರೆ, ಐ.ಟಿ, ಬಿ.ಟಿ, ಫಾರ್ಮಾ ಕೆಮಿಕಲ್ಸ್, ಆಹಾರ ಕಾರ್ಖಾನೆಗಳು ಸೇರಿದಂತೆ ಎಲ್ಲಾ ಕ್ಷೇತ್ರದಲ್ಲಿಯೂ ಸಹ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳು ಬೆಂಗಳೂರು ನಗರದಲ್ಲಿ ಬಹು ದೊಟ್ಟ ಪ್ರಮಾಣದಲ್ಲಿದೆ. ಇವುಗಳನ್ನು ಬಳಕೆ ಮಾಡಿಕೊಂಡು ಜನರ ಬದುಕಿಗೆ ಉಪಯೋಗವಾಗುವಂತಹ ರೀತಿಯಲ್ಲಿ ಕೈಗಾರಿಕೀಕರಣ ಮಾಡಬೇಕು ಎಂಬುದು ನನ್ನ ಕಲ್ಪನೆ.

ಕೈಗಾರಿಕೀಕರಣಕ್ಕಾಗಿಯೇ ಒಂದು ಹೊಸ ಸಂಶೋಧನೆ ಮತ್ತು ಅಭಿವೃದ್ಧಿ ನೀತಿ ಜಾರಿಗೆ ತರಲು ತೀರ್ಮಾನಿಸಲಾಗಿದೆ. ಈ ಸಂಬಂಧ ಹುಬ್ಬಳ್ಳಿಯ ಬಿ.ವಿ.ಬಿ ತಂತ್ರಜ್ಞಾನ ವಿವಿ ಯ ಕುಲಪತಿ ಡಾ. ಅಶೋಕ ಶೆಟ್ಟರ್ ಅವರನ್ನು ಟಾಸ್ಕ್‌ಫೋರ್ಸ್ ಮುಖ್ಯಸ್ಥರನ್ನಾಗಿ ಸಹ ನೇಮಿಸಿ ಆದೇಶಿಸಿದ್ದೇನೆ. ಇಂಡಿಯನ್ ಇನ್ಸಿಟಿಟ್ಯೂಟ್ ಆಫ್ ಸೈನ್ಸ್, ಸಿ.ಎಫ್.ಟಿ.ಆರ್.ಐ ಮತ್ತು ಖಾಸಗಿ ಸಂಸ್ಥೆಗಳ ಪ್ರತಿನಿಧಿಗಳನ್ನು ಇದಕ್ಕೆ ನೇಮಕ ಮಾಡಲಾಗುವುದು. ಆ ಮೂಲಕ ಒಂದು ಹೊಸ Research and Development ತರಬೇಕು ಎಂದು ಉದ್ದೇಶಿಸಲಾಗಿದೆ.

ಬೆಂಗಳೂರು ನಗರದಲ್ಲಿ ಈಗಾಲೇ ಹಲವು ಕಾರ್ಖಾನೆಗಳಿವೆ. ಹಾಗಾಗಿ ದಿನೇ ದಿನೇ ಬೆಂಗಳೂರಿನಲ್ಲಿ ಜನದಟ್ಟಣೆ, ವಾಹನ ದಟ್ಟಣೆ ಹೆಚ್ಚುತ್ತಿದೆ. ಇದರಿಂದ ವಾಯು ಮಾಲಿನ್ಯ ಉಂಟಾಗುತ್ತಿದೆ. ಇದನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಕೈಗಾರಿಕೆಗಳನ್ನು ಬೆಂಗಳೂರು ನಗರ ಬಿಟ್ಟು ದಾವಣಗೆರೆ, ಹುಬ್ಬಳ್ಳಿ – ಧಾರವಾಡ, ಶಿವಮೊಗ್ಗ, ಕಲಬುರಗಿ, ಬೀದರ್ ಇಂತಹ ನಗರಗಳಲ್ಲಿ ಸ್ಥಾಪನೆ ಮಾಡುವ ನಿಟ್ಟಿನಲ್ಲಿ ಯೋಚನೆ ಮಾಡಲಾಗುತ್ತಿದೆ.

ಇಂದಿನ ದಿನಗಳಲ್ಲಿ ವಾಯುಯಾನ ಬಹಳಷ್ಟು ಅಭಿವೃದ್ಧಿಯಾಗಲಿದೆ. ಮೊದಲು ಕೇವಲ ಬೆಂಗಳೂರು ಮತ್ತು ಮಂಗಳೂರಿನಲ್ಲಿ ಮಾತ್ರ ವಾಯುಯಾನ ಇತ್ತು. ಈಗ ಹುಬ್ಬಳ್ಳಿ, ಬೆಳಗಾವಿ, ಕಲಬುರಗಿ, ಮೈಸೂರು, ಬೀದರ್,



ಕೋವಿಡ್–19 ಸಾಂಕ್ರಾಮಿಕ ತಡೆಯುವಲ್ಲಿ ಅತ್ಯುತ್ತಮ ನಿರ್ವಹಣೆ ಮಾಡಿದ ನಮ್ಮ ರಾಜ್ಯಕ್ಕೆ ಇಂಡಿಯಾ ಟುಡೇ ಗ್ರೂಪ್‌ನ ಹೆಲ್ತ್ ಗಿರಿ ಪ್ರಶಸ್ತಿ ದೊರೆತ ಹಿನ್ನೆಲೆಯಲ್ಲಿ ಆರೋಗ್ಯ ಸಚಿವರು ಮುಖ್ಯಮಂತ್ರಿ ಅವರೊಂದಿಗೆ ಸಂತಸ ಹಂಚಿಕೊಂಡ ಸಂದರ್ಭ.

ಹಾಸನ, ವಿಜಯಪುರದಲ್ಲಿಯೂ ವಾಯುಯಾನ ಪ್ರಾರಂಭವಾಗುತ್ತಿದೆ. ವಿಜಯಪುರದಲ್ಲಿ ಕೆಲಸ ಪ್ರಗತಿಯಲ್ಲಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಕಾಮಗಾರಿ ಪೂರ್ಣಗೊಳ್ಳುತ್ತಿದೆ.

## ಕರಾವಳಿ ವಲಯದ ಅಭಿವೃದ್ಧಿ :

ನನ್ನ ಲಕ್ಷ್ಯ ಈಗ ನಮ್ಮ ಕರಾವಳಿ ತೀರದ (Coastal line) ಅಭಿವೃದ್ಧಿ ಮೇಲಿದೆ. ಸುಮಾರು 300 ಕಿ.ಮೀಗೂ ಹೆಚ್ಚು ಕರಾವಳಿ ತೀರದ ಉಪಯೋಗವನ್ನು ನಾವು ಮಾಡಬೇಕಾಗಿದೆ. ವಿಶೇಷವಾಗಿ ಕರಾವಳಿ ವಲಯದಲ್ಲಿ ಬಂದರು ಮತ್ತು ಪ್ರವಾಸೋದ್ಯಮದ ಅಭಿವೃದ್ಧಿ ಆಗಬೇಕಾಗಿದೆ. ಅದಕ್ಕೆ ಹೆಚ್ಚಿನ ಒತ್ತು ಕೊಡುವ ಚಿಂತನೆ ನಡೆಸಿದ್ದೇನೆ. ಬಂದರುಗಳ ಅಭಿವೃದ್ಧಿಗೆ ಶೀಘ್ರದಲ್ಲಿಯೇ ಪ್ರಮುಖ ತೀರ್ಮಾನಗಳನ್ನು ತೆಗೆದುಕೊಳ್ಳಲಾಗುವುದು.

ಬಂದರುಗಳು ಅಭಿವೃದ್ಧಿಯಾದರೆ ನಮ್ಮ ಆಮದು ಮತ್ತು ರಫ್ತು ಮತ್ತಷ್ಟು ವೃದ್ಧಿಯಾಗುತ್ತದೆ. Inland ಮತ್ತು Inter land ವಾಣಿಜ್ಯ ಚಟುವಟಿಕೆಗಳು ಸೇರಿದಂತೆ ಎಲ್ಲಾ ವಲಯಗಳು ಅಭಿವೃದ್ಧಿಯಾಗುತ್ತದೆ. ಇದರಿಂದ ನಾವು ರಾಜ್ಯದಲ್ಲಿ ಬಹಳಷ್ಟು ಬದಲಾವಣೆ ಕಾಣಲಿದ್ದೇವೆ.

ಹಲವಾರು ದೇಶಗಳಲ್ಲಿ ಒಂದು ಅಥವಾ ಎರಡು ಬಂದರುಗಳಿಂದ ಇಡೀ ದೇಶದ ಅರ್ಥಿಕತೆ ನಡೆಯುತ್ತಿದೆ. ಉದಾಹರಣೆಗೆ ಸಿಂಗಾಪುರ ದೇಶದ ಒಟ್ಟು ಆದಾಯದಲ್ಲಿ ಶೇಕಡ 60 ರಷ್ಟು ಆದಾಯ



Downloaded From: www.kpscvaani.com

ಬಂದರುಗಳಿಂದ ಬರುತ್ತಿದೆ. ಹಾಗಾಗಿ ಬಂದರುಗಳ ಅಭಿವೃದ್ಧಿಯನ್ನು ನಾವು ಕರ್ನಾಟಕದಲ್ಲಿ ಮಾಡಬೇಕಿದೆ.

## ಪ್ರವಾಸೋದ್ಯಮದ ಅಭಿವೃದ್ಧಿ :

ನಮ್ಮ ರಾಜ್ಯದಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿಗೆ ಹಲವಾರು ವಿಫುಲ ಅವಕಾಶಗಳಿವೆ. ಪ್ರಸಿದ್ಧ ದೇವಸ್ಥಾನಗಳು, ಪಾರಂಪರಿಕ ತಾಣಗಳು, ಕರಾವಳಿ ಪ್ರದೇಶ ಹೀಗೆ ವೈವಿಧ್ಯಮಯ ಪ್ರವಾಸಿ ತಾಣಗಳಿವೆ. ನಮ್ಮಲ್ಲಿ ಇರುವಂತಹ ಅದ್ಭುತವಾದ ವಾಸ್ತುಶಿಲ್ಪ (Architecture) ಬೇರೆ ಎಲ್ಲೂ ಇಲ್ಲ. ಅದನ್ನು ಸಹ ನಾವು ಪೂರ್ಣ ಪ್ರಮಾಣದಲ್ಲಿ ಉಪಯೋಗ ಮಾಡಿಕೊಳ್ಳಬೇಕಾಗಿದೆ. ಪ್ರವಾಸೋದ್ಯಮ ಕ್ಷೇತ್ರದಲ್ಲಿಯೂ ಹೆಚ್ಚಿನ ಉದ್ಯೋಗ ಸೃಷ್ಟಿ ಮಾಡಬಹುದಾಗಿದೆ.



ಎಫ್.ಐ.ಸಿ.ಸಿ.ಐ ನ ಮಹಿಳಾ ಘಟಕ ಆಯೋಜಿಸಿದ್ದ ಕರ್ನಾಟಕ–ಮಹಿಳಾ ಉದ್ಯಮಿಗಳ ಗಮ್ಯ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳು ಭಾಗವಹಿಸಿದ್ದ ಸಂದರ್ಭ.

## ಶಿಕ್ಷಣ ಕ್ಷೇತ್ರದ ಅಭಿವೃದ್ಧಿ :

ಇಂದು ಗ್ರಾಮೀಣ ಪ್ರದೇಶದಲ್ಲಿ ನಾವು ಶಿಕ್ಷಣವನ್ನು ಅಭಿವೃದ್ಧಿ ಪಡಿಸಬೇಕಿದೆ. ಉತ್ತಮವಾದ ಗುಣಮಟ್ಟದ ಶಿಕ್ಷಣವನ್ನು ಗ್ರಾಮೀಣ ಪ್ರದೇಶದಲ್ಲಿರುವ ವಿದ್ಯಾರ್ಥಿಗಳಿಗೂ ಸಹ ನೀಡಬೇಕು. ವಿಶೇಷವಾಗಿ ಕನ್ನಡ ಮತ್ತು ಇತರ ಭಾಷೆಗಳ ಕಲಿಕೆಗೆ ಒತ್ತು ನೀಡಬೇಕು.

ಗ್ರಾಮೀಣ ಮಕ್ಕಳಿಗೆ ಗಣಿತವನ್ನು ಒಳ್ಳೆಯ ರೀತಿಯಲ್ಲಿ ಕಲಿಸುವಂತಹದ್ದು ನಮ್ಮ ಮುಂದಿರುವ ಸವಾಲು. ಉನ್ನತ ಶಿಕ್ಷಣದಲ್ಲಿ ಬಹಳಷ್ಟು ಪ್ರಯೋಗವನ್ನು ಮಾಡಿ, ಕಲಿಯುವಂತಹ ವಿಧಾನವನ್ನು ತಿಳಿಸಿಕೊಡಬೇಕಾಗಿದೆ. ಅದರ ಜೊತೆ ಜೊತೆಗೆ ಪ್ರೌಢಶಾಲಾ ಮಟ್ಟದಲ್ಲಿ ತಾಂತ್ರಿಕ ಶಿಕ್ಷಣವನ್ನು ನೀಡಬೇಕೆಂಬುದು ನನ್ನ ಉದ್ದೇಶವಾಗಿದೆ.

ರೈತರ ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿ ವೇತನವನ್ನು ಈಗಾಗಲೇ ಪ್ರಾರಂಭಿಸಿದ್ದೇವೆ. ನಮ್ಮ ಗ್ರಾಮೀಣ ಭಾಗದ ಮಕ್ಕಳು ಆರ್ಥಿಕ ಸಂಕಷ್ಟದಿಂದ ವಿದ್ಯಾಭ್ಯಾಸವನ್ನು ಮಧ್ಯದಲ್ಲಿಯೇ ಬಿಡುವಂತಹದನ್ನು ನಾವು ಕಾಣುತ್ತಿದ್ದೇವೆ. ಹಾಗಾಗಿ ರೈತ ಮಕ್ಕಳ ವಿದ್ಯಾಭ್ಯಾಸಕ್ಕೆ ಉತ್ತೇಜನ ನೀಡಲು ಈ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.

## ಆರೋಗ್ಯ ಕ್ಷೇತ್ರದ ಅಭಿವೃದ್ಧಿ:

ಆರೋಗ್ಯ ವಲಯದಲ್ಲಿ ಬಹಳಷ್ಟು ಅಭಿವೃದ್ಧಿ ಮಾಡಬೇಕಾಗಿದೆ. ತಾಲ್ಲೂಕು ಮಟ್ಟದಲ್ಲಿ ಆಸ್ಪತ್ರೆಗಳ ಉನ್ನತೀಕರಣ ಮಾಡಬೇಕು. ಅಲ್ಲಿ ಡಿಜಿಟಲ್ ಎಂ.ಆರ್.ಐ, ಡಯಾಲಿಸಿಸ್‌ನಿಂದ ಹಿಡಿದು ಎಲ್ಲಾ ಕಾಯಿಲೆಗಳಿಗೂ ಚಿಕಿತ್ಸೆ ದೊರಕುವಂತೆ ಮಾಡಬೇಕು. ಎಲ್ಲಾ ಬಗೆಯ ವಿವಿಧ ಉಪಕರಣಗಳು ಸಹ ತಾಲ್ಲೂಕು ಆಸ್ಪತ್ರೆಗಳಲ್ಲಿ ದೊರಕುವಂತೆ ಮಾಡಬೇಕು. ಪ್ರತಿಯೊಂದು ಜಿಲ್ಲಾ ಆಸ್ಪತ್ರೆಗಳಲ್ಲಿ ಕ್ಯಾತ್‌ಲ್ಯಾಬ್ ವ್ಯವಸ್ಥೆ ಆಗಬೇಕು. ಹೃದಯ ಸಂಬಂಧಿತ ಎಲ್ಲಾ ಕಾಯಿಲೆಗಳಿಗೂ ಚಿಕಿತ್ಸೆ ಕೊಡುವಂತಹ ಸೌಲಭ್ಯವನ್ನು ಕಲ್ಪಿಸಬೇಕಿದೆ.

ಕ್ಯಾನ್ಸರ್ ಕಾಯಿಲೆಯನ್ನು ಗುಣಪಡಿಸುವಂತಹ ಎಲ್ಲಾ ರೀತಿಯ ವ್ಯವಸ್ಥೆಗಳು ದೊರಕುವಂತೆ ಆಗಬೇಕು. ಇದಕ್ಕೆ ಹೆಚ್ಚಿನ ಮಾನವ ಸಂಪನ್ಮೂಲವನ್ನು ಸಹ ನಾವು ಹೊಂದಿಸಿಕೊಳ್ಳಬೇಕು.

## ತಲಾ ಆದಾಯದ ವೃದ್ಧಿ:

ನಮ್ಮ ಒಟ್ಟು ಜಿಎಸ್‌ಡಿಪಿಗೆ ಕೊಡುಗೆ ನೀಡುತ್ತಿರುವವರು ಕೇವಲ ಶೇಕಡ 30 ರಷ್ಟು ಜನಸಂಖ್ಯೆ ಮಾತ್ರ. ಇದನ್ನು ಶೇಕಡ 60 ರಿಂದ 70 ರಷ್ಟು ಜನಸಂಖ್ಯೆಗೆ ಏರಿಸಬೇಕಿದೆ. ಎಲ್ಲರೂ ಆರ್ಥಿಕ



ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಂಬಂಧಪಟ್ಟಂತೆ ಜಲಸಂಪನ್ಮೂಲ ಸಚಿವರಾದ ಗೋವಿಂದ ಕಾರಜೋಳ ಸೇರಿದಂತೆ ಹಿರಿಯ ಅಧಿಕಾರಿಗಳ ಸಭೆ ನಡೆಸಿದ ಸಂದರ್ಭ.



Downloaded From: www.kpscvaani.com



ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಕಾರ್ಯಕ್ರಮದಲ್ಲಿ ಸಹಾಯವಾಣಿ ಲೋಕಾರ್ಪಣೆ ಮಾಡಿದ ಸಂದರ್ಭ.

ಚಟುವಟಿಕೆಗಳಲ್ಲಿ ಪಾಲ್ಗೊಂಡಲ್ಲಿ ಮಾತ್ರ ಆರ್ಥಿಕತೆಯ ಅಭಿವೃದ್ಧಿ ಸಾಧ್ಯ ಮತ್ತು ಆ ವ್ಯಕ್ತಿಯ ಆರ್ಥಿಕ ಅಭಿವೃದ್ಧಿಯೂ ಸಹ ಆಗುತ್ತದೆ.

ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿರುವ ಯುವಕರು, ಅದರಲ್ಲೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಅಲ್ಪ ಸಂಖ್ಯಾತ ವರ್ಗದ ದುಡಿಯುವಂತಹ ವರ್ಗದವರಿಗೆ ಅವಕಾಶಗಳನ್ನು ನೀಡಬೇಕು. ಅದರಲ್ಲೂ ಮಹಿಳೆಯರಿಗೆ ಅವಕಾಶಗಳನ್ನು ನೀಡುವುದರ ಮುಖಾಂತರ ಅವರು  ತಮ್ಮ ಸ್ವಂತ ಕಾಲಿನ ಮೇಲೆ ನಿಂತು ದುಡಿಮೆ ಮಾಡುವಂತೆ ಆಗಬೇಕು. ಅವರ ತಲಾ ಆದಾಯ ಹೆಚ್ಚಾದಾಗ ಮಾತ್ರ ನಮ್ಮ ರಾಜ್ಯದ ಆದಾಯ ಹೆಚ್ಚಾಗುತ್ತದೆ.

ಅತ್ಯಂತ ಕಡು ಬಡವರು ಮತ್ತು ಅನಾಥರ ರಕ್ಷಣೆ ಮಾಡುವ ಕೆಲಸ ಇಂದಿನ ದಿನಗಳಲ್ಲಿ ಆಗಬೇಕಿದೆ. ಜನತೆಗೆ ವಿಶೇಷವಾಗಿ ಸುರಕ್ಷತೆ ಕಲ್ಪಿಸುವುದು ಬಹಳ ಮುಖ್ಯ. ಬರುವ ದಿನಗಳಲ್ಲಿ ಈ ಬಗ್ಗೆ ಚರ್ಚೆ ಮಾಡಿ ವಿಶೇಷವಾದ ಯೋಜನೆಯನ್ನು ಜಾರಿಗೆ ತರುವ ಚಿಂತನೆ ಇದೆ.

## ಉದ್ಯೋಗ ನೀತಿ :

ನಮ್ಮ ಯುವಕರು ವಿದ್ಯಾವಂತರಾಗಿ ಕೈಯಲ್ಲಿ ಕೆಲಸ ಇಲ್ಲದಿದ್ದರೆ, ಬಹು ದೊಡ್ಡ ನಿರುದ್ಯೋಗ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ ಶಿಕ್ಷಣ ನೀತಿಯಲ್ಲಿ ಸಹ ವಿದ್ಯಾವಂತ ಯುವಕ/ಯುವತಿಯರಿಗೆ ಸರಿಯಾದ ಉದ್ಯೋಗ ರೂಪಿಸುವ ವ್ಯವಸ್ಥೆ ಮಾಡಲಾಗಿದೆ. ಅವರು ಸೃಜನಶೀಲರಾಗಿ, ಸ್ವಯಂ ಉದ್ಯೋಗ ಸೃಷ್ಟಿ ಮಾಡುವಂತಹ ಶಿಕ್ಷಣ ಅವರಲ್ಲಿ ಇರಬೇಕು ಎಂಬ ಚಿಂತನೆಯಿದೆ.

ಈ ದೃಷ್ಟಿಯಲ್ಲಿ ನಾನು ಕೂಡ ಒಂದು ಹೊಸ ಪರಿಕಲ್ಪನೆ ಇಟ್ಟುಕೊಂಡು ಉದ್ಯೋಗ ಕೇಂದ್ರಿತ ನೀತಿ (Employment Centric Policy) ಜಾರಿಗೆ ತರುವ  ಯೋಜನೆ ಮಾಡಿದ್ದೇನೆ. ಈಗ ಬಂಡವಾಳ ಕೇಂದ್ರಿತ ನೀತಿ (Investment Centric Policy) ಇದೆ. ಒಂದು ಸಾವಿರ ಕೋಟಿ ಬಂಡವಾಳ ಹೂಡಿ ಕೇವಲ ನೂರು ಜನರಿಗೆ ಕೆಲಸ ನೀಡಿದರೆ ನಿರುದ್ಯೋಗ ಸಮಸ್ಯೆ ಬಗೆಹರಿಸಲು ಸಾಧ್ಯವಿಲ್ಲ. ಆದ್ದರಿಂದ ಉದ್ಯೋಗ ಸೃಷ್ಟಿಗೆ ಇಂಬು ಕೊಡುವಂತ ಹೊಸ ಪರಿಕಲ್ಪನೆ ಮಾಡಲಾಗುತ್ತಿದೆ.

ಕರ್ನಾಟಕ ಆರ್ಥಿಕವಾಗಿ ಬೆಳೆಯಬೇಕು. ಶೈಕ್ಷಣಿಕವಾಗಿ ಬೆಳೆಯಬೇಕು. ಆರೋಗ್ಯಕರವಾಗಿ ಇರಬೇಕು ಮತ್ತು ಎಲ್ಲಾ ಮಕ್ಕಳು ವಿದ್ಯಾವಂತರಾಗಿ ಸಂಪೂರ್ಣವಾಗಿ ಎಲ್ಲರೂ ಸಹ  ಉದ್ಯೋಗಿಗಳಾಗಬೇಕು. ನಮ್ಮ ನೆಲದ ಸಂಸ್ಕೃತಿ, ಸಾಹಿತ್ಯ, ಭಾಷೆ, ಸಂಗೀತ ಇವೆಲ್ಲವೂ ಶ್ರೀಮಂತವಾಗಬೇಕು. ಇಲ್ಲದಿದ್ದರೆ ರಾಜ್ಯದ ಅಭಿವೃದ್ಧಿ ಪರಿಪೂರ್ಣವಾಗುವುದಿಲ್ಲ.

ನಿಗದಿತ ಸಮಯದಲ್ಲಿ, ದೀರ್ಘಾವಧಿಯಲ್ಲಿ ಮಾಡುವ ಕೆಲಸಗಳು ಒಂದೆಡೆಯಾದರೆ, ಇನ್ನೂ ಅಲ್ಪಾವಧಿಯಲ್ಲಿ ಬೇಗ ಫಲಿತಾಂಶ ದೊರಕಿಸಿಕೊಡುವ ಯೋಜನೆಗಳಿಗೆ ಹೆಚ್ಚು ಒತ್ತು ನೀಡಬೇಕಿದೆ.

ನನ್ನ ಕಲ್ಪನೆಯ ಕರ್ನಾಟಕವು ಸಂಪದ್ಭರಿತವಾದ, ಸುರಕ್ಷತೆ ಇರುವ ಮತ್ತು ವಿಫುಲ ಅವಕಾಶಗಳಿರುವಂತಹ ಒಂದು ಸುಂದರ ನಾಡಾಗಿ ಮತ್ತು ಎಲ್ಲರನ್ನೂ ಆಕರ್ಷಿಸುವ ಸುಂದರ ಬೀಡಾಗಬೇಕು. ಕನ್ನಡಕ್ಕೆ ಕನ್ನಡಿಗರಿಗೆ ಅಗ್ರಸ್ಥಾನ ಸಿಗಬೇಕು. ಈ ಎಲ್ಲಾ ವಿಚಾರಗಳು ಇದಕ್ಕೆ ಸಹಕಾರಿಯಾಗುತ್ತದೆ ಎಂದು ನಾನು ಪ್ರಬಲವಾಗಿ ನಂಬಿದ್ದೇನೆ.

ಕಟ್ಟ ಕಡೆಯ ವ್ಯಕ್ತಿಗೂ ಉದ್ಯೋಗ ದೊರೆಯುವಂತಾಗಬೇಕು. ನಿಸರ್ಗ ಸ್ನೇಹಿಯಾದ ಉದ್ಯೋಗಗಳು ಸ್ಥಾಪನೆಯಾಗಬೇಕು. ಒಳ್ಳೆಯ ಬೆಳೆ ಬೆಳೆಯಲು ಉತ್ತೇಜನ, ಜಲ ಸಂಪನ್ಮೂಲ ಬಳಸಿಕೊಳ್ಳುವ ಯೋಜನೆಗಳು, ಶಿಕ್ಷಣಕ್ಕೆ ಒತ್ತು, ತಲಾ ಆದಾಯ ಹೆಚ್ಚಳ, ಪ್ರತಿಭೆಗಳನ್ನು, ವಿಜ್ಞಾನಿಗಳನ್ನು ರೂಪಿಸುವ ಪ್ರಯತ್ನ, ಕ್ರೀಡೆಗೆ ಪ್ರೋತ್ಸಾಹ ಹೀಗೆ ಹಲಾವರು ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಳ್ಳುವ ಮೂಲಕ ಕರ್ನಾಟಕವನ್ನು ಅಭಿವೃದ್ಧಿ ಪಡಿಸಬೇಕೆಂಬುದು ನನ್ನ ಪರಿಕಲ್ಪನೆಯಾಗಿದೆ.

**(ಕರ್ನಾಟಕ ಮಾಧ್ಯಮ ಅಕಾಡೆಮಿ ಹಮ್ಮಿಕೊಂಡಿದ್ದ ಕ್ಲಬ್‌ಹೌಸ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಅವರು ರಾಜ್ಯದ ಅಭಿವೃದ್ಧಿಯ ಕುರಿತು ಹಂಚಿಕೊಂಡ ತಮ್ಮ ಮನದಾಳದ ಮಾತುಗಳು. )**



Downloaded From: www.kpscvaani.com




# ರಾಜ್ಯದ 31ನೇ ಜಿಲ್ಲೆ ವಿಜಯನಗರ

**ವಿಜಯನಗರ ಸಾಮ್ರಾಜ್ಯದ ವೈಭವ ಮರುಕಳಿಸುವ ಸಂಕಲ್ಪದೊಂದಿಗೆ ನೂತನ ವಿಜಯನಗರ ಜಿಲ್ಲೆಯು ಗಾಂಧಿ ಜಯಂತಿಯ ದಿನವಾದ ಅಕ್ಟೋಬರ್ 2ರಂದು ಸಂಜೆ ಸೂರ್ಯ ಅಸ್ತಂಗತವಾಗುತ್ತಿದ್ದಂತೆ ವಿಧ್ಯುಕ್ತವಾಗಿ ರಾಜ್ಯದ 31 ನೇ ಜಿಲ್ಲೆಯಾಗಿ ಉದಯವಾಯಿತು.**

ರಾಮಲಿಂಗಪ್ಪ ಬಿ.ಕೆ.

ಪಂಪ-ವಿರೂಪಾಕ್ಷನ ನೆಲೆಬೀಡಾದ ಹಂಪಿಯ ಗತವೈಭವ ಸಾರುವ ಈ ಐತಿಹಾಸಿಕ ನೆಲದ ವಿದ್ಯಾರಣ್ಯರ ಭವ್ಯ ವೇದಿಕೆಯಲ್ಲಿ ನೂತನ ವಿಜಯನಗರ ಜಿಲ್ಲೆಗೆ ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಮತ್ತು ನಿಕಟಪೂರ್ವ ಮುಖ್ಯಮಂತ್ರಿಗಳು ಹಾಗೂ ಜಿಲ್ಲೆಯ ಘೋಷಣೆಗೆ ಕಾರಣೀಕರ್ತರಾದ ಬಿ.ಎಸ್.ಯಡಿಯೂರಪ್ಪ ಅವರು ಚಾಲನೆ ನೀಡಿದರು.

ಈ ಐತಿಹಾಸಿಕ ಘಟನೆಗೆ ಈ ನೆಲದ ಮಠಾಧೀಶರು, ಜಿಲ್ಲೆಯ ಉಸ್ತುವಾರಿ ಸಚಿವರಾದ ಆನಂದ ಸಿಂಗ್, ಇತರೆ ಸಚಿವರುಗಳು, ಜನಪ್ರತಿನಿಧಿಗಳು, ಅಧಿಕಾರಿಗಳು ಹಾಗೂ ಆರು ತಾಲ್ಲೂಕುಗಳ ಜನತೆ ಸಾಕ್ಷಿಯಾದರು. ಆ



Downloaded From: www.kpscvaani.com

ಮೂಲಕ ಬಳ್ಳಾರಿ ಜಿಲ್ಲೆಯ ಪಶ್ಚಿಮ ತಾಲ್ಲೂಕುಗಳ ಬಹುದಿನಗಳ ಕೂಗಿಗೆ ಕೊನೆಗೂ ಸ್ಪಂದನೆ ದೊರೆತಂತ್ತಾಗಿದೆ.

ನೂತನ ಜಿಲ್ಲೆಯನ್ನು ಉದ್ಘಾಟಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅಭಿವೃದ್ಧಿಗಾಗಿಯೇ ವಿಜಯನಗರ ಜಿಲ್ಲೆಯು ಜನ್ಮ ತಳೆದಿದೆ. ಪ್ರಜಾಪ್ರಭುತ್ವದಲ್ಲಿ ವಿಜಯನಗರ ವೈಭವ ಮತ್ತೊಮ್ಮೆ ಸ್ಥಾಪನೆಯಾದಂತ್ತಾಗಿದೆ, ಮತ್ತು ವಿಜಯನಗರ ಸಾಮ್ರಾಜ್ಯದ ಗತವೈಭವ, ಸಮಗ್ರ ಕರ್ನಾಟಕದ ಅಭಿವೃದ್ಧಿಗೆ ಪ್ರೇರಣೆಯಾಗಿದೆ ಎಂದು ಬಣ್ಣಿಸಿದರು.

ಹೋರಾಟದ ಕಿಚ್ಚನ್ನು ಹೊತ್ತಿಸುವ ಗುಣ ಈ ಮಣ್ಣಿಗಿದೆ. ತುಂಗಾಭದ್ರಾ ತೀರದಲ್ಲಿ ಭಕ್ತರು ಕೂಗಿದರೆ, ಸಾಕ್ಷಾತ್ ವಿರೂಪಾಕ್ಷೇಶ್ವರ ಪ್ರತ್ಯಕ್ಷವಾಗುವ ಪವಿತ್ರ ಸನ್ನಿಧಾನವಿದು. ಅಂದು ವಜ್ರ, ವೈಡೂರ್ಯಗಳನ್ನು ಹಂಪಿಯ ಬೀದಿಯಲ್ಲಿ ಮಾರಾಟ ಮಾಡಲಾಗುತ್ತಿತ್ತು. ಹಂಪಿಯ ಪ್ರತಿ ಕಲ್ಲು ಒಂದೊಂದು ಕಥೆ ಹೇಳುತ್ತವೆ. ಇಂತಹ ವೈವಿಧ್ಯತೆ ಒಳಗೊಂಡು ರಚನೆಯಾಗಿರುವ

**ನಮ್ಮ ಸರಕಾರ ಬರೀ ಜಿಲ್ಲೆಯನ್ನು ಘೋಷಣೆ ಮಾಡಿ ಸುಮ್ಮನೆ ಕುಳಿತುಕೊಳ್ಳುವುದಿಲ್ಲ. ಜಿಲ್ಲೆ ಘೋಷಣೆ ಮಾಡುವುದರ ಜೊತೆಗೆ ಇಡೀ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಕ್ರಮಕೈಗೊಳ್ಳಲಿದೆ. ವಿಜಯನಗರ ಜಿಲ್ಲೆ ಮಾದರಿ ಜಿಲ್ಲೆಯನ್ನಾಗಿಸುವ ನಿಟ್ಟಿನಲ್ಲಿ ಅನುದಾನ ಒದಗಿಸುವುದು ಸೇರಿದಂತೆ ಎಲ್ಲ ರೀತಿಯ ಕ್ರಮಗಳನ್ನು ನಮ್ಮ ಸರಕಾರ ಕೈಗೊಳ್ಳಲಿದೆ. ಜಿಲ್ಲೆಯ ಆರು ತಾಲ್ಲೂಕಿನ ಪ್ರತಿ ಗ್ರಾಮದ ಕಟ್ಟಕಡೆಯ ಕುಟುಂಬವೂ ನೆಮ್ಮದಿಯಿಂದ ಬದುಕಲು ಎಲ್ಲ ರೀತಿಯ ಸೌಲಭ್ಯಗಳನ್ನು ಕೊಡುವ ಸಂಕಲ್ಪ ಮಾಡಿದ್ದೇವೆ.**

**–ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿಗಳು
ಕರ್ನಾಟಕ ಸರಕಾರ

## ವಿಜಯನಗರ ಜಿಲ್ಲೆಯ ಅಭಿವೃದ್ಧಿಯ ದಿಕ್ಸೂಚಿ 'ವಿಜಯಸ್ತಂಭ'



ವಿಜಯನಗರ ವಿಜಯ ಸ್ತಂಭವು ನೂತನವಾಗಿ ರಚಿಸಲಾದ ವಿಜಯನಗರ ಜಿಲ್ಲೆಯಲ್ಲಿ ನಿರ್ಮಿಸಲಾಗುವ ಒಂದು ಸ್ಮಾರಕವಾಗಿದೆ. ಇದರ ನಮೂನೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ನಿಕಟಪೂರ್ವ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಅನಾವರಣಗೊಳಿಸಿದರು.

ಈ ವಿಜಯ ಸ್ತಂಭವನ್ನು ಮುಂದಿನ ದಿನಗಳಲ್ಲಿ ನಿರ್ಮಿಸಲಾಗುವ ನೂತನ ಜಿಲ್ಲಾಡಳಿತ ಸಂಕೀರ್ಣದ ಪ್ರಮುಖ ಸ್ಥಳದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ. ಈ ಸ್ತಂಭದ ವಿನ್ಯಾಸವನ್ನು ವಿಜಯನಗರ ವಾಸ್ತುಶಿಲ್ಪದ ಅಂಶಗಳನ್ನು ಅಳವಡಿಸಿಕೊಂಡು ನೂತನ ಜಿಲ್ಲೆಯ ಯೋಜಿತ ಲಕ್ಷಣಗಳನ್ನು ಬಿಂಬಿಸುವಂತೆ ರೂಪಿಸಲಾಗಿದೆ. ಈ ಜಿಲ್ಲೆಯ ಆರು ತಾಲ್ಲೂಕುಗಳನ್ನು ಪ್ರತಿನಿಧಿಸಲು ಈ ಸ್ತಂಭಕ್ಕೆ ಷಡ್ಭುಜಾಕೃತಿಯನ್ನು ನೀಡಲಾಗಿದೆ. ಅದರಂತೆ ಈ ಸ್ತಂಭದ ಷಡ್ಭುಜಾಕೃತಿಯು ವಿಜಯನಗರ ಜಿಲ್ಲೆಯ ಆರು ತಾಲ್ಲೂಕುಗಳನ್ನು (ಹೊಸಪೇಟೆ, ಹೂವಿನಹಡಗಲಿ, ಹರಪನಹಳ್ಳಿ, ಕೊಟ್ಟೂರು, ಕೂಡ್ಲಿಗಿ ಮತ್ತು ಹಗರಿಬೊಮ್ಮನಹಳ್ಳಿ) ಬಿಂಬಿಸುತ್ತದೆ.

ಈ ಸ್ತಂಭದ ತಳಹದಿಯಲ್ಲಿ ಕಾಣುವ ಆನೆಗಳ ಸಾಲು ಈ ಜಿಲ್ಲೆಯ ಅಭಿವೃದ್ಧಿಯು ಒಂದು ಬಲಿಷ್ಠ ತಳಹದಿಯ ಮೇಲೆ ರೂಪುಗೊಳ್ಳುವುದನ್ನು ಸೂಚಿಸುತ್ತದೆ. ಆನೆ ಸಾಲಿನ ತಳಹದಿಯ ಮೇಲೆ ರೂಪಿಸಲಾದ ವಿಶಾಲ ಷಡ್ಭುಜಾಕೃತಿಯಲ್ಲಿ ಕಾಣುವ ಸ್ತಂಭಾಕೃತಿಗಳು, ಹಂಪಿಯ ಪ್ರಸಿದ್ಧ ವಿಜಯ ವಿಠಲ ದೇವಸ್ಥಾನದಲ್ಲಿ ಕಾಣುವ ಚಿಕಣಿ ಸ್ತಂಭಗಳನ್ನು ಹೋಲುತ್ತಾ, ಬಲಿಷ್ಠ ತಳಹದಿಯೊಂದಿಗೆ ಈ ಜಿಲ್ಲೆಯ ಎಲ್ಲಾ ಊರುಗಳು ಸುಂದರವಾಗಿ ರೂಪಗೊಳ್ಳುವುದನ್ನು ಸೂಚಿಸುತ್ತದೆ. ಇದರ ಮೇಲೆ ವಿನ್ಯಾಸಿಸಲಾದ ಆರು ಕಮಾನುಗಳು, ಈ ಜಿಲ್ಲೆಯ ಆರು ತಾಲ್ಲೂಕುಗಳು ಜಿಲ್ಲೆಯ ಅಭಿವೃದ್ಧಿಗಾಗಿ ಹೂಡಿಕೆದಾರರನ್ನು ಸ್ವಾಗತಿಸುವಂತೆ ಮತ್ತು ಜಿಲ್ಲೆಯ ಅಭಿವೃದ್ಧಿಯ ಜೊತೆಗೆ ಅವರೂ ಬೆಳೆಯುವ ಅವಕಾಶವಿರವುದನ್ನು ತೋರಿಸುತ್ತದೆ.

ಈ ಸ್ತಂಭದ ಷಡ್ಭುಜಾಕೃತಿಯ ಮಧ್ಯಭಾಗವು ಅಭಿವೃದ್ಧಿಯ ಆರು ಮುಖ್ಯ ಅಂಶಗಳನ್ನು  ಸಾರ್ವಜನಿಕ ಸೌಕರ್ಯ, ಅರ್ಥ ವ್ಯವಸ್ಥೆ, ಆಡಳಿತ, ವಿಶ್ವಾಸಾರ್ಹತೆ, ಪರಿಸರ ಮತ್ತು ಸದಾವಕಾಶಗಳನ್ನು ಬಿಂಬಿಸುತ್ತದೆ. ಜಿಲ್ಲೆಯ ಅಭಿವೃದ್ಧಿ ಕಾರ್ಯಗಳನ್ನು ಎಲ್ಲಾ ನಿಟ್ಟಿನಲ್ಲಿ ಕೈಗೊಳ್ಳಲಾಗುವುದನ್ನು ಸೂಚಿಸಲು ಮತ್ತು ಅಭಿವೃದ್ಧಿ ಚಟುವಟಿಕೆಗಳು ಈ ಜಿಲ್ಲೆಯನ್ನು ಬಹು ಎತ್ತರಕ್ಕೆ ಕೊಂಡೊಯ್ಯಲಿವೆ ಎಂದು ಸೂಚಿಸಲು ವಿನ್ಯಾಸಿಸಲಾಗಿದೆ. ಸ್ತಂಭದ ಮೇಲ್ಭಾಗದಲ್ಲಿ ವಿಜಯನಗರ ವಾಸ್ತುಶಿಲ್ಪ ಕಟ್ಟಡಗಳಲ್ಲಿ ಕಾಣಿಸುವಂತ ಮೂಲ (ವಿವಿಧ ಪ್ರಾಣಿಗಳ ದೇಹಗಳ ಮಿಶ್ರಿತ ಕಾಲ್ಪನಿಕ ಪ್ರಾಣಿಯ) ಶಿಲ್ಪಗಳನ್ನು ನಾಲ್ಕು ದಿಕ್ಕುಗಳಲ್ಲಿ ರೂಪಿಸಲಾಗಿದೆ.

ಈ ಸ್ತಂಭದ ವಿವಿಧ ಭಾಗಗಳನ್ನು ಸದೃಢ ಜೋಡಣೆಗಳೊಂದಿಗೆ (ಬಂಧಗಳು) ಒಂದು ಸುಂದರ ಸಮಗ್ರ ಸ್ಮಾರಕವಾಗಿ ವಿನ್ಯಾಪಿಸಲಾಗಿದ್ದು, ಇದು ಜಿಲ್ಲೆಯಲ್ಲಿ ವಿವಿಧ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳು ಸಂಘಟಿಸಿ, ಜಿಲ್ಲೆಯು ಒಂದು ಸಂಯೋಜಿತ ಹಾಗೂ ಅನುಕರಣೀಯ ಜಿಲ್ಲೆಯಾಗಲಿದೆ ಎಂದು ತೋರಿಸುತ್ತದೆ. ಈ ವಿಜಯ ಸ್ತಂಭವು ಇಂದು ಮತ್ತು ಭವಿಷ್ಯದಲ್ಲಿ ಜಿಲ್ಲೆಯ ಅಭಿವೃದ್ಧಿ ಪಥವನ್ನು ಮತ್ತು ಅಭಿವೃದ್ಧಿ ಮಾರ್ಗದಲ್ಲಿ ಜಿಲ್ಲೆಯ ಜನರು ವಿಜಯಶಾಲಿಯಾಗುವುದನ್ನು ತನ್ನ ಒಟ್ಟಾರೆ ಆಕೃತಿಯಿಂದ ಬಿಂಬಿಸುತ್ತದೆ.



Downloaded From: www.kpscvaani.com



ವಿಜಯನಗರ ಜಿಲ್ಲೆಯ 6 ತಾಲ್ಲೂಕುಗಳ ಜನತೆ ನೆಮ್ಮದಿಯಿಂದ ಬದುಕಲು ಎಲ್ಲ ರೀತಿಯ ಸೌಕರ್ಯ ಒದಗಿಸುವುದರ ಜತೆಗೆ ಸಮಗ್ರ ಅಭಿವೃದ್ಧಿ ಮಾಡಲಾಗುವುದು ಎಂದು ಭರವಸೆ ನೀಡಿದರು.

ಈಗಾಗಲೇ 643 ಕೋಟಿ ರೂ.ವೆಚ್ಚದಲ್ಲಿ ರಾಜ್ಯದ ಪ್ರವಾಸೋದ್ಯಮ ಅಭಿವೃದ್ಧಿ ಪಡಿಸಲು ಯೋಜನೆ ರೂಪಿಸಲಾಗಿದೆ. ವಿಶಾಲವಾದ 83 ಎಕರೆ ಪ್ರದೇಶದಲ್ಲಿ ಜಿಲ್ಲಾಡಳಿತ ಭವನ ನಿರ್ಮಿಸಲಾಗುತ್ತಿದೆ. ಅಲ್ಲದೆ, ಸಂಪೂರ್ಣ ಜಿಲ್ಲಾ ಕೇಂದ್ರ ಮಾಡಲು ಎಲ್ಲ ರೀತಿಯ ಹಣಕಾಸಿನ ನೆರವು ಒದಗಿಸಲಾಗುವುದು. ವಿವಿಧ ಕಚೇರಿ ತೆರೆಯಲು ಈಗಾಗಲೇ 50 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಇನ್ನುಳಿದ ಅನುದಾನವನ್ನು ಹಂತ ಹಂತವಾಗಿ ಬಿಡುಗಡೆ ಮಾಡಲಾಗುವುದು. ವಿಜಯನಗರ ಜಿಲ್ಲೆಯಲ್ಲಿ ಅಭಿವೃದ್ಧಿ ಪರ್ವ ಆರಂಭವಾಗಲಿದ್ದು, ನಾಗಾಲೋಟ ನಿರಂತರವಾಗಿರಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ನಿಕಟಪೂರ್ವ ಮುಖ್ಯಮಂತ್ರಿಗಳು ವಿಜಯನಗರ ಜಿಲ್ಲೆಯ ಘೋಷಣೆಯ ಕಾರಣೀಕರ್ತರೂ ಆಗಿರುವ ಬಿ.ಎಸ್.ಯಡಿಯೂರಪ್ಪ ಅವರು ಮಾತನಾಡಿ ತುಂಗಾಭದ್ರ ಜಲಾಶಯದ ನಾಡು, ಸಿರಿವಂತಿಗೆ ಹೊಂದಿರುವ ಬೀಡು, ದೇವಾಲಯಗಳ ಒಡಲು, ನಾಡಿಗೆ ಅನ್ನ ನೀಡುವ ಭೂಮಿ, ಇತಿಹಾಸದಲ್ಲಿ ತನ್ನದೇ ಆದ ವೈಭವ ಸಾರಿದ ಸ್ಥಳ ವಿಜಯನಗರ. ಈ ತುಂಗಾಭದ್ರ ನಾಡಿನಲ್ಲಿ ಸಂಭ್ರಮದ ಗತವೈಭವ ಮರುಕಳಿಸಿದೆ. ಇದೊಂದು ಸುವರ್ಣಾಕ್ಷರಗಳಲ್ಲಿ ಬರೆದಿಡುವ ದಿನವಾಗಿದೆ. ಮುಂದಿನ ದಿನಗಳಲ್ಲಿ ಆರು ತಾಲ್ಲೂಕುಗಳ ಸಂಪೂರ್ಣ ಬೆಳವಣಿಗೆಗೆ ಸರ್ಕಾರ ಪಣತೊಟ್ಟಿದೆ ಎಂದರು.

### ವಿಜಯನಗರ ಅಭಿವೃದ್ಧಿಗೆ ಮುನ್ನುಡಿ ಬರೆದ ರಾಜ್ಯ ಸರಕಾರ..

ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ರಾಜ್ಯದ 31ನೇ ಜಿಲ್ಲೆ ವಿಜಯನಗರದಲ್ಲಿ ರೂ.464 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ಮತ್ತು ಶಂಕುಸ್ಥಾಪನೆ ನೆರವೇರಿಸುವುದರ ಮೂಲಕ ರಾಜ್ಯ ಸರಕಾರ ಮುನ್ನುಡಿ ಬರೆದಿದೆ.

**ವಿಜಯನಗರ ಜಿಲ್ಲೆ ರಚನೆಯಾಗಿರುವ ಈ ದಿನ ನಮ್ಮೆಲ್ಲರ ಜೀವನದಲ್ಲಿ ನೆನಪಿಡುವ ಸುದಿನ ಹಾಗೂ ಸುವರ್ಣಾಕ್ಷರಗಳಲ್ಲಿ ಬರೆದಿಡುವ ದಿನ. ಇತಿಹಾಸದ ಪುಟದಲ್ಲಿ ದಾಖಲಾಗುವಂತೆ ಮಾಡಲು ಕಾರಣಕರ್ತರಾದವರು ನಿಕಟಪೂರ್ವ ಮುಖ್ಯಮಂತ್ರಿ ಬಿ.ಎಸ್ .ಯಡಿಯೂರಪ್ಪ ಅವರು. ಮಹಾತ್ಮ ಗಾಂಧಿ, ಲಾಲ್ ಬಹದ್ದೂರ್ ಶಾಸ್ತ್ರಿ ಅಂತಹ ಮಹಾನ್ ನಾಯಕರ ಜನ್ಮದಿನದಂದು ವಿಜಯನಗರ ಉದ್ಘಾಟನೆ ಆಗಿದೆ. ವಿಜಯನಗರ ಸಾಮ್ರಾಜ್ಯಕ್ಕೆ ಪುರಾತನ ಇತಿಹಾಸವಿದೆ. ಅನೇಕ ರಾಜವಂಶಸ್ಥರು ಆಳ್ವಿಕೆ ಮಾಡಿದ್ದಾರೆ. ಹಕ್ಕ-ಬುಕ್ಕರು ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಮಾಡಿದ್ದಾರೆ. ಇಂತಹ ಇತಿಹಾಸವುಳ್ಳ ವಿಜಯನಗರ ಜಿಲ್ಲೆ ಅಸ್ತಿತ್ವಕ್ಕೆ ಬರಲು ಕಾರಣರಾದ ಪ್ರತಿಯೊಬ್ಬರಿಗೂ ವಿಜಯನಗರ ಜಿಲ್ಲೆಯ ಜನರ ಪರವಾಗಿ ಕೃತಜ್ಞತೆ ಸಲ್ಲಿಸುವೆ.**

**ಆನಂದಸಿಂಗ್**
ಸಚಿವರು, ಪ್ರವಾಸೋದ್ಯಮ, ಪರಿಸರ, ಜೀವಿಶಾಸ್ತ್ರ ಹಾಗೂ ಜಿಲ್ಲಾ ಉಸ್ತುವಾರಿ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆ



Downloaded From: www.kpscvaani.com

# ವಿಜಯನಗರ ಜಿಲ್ಲೆಯ ವಿವರ

**ಕರ್ನಾಟಕದ 31ನೇ ಜಿಲ್ಲೆಯಾಗಿ ವಿಜಯನಗರ ಜಿಲ್ಲೆ ಫೆಬ್ರುವರಿ ತಿಂಗಳಿನಿಂದ ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿದೆ. ಈ ಮೂಲಕ ಬಳ್ಳಾರಿ ಜಿಲ್ಲೆಯ ಪಶ್ಚಿಮ ತಾಲ್ಲೂಕುಗಳ ಬಹುದಿನಗಳ ಕೂಗಿಗೆ ಸರಕಾರ ಸ್ಪಂದಿಸಿದೆ. 2020ರ ಡಿಸೆಂಬರ್ 14ರಂದು ಕರಡು ಅಧಿಸೂಚನೆ ಹೊರಡಿಸಿ ಆಕ್ಷೇಪಣೆ ಹಾಗೂ ಸಲಹೆಗಳನ್ನು ಆಹ್ವಾನಿಸಲಾಗಿತ್ತು. ಈ ಸಲಹೆಗಳನ್ನು ಪರಿಗಣಿಸಿ ಬಳ್ಳಾರಿ ಜಿಲ್ಲೆಯ ಸರಹದ್ದುಗಳನ್ನು ಮಾರ್ಪಡಿಸಿ ವಿಜಯನಗರ ಜಿಲ್ಲೆ ರಚಿಸಲಾಗಿದೆ.**

**ಬಳ್ಳಾರಿ ಜಿಲ್ಲೆಯ 11 ತಾಲ್ಲೂಕುಗಳ ಪೈಕಿ ಆರು ತಾಲ್ಲೂಕುಗಳಾದ ಹೊಸಪೇಟೆ, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಕೊಟ್ಟೂರು, ಹೂವಿನಹಡಗಲಿ, ಹರಪನಹಳ್ಳಿ ಒಳಗೊಂಡು ಹೊಸಪೇಟೆ ಕೇಂದ್ರಸ್ಥಾನವಾಗಿ ವಿಜಯನಗರ ಜಿಲ್ಲೆ ಅಸ್ತಿತ್ವಕ್ಕೆ ಬಂದಿದೆ. ವಿಜಯನಗರ ಜಿಲ್ಲೆಯಲ್ಲಿ ಒಟ್ಟು 18 ಹೋಬಳಿಗಳಿದ್ದು, 1392750 ಭೌಗೋಳಿಕ ವಿಸ್ತೀರ್ಣ(ಎಕರೆಗಳಲ್ಲಿ) ಹೊಂದಿದೆ. 2011ರ ಜನಸಂಖ್ಯೆ ಅನುಸಾರ 13,53,628 ಜನಸಂಖ್ಯೆ ಹೊಂದಿದೆ.**

**ನೂತನ ಜಿಲ್ಲೆಯ ಜಿಲ್ಲಾ ಕೇಂದ್ರವು ಕೂಡ್ಲಿಗಿ ತಾಲ್ಲೂಕಿನ ಜನರಿಗೆ 46, ಹಗರಿಬೊಮ್ಮನಹಳ್ಳಿ ತಾಲ್ಲೂಕಿಗೆ 39, ಹೂವಿನಹಡಗಲಿ ತಾಲ್ಲೂಕಿಗೆ 72, ಹರಪನಹಳ್ಳಿ ತಾಲ್ಲೂಕಿಗೆ 80 ಮತ್ತು ಕೊಟ್ಟೂರು ತಾಲ್ಲೂಕಿನ ಜನರಿಗೆ 65 ಕಿ.ಮೀ ಮಾತ್ರ ದೂರ ಆಗಲಿದೆ. ವಿಜಯನಗರ ನೂತನ ಜಿಲ್ಲೆಯಲ್ಲಿ ಐತಿಹಾಸಿಕ ಹಂಪಿ ಸ್ಮಾರಕಗಳು, ಮೂರು ರಾಜ್ಯಗಳ ಜೀವನಾಡಿಯಾಗಿರುವ ತುಂಗಾಭದ್ರಾ ಜಲಾಶಯ, ಅಟಲ್ ಬಿಹಾರಿ ವಾಜಪೇಯಿ ಪ್ರಾಣಿಸಂಗ್ರಹಾಲಯ, ಗುಡೇಕೋಟೆ ಕರಡಿ ಧಾಮ, ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಅಂಕಸಮುದ್ರ ಪಕ್ಷಿಧಾಮ, ಹಡಗಲಿ ತಾಲ್ಲೂಕಿನ ಮೈಲಾರಲಿಂಗೇಶ್ವರ, ಕುರವತ್ತಿ, ಕೂಡ್ಲಗಿ ತಾಲ್ಲೂಕಿನ ಗಾಣಗಟ್ಟ ಮಾಯಮ್ಮ, ಕೊಟ್ಟೂರು ತಾಲ್ಲೂಕಿನ ಕೊಟ್ಟೂರೇಶ್ವರ ದೇವಸ್ಥಾನ, ಉಜ್ಜಯಿನಿ ಪೀಠ ಸೇರಿದಂತೆ ಐತಿಹಾಸಿಕ ಸ್ಮಾರಕಗಳು, ಧಾರ್ಮಿಕ ಕ್ಷೇತ್ರಗಳಿವೆ. ಶೈಕ್ಷಣಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿಜಯನಗರ ಜಿಲ್ಲೆಯಲ್ಲಿ 1163 ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳು, 84 ಪದವಿ ಪೂರ್ವ ಕಾಲೇಜುಗಳು, 14 ಪದವಿ ಕಾಲೇಜುಗಳು, 1 ಎಂಜಿನಿಯರಿಂಗ್ ಕಾಲೇಜು, 6 ಪಾಲಿಟೆಕ್ನಿಕ್ ಮತ್ತು 1 ಭಾರತೀಯ ವೈದ್ಯ ಪದ್ಧತಿ ಕಾಲೇಜು ಇದೆ.**

**ಒಟ್ಟಿನಲ್ಲಿ ನೂತನ ವಿಜಯನಗರ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದೆ. ನೂತನ ಜಿಲ್ಲೆಯ ಉದ್ಘಾಟನೆಯನ್ನು ಅತ್ಯಂತ ವೈಭವದಿಂದ ಆಚರಣೆ ಮಾಡಿರುವ ಸರ್ಕಾರವು ವಿಜಯನಗರ ಜಿಲ್ಲೆಯು ಸಮೃದ್ಧ ನಗರವಾಗಿ ಬೆಳೆಯುವಂತೆ ಮಾಡಲು ಹಲವಾರು ಯೋಜನೆಗಳನ್ನು ರೂಪಿಸುತ್ತಿದೆ. ಆ ಮೂಲಕ ವಿಜಯನಗರವನ್ನು ಮಾದರಿ ಜಿಲ್ಲೆಯಾಗಿ ಅಭಿವೃದ್ಧಿ ಹೊಂದಲಿದೆ.**



ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ನಿರ್ಮಿಸಲಾಗಿರುವ ವಿದ್ಯಾರಣ್ಯ ವೇದಿಕೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಿಜಯನಗರ ಜಿಲ್ಲೆಯನ್ನು ಅಧಿಕೃತವಾಗಿ ಉದ್ಘಾಟಿಸುವುದರ ಜೊತೆಗೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ಮತ್ತು ವಿವಿಧ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸುವ ಮೂಲಕ ಈ ಪ್ರದೇಶಗಳ ಮೇಲಿನ ಅಭಿವೃದ್ಧಿಗೆ ಸಂಬಂಧಿಸಿದಂತೆ ಸರಕಾರ ತನ್ನ ಬದ್ಧತೆಯನ್ನು ಪ್ರದರ್ಶಿಸಿದೆ.

ಈ ಸಂಭ್ರಮದ ಕ್ಷಣಕ್ಕೆ ನಾಡಿನ ಮಠಾಧೀಶರು, ಸಚಿವರು, ಶಾಸಕರು, ನಿಗಮ ಮಂಡಳಿಗಳ ಅಧ್ಯಕ್ಷರುಗಳು, ಜನಪ್ರತಿನಿಧಿಗಳು ಮತ್ತು ಅಸಂಖ್ಯಾತ ಜನರು ಸಾಕ್ಷಿಯಾದರು.

11 ಕೋಟಿ ರೂ ವೆಚ್ಚದ ಹೊಸಪೇಟೆ ನಗರದ ಹಂಪಿ ರಸ್ತೆಯಿಂದ ಬಳ್ಳಾರಿ ರಸ್ತೆಯವರೆಗೆ (ಬೈಪಾಸ್ ) ಚತುಷ್ಪಥ ರಸ್ತೆ ನಿರ್ಮಾಣ, 11 ಕೋಟಿ ರೂ ವೆಚ್ಚದಲ್ಲಿ ಹೊಸಪೇಟೆ ನಗರದಲ್ಲಿ ನಿರ್ಮಾಣ ಮಾಡಲಾಗಿರುವ 60 ಹಾಸಿಗೆಯ ಹೆರಿಗೆ ಮತ್ತು ಮಕ್ಕಳ ಆಸ್ಪತ್ರೆ ಉದ್ಘಾಟನೆ, 10 ಕೋಟಿ ರೂ ವೆಚ್ಚದಲ್ಲಿ ಆಗಿರುವ ಹೊಸಪೇಟೆಯ ಜೋಳದರಾಶಿ ಗುಡ್ಡದ ಅಭಿವೃದ್ಧಿ ಕಾಮಗಾರಿ, 10 ಕೋಟಿ ರೂ ವೆಚ್ಚದಲ್ಲಿ ಹೊಸಪೇಟೆ ತಾಲೂಕು ಹಂಪಿಯಿಂದ ವಯಾ ಕಮಲಾಪುರ ಪಾಪಿನಾಯಕನಹಳ್ಳಿವರೆಗೆ ರಸ್ತೆ ಅಭಿವೃದ್ಧಿ, 9 ಕೋಟಿ ವೆಚ್ಚದಲ್ಲಿ ಹೊಸಪೇಟೆ ನಗರದಲ್ಲಿರುವ ನಿರ್ಮಾಣ ಮಾಡಲಾಗಿರುವ ಅಲ್ಪ ಸಂಖ್ಯಾತರ ಮೊರಾರ್ಜಿ ವಸತಿ ಶಾಲೆಗೆ, 8.25 ಕೋಟಿ ರೂ ವೆಚ್ಚದಲ್ಲಿ ಹೊಸಪೇಟೆ ತಾಲೂಕು ವೆಂಕಟಾಪುರದಿಂದ ಪಂಪಾ ವಿದ್ಯಾಪೀಠ ವಿಜಯನಗರ ಕ್ಷೇತ್ರದ ಕೊನೆಯ ಭಾಗದವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಗಳು ಸೇರಿದಂತೆ ರೂ. 99.66 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿರುವ 24 ಕಾಮಗಾರಿಗಳಿಗೆ ಚಾಲನೆ ನೀಡಿದರು.

ಹೊಸಪೇಟೆ ನಗರದ ಹೊಸಪೇಟೆ– ಬಳ್ಳಾರಿ ರಸ್ತೆ ಎಚ್‌ಎಲ್‌ಸಿ ಕಾಲುವೆಯಿಂದ ಇಂಗಳಗಿ ಕ್ರಾಸ್‌ವರೆಗೆ ರಸ್ತೆ ಅಭಿವೃದ್ಧಿಯನ್ನು 30 ಕೋಟಿ ರೂ. ವೆಚ್ಚದಲ್ಲಿ, ಹಂಪಿ ರಸ್ತೆಯ ಅನಂತಶಯನ ಗುಡಿಯಿಂದ ಕಮಲಾಪುರದವರೆಗೆ ಚತುಷ್ಪಥ ರಸ್ತೆ ಅಭಿವೃದ್ಧಿಯನ್ನು 30 ಕೋಟಿ ರೂ.ವೆಚ್ಚದಲ್ಲಿ, ಹೊಸಪೇಟೆ ನಗರದಲ್ಲಿ 250 ಹಾಸಿಗೆ ಆಸ್ಪತ್ರೆ



Downloaded From: www.kpscvaani.com



ನಿರ್ಮಾಣವನ್ನು 105 ಕೋಟಿ ರೂ. ವೆಚ್ಚದಲ್ಲಿ, ಹೊಸಪೇಟೆ ನಗರದ ಅನಂತಶಯನ ಗುಡಿ ರೈಲ್ವೆ ಗೇಟ್‌ಗೆ ಮೇಲು ಸೇತುವೆ ನಿರ್ಮಾಣವನ್ನು 26 ಕೋಟಿ ರೂ.ವೆಚ್ಚದಲ್ಲಿ, ಹೊಸಪೇಟೆ ನಗರದಲ್ಲಿ ಬಾಲಕಿಯರ ಶಾಲೆ, ಬಾಲಕಿಯರ ಪದವಿ ಪೂರ್ವ ಕಾಲೇಜ್ ಮತ್ತು ಮುನ್ಸಿಪಲ್ ಬಾಲಕಿಯರ ಶಾಲೆ ಕಟ್ಟಡ ನಿರ್ಮಾಣಕ್ಕೆ 24 ಕೋಟಿ ರೂ. ಸೇರಿದಂತೆ ರೂ.364.22 ಕೋಟಿ ವೆಚ್ಚದ ಒಟ್ಟು 55 ಕಾಮಗಾರಿಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶಂಕುಸ್ಥಾಪನೆ ನೆರವೇರಿಸಿದರು.

**ನಾಡಿನ ವೈವಿಧ್ಯಮಯ ಕಲಾ ಶ್ರೀಮಂತಿಕೆ ಅನಾವರಣ...**

ವಿಜಯನಗರ ಸಾಮ್ರಾಜ್ಯವಾಳಿದ ನೆಲದಲ್ಲಿ ಮತ್ತೆ ವಿಜಯನಗರ ವೈಭವ ಮರುಕಳಿಸಿದೆ. ಹೌದು ವಿಜಯನಗರ ಜಿಲ್ಲಾ ಉತ್ಸವ ಮತ್ತು ವಿಜಯನಗರ ಜಿಲ್ಲಾ ಉದ್ಘಾಟನಾ ಸಮಾರಂಭದ ನಿಮಿತ್ತ ವಡಕರಾಯ ದೇವಸ್ಥಾನದಿಂದ ರಥಬೀದಿಯಲ್ಲಿ ನಡೆದ ವಿಜಯನಗರ ವೈಭವ ಮೆರವಣಿಗೆಯು ನಾಡಿನ ವೈವಿಧ್ಯಮಯ ಕಲೆಯನ್ನು ಅನಾವರಣಗೊಳಿಸಿತು. ಇದರ ಜೊತೆಗೆ ವಿಜಯನಗರ ಅರಸರ ದರ್ಬಾರ್ ಅನ್ನು ಕೂಡ ನೆನಪಿಸಿತು.

ವಡಕರಾಯ ದೇವಸ್ಥಾನದಿಂದ ಆರಂಭವಾಗಿ ಜಿಲ್ಲಾ ಕ್ರೀಡಾಂಗಣದವರೆಗೆ ವಿಜಯನಗರ ವೈಭವ ಕಾರ್ಯಕ್ರಮ ನಡೆಯಿತು. ಸ್ಥಳೀಯ ಕಲಾವಿದರು, ಹೊರ ಜಿಲ್ಲೆ ಹಾಗೂ ಹೊರ ರಾಜ್ಯದ 80 ಕಲಾತಂಡಗಳ ಕಲಾವಿದರು ಈ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಪೂಜಾಕುಣಿತ, ಪಟದಕುಣಿತ, ಗೊಂಬೆಕುಣಿತ, ಚಿಟ್ಟೆ ಮೇಳ, ಚಂಡಿವಾದ್ಯ, ಮಹಿಳಾ ಕಾಳಿ ಕುಣಿತ, ಮಹಿಳಾ ವೀರಗಾಸೆ, ನಗಾರಿ ವಾದ್ಯ, ಕಂಸಾಳೆ,

**ಸರ್ಕಾರಿ ಸೇವೆವಾಗಿ ಸಾರ್ವಜನಿಕರು ಪರದಾಡುವುದನ್ನು ತಪ್ಪಿಸುವ ಉದ್ದೇಶಕ್ಕಾಗಿ ಜಿಲ್ಲೆಯ ವಿಭಜನೆ ಮಾಡಲಾಗಿದೆ. ದೇಹ ಎರಡಾದರೂ ಆತ್ಮ ಒಂದೇ ಎನ್ನುವಂತೆ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಜನರು ಸದಾ ಕಾಲ ಅಣ್ಣ ತಮ್ಮಂದಿರಂತೆ ಬಾಳೋಣ. ಜನರ ಸೇವೆಗಾಗಿ, ಜನರ ಒಳಿತಿಗಾಗಿ ಸರ್ಕಾರ ಶ್ರಮಿಸಲಿದೆ. 35 ವರ್ಷಗಳ ನಿರಂತರ ಹೋರಾಟದ ಫಲವಾಗಿ ಇಂದು ವಿಜಯನಗರ ಜಿಲ್ಲೆಯ ಉದಯವಾಗಿದೆ. ಮುಂದಿನ ದಿನಗಳಲ್ಲಿ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದೆ. ವಿಜಯನಗರದ ಹಿಂದಿನ ಇತಿಹಾಸ, ವೈಭವ ಮತ್ತೆ ಮರುಕಳಿಸುವಂತಾಗಲಿ.**

**–ಬಿ.ಶ್ರೀರಾಮುಲು**
ಸಚಿವರು, ಸಾರಿಗೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ







Downloaded From: www.kpscvaani.com





ಜಗ್ಗಲಗಿ ಕುಣಿತ, ಡೊಳ್ಳು ಕುಣಿತ, ಕರಡಿ ಮಜಲು, ಹುಲಿವೇಷ, ಝಾಂಜ್ ಮೇಳ, ನವಿಲು ಕುಣಿತ, ತಾಷರಂಡೋಲ್, ಹಲಗೆ ವಾದನ, ವೀರಗಾಸೆ, ನಾದಸ್ವರ ವಾದನ, ಕಹಳೆ ವಾದನ, ಹಗಲುವೇಷಗಾರಿಕೆ, ಬೇಡರ ವೇಷ, ಉರುಮೆ ವಾದ್ಯ, ಕೋಲಾಟ, ಗೊರವರಕುಣಿತ ಸೇರಿದಂತೆ ವಿವಿಧ ಕಲಾ ಪ್ರಕಾರಗಳನ್ನು ಕಲಾವಿದರು ಪ್ರದರ್ಶಿಸಿದರು.


ಈ ಮೆರವಣಿಗೆಯಲ್ಲಿ ಕಲಾತಂಡಗಳ ಜೊತೆಗೆ ಆಳ್ವಾಸ್ ಸಂಸ್ಥೆಯ ಕಲಾವಿದರು ಭಾಗವಹಿಸಿ, ತಮ್ಮ ಕಲಾ ಪ್ರತಿಭೆಯನ್ನು ಪ್ರದರ್ಶಿಸಿದರು. ತೆರೆದ ವಾಹನದಲ್ಲಿ ಸಿಂಗರಿಸಿದ ನಾಡದೇವತೆ ಭುವನೇಶ್ವರಿ ಮೂರ್ತಿಯು ಎಲ್ಲರ ಗಮನ ಸೆಳೆಯಿತು. ಇನ್ನೊಂದು ತೆರೆದ ವಾಹನದಲ್ಲಿ ವಿಜಯನಗರ ಸಾಮ್ರಾಜ್ಯದ ಶ್ರೇಷ್ಠ ಅರಸ ಶ್ರೀಕೃಷ್ಣದೇವರಾಯ ಮತ್ತು ಅವರ ದರ್ಬಾರ್ (ಆಸ್ಥಾನ ಕವಿಗಳು), ವಿದ್ಯಾರಣ್ಯ ಶ್ರೀಗಳು ಹಾಗೂ ಇನ್ನಿತರ ಪ್ರಮುಖರ ವೇಷಧಾರಿಗಳು ಗಮನ ಸೆಳೆದರು. ಇದೇ ಸಂದರ್ಭದಲ್ಲಿ ನಡೆದ ಎತ್ತಿನ ಬಂಡಿಗಳ ಮೆರವಣಿಗೆ ಕೂಡ ಗಮನ ಸೆಳೆಯಿತು.

**ಸಾಂಸ್ಕೃತಿಕ ಕಲಾವೈಭವ**

ವಿಜಯನಗರ ಉತ್ಸವ ಮತ್ತು ವಿಜಯನಗರ ಜಿಲ್ಲಾ ಉದ್ಘಾಟನಾ ಕಾರ್ಯಕ್ರಮದ ನಿಮಿತ್ತ ಎರಡು ದಿನಗಳ ಕಾಲ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು ಜನಮನಸೂರೆಗೊಂಡವು. ಸಾಂಸ್ಕೃತಿಕ ಕಲಾವೈಭವಕ್ಕೆ ಜನರು ತಲೆದೂಗಿದರು.

ಉತ್ಸವದ ಮೊದಲ ದಿನ ಖ್ಯಾತ ಕಲಾವಿದರು ಸಮಾಗಮಗೊಂಡು ತಮ್ಮ ಕಲೆಯನ್ನು ಪ್ರದರ್ಶಿಸಿದರು. ಖ್ಯಾತ ಡ್ರಮ್ಮರ್ ಶಿವಮಣಿ, ರಾಜೇಶ ವೈದ್ಯ ಮತ್ತು ಪ್ರವೀಣ್ ಗೋಡ್ಖಿಂಡಿ ಅವರು ರಾತ್ರಿ ನಡೆಸಿಕೊಟ್ಟ ವಾದ್ಯ ಸಂಗೀತ, ಸಂಗೀತ ಪ್ರೇಮಿಗಳಿಗೆ ರಸದೌತಣ ಉಣಬಡಿಸುವಲ್ಲಿ ಯಶಸ್ವಿಯಾಯಿತು. 'ಸೋಜುಗದ ಸೂಜಿ ಮಲ್ಲಿಗೆ' ಖ್ಯಾತಿಯ ಅನನ್ಯ ಭಟ್ ಅವರು ಲಘು ಶಾಸ್ತ್ರೀಯ ಮತ್ತು ಭಕ್ತಿ ಸಂಗೀತವನ್ನು ಪ್ರಸ್ತುತ ಪಡಿಸಿದರು. ಕಲಾವಿದರಾದ ಕಲಾವತಿ ದಯಾನಂದ ಅವರಿಂದ ಲಘು ಶಾಸ್ತ್ರೀಯ ಮತ್ತು ಚಲನಚಿತ್ರಗೀತೆಗಳು, ಶೆಹನಾಜ್ ಅಖ್ತರ್ ಅವರು ದೇಶಭಕ್ತಿ ಆಶು ಗೀತೆಗಳನ್ನು ಪ್ರಸ್ತುತ ಪಡಿಸುವ ಮೂಲಕ ನೆರೆದ ಜನರ ಮನಗೆದ್ದರು.

ನಿರುಪಮ ಮತ್ತು ರಾಜೇಂದ್ರ ಅವರ ಅಭಿನವ ನೃತ್ಯ ಕಂಪನಿ ಅವರು ಪ್ರಸ್ತುತ ಪಡಿಸಿದ ವಿಜಯನಗರ ವೈಭವ-ನೃತ್ಯ ರೂಪಕ ನೋಡುಗರನ್ನು ಮಂತ್ರಮುಗ್ಧರನ್ನಾಗಿಸಿತು. ಖ್ಯಾತ ಗಾಯಕಿ ಎಂ.ಡಿ.ಪಲ್ಲವಿ ಅವರು ದೇಶಭಕ್ತಿಗೀತೆಗಳು ಮತ್ತು ಭಾವಗೀತೆಗಳನ್ನು ಪ್ರಸ್ತುತ ಪಡಿಸಿದರು. ಸವಿತಾ ಅವರು ಜಾನಪದ ಗೀತೆಗಳನ್ನು ಪ್ರಸ್ತುತ ಪಡಿಸಿದರು. ಇದಕ್ಕೂ ಮುಂಚೆ ಸ್ಥಳೀಯ ಕಲಾವಿದರು ಸಹ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದು ವಿಶೇಷ. ಕಣ್ಣೇ ಅದಿರಿಂದಿ ಖ್ಯಾತಿಯ ಗಾಯಕಿ ಮಾಂಗ್ಲಿ ಅದ್ಭುತ ಗಾಯನದ ಮೂಲಕ ಮೋಡಿ ಮಾಡಿದರು. ಜನರು ಅದರಲ್ಲೂ ವಿಶೇಷವಾಗಿ ಪಡ್ಡೆ ಹುಡುಗರು ಹುಚ್ಚೆದ್ದು ಕುಣಿದರು. ವಿಜಯ್ ಪ್ರಕಾಶ್, ಶಮಿತಾ ಮಲ್ನಾಡ್, ಅನುರಾಧಾ ಭಟ್ ಅವರು ಚಲನಚಿತ್ರಗೀತೆಗಳನ್ನು ಪ್ರಸ್ತುತ ಪಡಿಸಿದರು. ಲಕ್ಷ್ಮೀ ದುಬೆ ಮತ್ತು ತಂಡದವರು ದೇಶಭಕ್ತಿಗೀತೆ ಮತ್ತು ಅಶುಗೀತೆಗಳನ್ನು ಪ್ರಸ್ತುತ ಪಡಿಸಿದರು. ಮಂಜುಳಾ ಪರಮೇಶ್ ಮತ್ತು ತಂಡದ ನೃತ್ಯ ರೂಪಕಗಳು ಗಮನಸೆಳೆದವು. ■





Downloaded From: www.kpscvaani.com



# ಅಮೃತ ಯೋಜನೆಯಡಿ 750 ಗ್ರಾಮ ಪಂಚಾಯಿತಿಗಳ ಅಭಿವೃದ್ಧಿ

● ಚಾರುಸ್ಮಿತಾ

**75 ನೇ ಸ್ವಾತಂತ್ರ್ಯೋತ್ಸವದ ನೆನಪಿಗಾಗಿ ಮುಖ್ಯಮಂತ್ರಿ ಅವರು ಘೋಷಣೆ ಮಾಡಿದ್ದ ಅಮೃತ ಗ್ರಾಮ ಪಂಚಾಯಿತಿ ಯೋಜನೆಗೆ ಚಾಲನೆ ನೀಡುವ ಮೂಲಕ ಸ್ವಾತಂತ್ರ್ಯ ಶತಮಾನೋತ್ಸವ ಆಚರಣೆಯ ವೇಳೆಗೆ ಪ್ರಧಾನಮಂತ್ರಿ ಅವರ ಆಶಯದಂತೆ ನವ ಹಾಗೂ ಅಭಿವೃದ್ಧಿಯಾದ ಭಾರತದ ಕನಸು ಸಾಕಾರವಾಗುವತ್ತ ದಾಪು ಹೆಜ್ಜೆ ಇರಿಸಲಾಗಿದೆ.**

ಸ್ವಾತಂತ್ರ್ಯ ದಿನಾಚರಣೆಯಂದು ಧ್ವಜಾರೋಹಣ ನೇರವೇರಿಸಿದ ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು  ರಾಜ್ಯವನ್ನುದ್ದೇಶಿಸಿ ಭಾಷಣ ಮಾಡುವಾಗ ಅಮೃತ ಸರಣಿಯ ಹನ್ನೊಂದು ಯೋಜನೆಗಳನ್ನು ಘೋಷಿಸಿದರು. ಅವುಗಳಲ್ಲಿ ಬಹುಮುಖ್ಯವಾದದ್ದು ಅಮೃತ ಗ್ರಾಮ ಪಂಚಾಯಿತಿ ಯೋಜನೆ.

ಇತ್ತೀಚೆಗೆ ಸರ್ಕಾರದ ಬಹುತೇಕ ಎಲ್ಲಾ ಯೋಜನೆಗಳು ಶೀಘ್ರಗತಿಯಲ್ಲಿ ಆರಂಭಗೊಳ್ಳುತ್ತಿವೆ. ಆಗಸ್ಟ್ 15 ರಂದು ಘೋಷಣೆ ಮಾಡಿದ್ದ ಯೋಜನೆಗೆ ಸೆಪ್ಟೆಂಬರ್ 23 ರಂದು ಚಾಲನೆ ಸಿಕ್ಕಿದೆ. ಅಂದು ಅಮೃತ ಗ್ರಾಮ ಪಂಚಾಯಿತಿ ಯೋಜನೆಗೆ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಗಿರಿರಾಜ್ ಸಿಂಗ್ ಬೆಂಗಳೂರಿನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಚಾಲನೆ ನೀಡಿದ್ದಾರೆ. ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಕೆ.ಎಸ್.ಈಶ್ವರಪ್ಪ ಅವರು ಸೇರಿದಂತೆ ಹಲವರು ಭಾಗಹಿಸಿದ್ದರು.

ಈ ಅಮೃತ ಗ್ರಾಮ ಪಂಚಾಯಿತಿ ಯೋಜನೆಯಡಿಯಲ್ಲಿ ಆಯ್ಕೆ ಮಾಡುವ 750 ಗ್ರಾಮ ಪಂಚಾಯಿತಿಗಳಲ್ಲಿ ಶಾಲೆಗಳು/ಅಂಗನವಾಡಿಗಳಿಗೆ ಆಟದ ಮೈದಾನ ಹಾಗೂ ಆವರಣ ಗೋಡೆ, ಕುಡಿಯುವ  ನೀರು, ಶೌಚಾಲಯ ಒದಗಿಸುವುದು, ಕೆರೆ/ಕಲ್ಯಾಣಿಗಳ ಪುನಶ್ಚೇತನ, ಪ್ರತಿ ಮನೆಗೆ ಕುಡಿಯುವ ನೀರಿನ ನಳ ಸಂಪರ್ಕ ಒದಗಿಸುವುದು, ಶೇ 100 ರಷ್ಟು ಘನ ತ್ಯಾಜ್ಯ ವಿಂಗಡಣೆ ಹಾಗೂ ವಿಲೇವಾರಿ, ತ್ಯಾಜ್ಯ ನೀರಿನ ವೈಜ್ಞಾನಿಕ ನಿರ್ವಹಣೆ, ಗ್ರಾಮ ಪಂಚಾಯಿತಿ ಕಟ್ಟಡಗಳಿಗೆ ಸೌರ ವಿದ್ಯುತ್ ಹಾಗೂ ಬೀದಿ ದೀಪಗಳ ಅಳವಡಿಕೆ, ಗ್ರಂಥಾಲಯಗಳ ಡಿಜಿಟಲೀಕರಣ ಮತ್ತು ಉದ್ಯಾನವನ ನಿರ್ಮಾಣ ಮಾಡುವ ಆಶಯ ಹೊಂದಲಾಗಿದೆ.

ಗ್ರಾಮೀಣೀಕರಣ ಪ್ರೋತ್ಸಾಹಿಸುವ ದಿಕ್ಕಿನಲ್ಲಿ ಹೆಜ್ಜೆ ಇಟ್ಟಿರುವ ಮುಖ್ಯಮಂತ್ರಿಯವರ ಅಮೃತ ಸರಣಿ ಯೋಜನೆಯಲ್ಲಿ ಪ್ರಮುಖವಾಗಿ ಗ್ರಾಮ ಪಂಚಾಯಿತಿಗಳ ಅಭಿವೃದ್ಧಿ ಗಮನಾರ್ಹವಾಗಿದೆ. ಸ್ವಾತಂತ್ರ ಬಂದು 75 ವರ್ಷ ಕಳೆದರೂ ಗ್ರಾಮೀಣ ಭಾಗದ ಜನ ಮೂಲ ಸೌಲಭ್ಯಗಳ ಕೊರತೆಯಿಂದ ಬಳಲುತ್ತಿದ್ದಾರೆ. ದಿನೇ ದಿನೇ ನಗರೀಕರಣ ಹೆಚ್ಚಾಗುತ್ತಿದೆ. ಹಳ್ಳಿಗರು ನಗರದಲ್ಲಿರುವ ಜೀವನಶೈಲಿ ಹಾಗೂ ಸೌಲಭ್ಯಗಳಿಗೆ ಮಾರು



Downloaded From: www.kpscvaani.com




**ಅಮೃತ ಯೋಜನೆಯಡಿ 750 ಗ್ರಾಮ ಪಂಚಾಯಿತಿಗಳ ಸಮಗ್ರ ಅಭಿವೃದ್ಧಿಗಾಗಿ ಪ್ರತಿ ಪಂಚಾಯಿತಿಗೆ ಸರಾಸರಿ 3 ಕೋಟಿಯಂತೆ ಸುಮಾರು 2,300 ಕೋಟಿ ವೆಚ್ಚ ಮಾಡಲಾಗುತ್ತಿದೆ. ಮಾರ್ಚ್ 31 ರ ಒಳಗೆ ಈ ಯೋಜನೆಯನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಿದ ಪಂಚಾಯಿತಿಗಳಿಗೆ 25 ಲಕ್ಷ ರೂ ಪ್ರೋತ್ಸಾಹ ಧನ ನೀಡಲಾಗುವುದು. ಎಲ್ಲಾ ಗ್ರಾಮ ಪಂಚಾಯಿತಿಗಳು ಅಮೃತ ಯೋಜನೆಯನ್ನು ಪೂರ್ಣಗೊಳಿಸದ ನಂತರ ಇನ್ನು 1,500 ಪಂಚಾಯಿತಿಗಳಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು.**

**–ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿಗಳು
ಕರ್ನಾಟಕ ಸರಕಾರ

ಹೋಗಿ ವಲಸೆ ಬರುತ್ತಿದ್ದಾರೆ. ಇದರಿಂದ ಕೃಷಿ ಚಟುವಟಿಕೆಗಳ ಮೇಲೆ ಪರಿಣಾಮ ಬೀರುವ, ಮುಂದಿನ ದಿನಗಳಲ್ಲಿ ಆಹಾರದ ಕೊರತೆ ಕಾಡುವ ಆತಂಕವಿದೆ. ನಗರೀಕರಣ ಹೆಚ್ಚಾದಂತೆ ಅನೇಕ ಸವಾಲುಗಳು ಉದ್ಭವಿಸುತ್ತಿವೆ. ಜನಸಾಂದ್ರತೆ ಮಿತಿ ಮೀರಿ ಪ್ರಾಕೃತಿಕ ವೈಪರೀತ್ಯಗಳಾಗುತ್ತಿವೆ. ಅವುಗಳನ್ನು ನಿಭಾಯಿಸ ಬೇಕಾದರೆ ಗ್ರಾಮೀಣ ಭಾಗಕ್ಕೆ ಹೆಚ್ಚು ಸೌಲಭ್ಯ ಕಲ್ಪಿಸಿ ಅಲ್ಲಿನ ಜೀವನೋಪಾಯವನ್ನು ಸಹ್ಯವಾಗಿಸಬೇಕಿದೆ.

ಈಗ ಜಾರಿಯಾಗುತ್ತಿರುವ ಅಮೃತ ಗ್ರಾಮ ಪಂಚಾಯಿತಿ ಯೋಜನೆ ಮಹತ್ವದ ಹೆಜ್ಜೆಯಾಗಿದೆ. ರಾಜ್ಯದ 750 ಗ್ರಾಮ ಪಂಚಾಯಿತಿಗಳಲ್ಲಿ ಬೀದಿ ದೀಪ, ಪ್ರತಿ ಮನೆಗೆ ಶುದ್ಧ ಕುಡಿಯುವ ನೀರು, ಶೇ. 100ರಷ್ಟು ಘನತ್ಯಾಜ್ಯ ವಿಂಗಡಣೆ ಹಾಗೂ ವಿಲೇವಾರಿ, ತ್ಯಾಜ್ಯ ನೀರಿನ ವೈಜ್ಞಾನಿಕ ವಿಸರ್ಜನೆ, ಸೌರವಿದ್ಯುತ್ ಅಳವಡಿಕೆ, ಡಿಜಿಟಲ್ ಲೈಬ್ರರಿ, ಸುಸಜ್ಜಿತ ಶಾಲೆಗಳ ನಿರ್ವಹಣೆ ಅಮೃತ ಯೋಜನೆಯ ಆಶಯವಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಾರಿಗೊಳಿಸಿರುವ ಯೋಜನೆಗಳನ್ನು ಕ್ರೋಢೀಕರಿಸಿ ಅಮೃತ ಯೋಜನೆಯನ್ನು ಜಾರಿಗೆ ತರಲಾಗುತ್ತಿದೆ. ಪ್ರತಿ ಗ್ರಾಮ ಪಂಚಾಯಿತಿಗೆ ಅಂದಾಜು ಮೂರು ಕೋಟಿ ವೆಚ್ಚ ಮಾಡುವ ಉದ್ದೇಶವಿದೆ. ಸರಿ ಸುಮಾರು 2300 ಕೋಟಿ ರೂ. ಅಂದಾಜು ವೆಚ್ಚ ಲೆಕ್ಕ ಹಾಕಲಾಗಿದೆ.

ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಸಮಗ್ರ ಅಭಿವೃದ್ಧಿ ಪಡಿಸಲು ಆರಂಭದಲ್ಲಿ 750 ಗ್ರಾಮ ಪಂಚಾಯಿತಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. 2022ರ ವೇಳೆಗೆ ಇವು ಪೂರ್ಣಗೊಂಡ ಬಳಿಕ ಮತ್ತೆ ಎರಡನೇ ಹಂತದಲ್ಲಿ ಯೋಜನೆ ಕೈಗೆತ್ತಿಕೊಳ್ಳಲು ನಿರ್ಧರಿಸಲಾಗಿದೆ. ಎರಡನೇ ಹಂತದಲ್ಲಿ 1500 ಗ್ರಾಮ ಪಂಚಾಯಿತಿಗಳನ್ನು ಆಯ್ಕೆ ಮಾಡಿಕೊಳ್ಳುವ ಸಾಧ್ಯತೆ ಬಗ್ಗೆ ಮುಖ್ಯಮಂತ್ರಿ ಅವರು ಸುಳಿವು ನೀಡಿದ್ದಾರೆ. ಮೊದಲ ಹಂತದಲ್ಲೇ ಶೇ. 13ರಷ್ಟು ಗ್ರಾಮ ಪಂಚಾಯಿತಿಗಳು ಸಮಗ್ರ ಸೌಲಭ್ಯಗಳ ಗುರಿಯನ್ನು ಸಾಧಿಸಲಿವೆ. ಎರಡನೇ ಹಂತವೂ ಸೇರಿದರೆ ಒಟ್ಟು ಶೇ. 36ರಷ್ಟು ಗ್ರಾಮ ಪಂಚಾಯಿತಿಗಳು ಎರಡು ವರ್ಷದಲ್ಲಿ ಅಭಿವೃದ್ಧಿಯತ್ತ ಮುನ್ನಡೆಯಲಿವೆ.

**ಪ್ರತಿ ಮನೆಗೆ ಕುಡಿಯುವ ನೀರಿನ ನಳ ಸಂಪರ್ಕ:**

ಗ್ರಾಮೀಣ ಭಾಗದಲ್ಲಿ ನೀರಿನ ಸಮಸ್ಯೆ ಹೆಚ್ಚು ಗಂಭೀರದ್ದಾಗಿದೆ. ಅಂತರ್ಜಲ ಮಟ್ಟ ಕುಸಿದಿದೆ, 160 ತಾಲ್ಲೂಕುಗಳು ನಿರಂತರ ಬರಕ್ಕೆ ತುತ್ತಾಗುತ್ತಿವೆ. 1954ರಿಂದಲೂ ನೀರು ಪೂರೈಕೆಗೆ ಹಲವು ಯೋಜನೆಗಳನ್ನು ರೂಪಿಸಲಾಗಿದೆ. ಈಗ ಕೇಂದ್ರ ಸರ್ಕಾರ ಮನೆ ಮನೆಗೆ ನಳ ಸಂಪರ್ಕ ಕಲ್ಪಿಸಲು ರಾಷ್ಟ್ರೀಯ ಜಲಜೀವನ್ ಮಿಷನ್ ಜಾರಿಗೊಳಿಸಿದೆ. ಅದನ್ನು ರಾಜ್ಯ ಸರ್ಕಾರ ಮನೆ ಮನೆಗೆ ಗಂಗೆ ಹೆಸರಿನಲ್ಲಿ ಅನುಷ್ಠಾನಗೊಳಿಸುತ್ತಿದೆ.

ಗ್ರಾಮೀಣ ಭಾಗದಲ್ಲಿ ಪ್ರತಿಯೊಬ್ಬರಿಗೂ ದಿನಕ್ಕೆ 55 ಲೀಟರ್ ನೀರು ನೀಡಬೇಕು ಎಂಬ ಗುರಿಯೊಂದಿಗೆ ಜಲಜೀವನ್ ಮಿಷನ್ ಅನುಷ್ಠಾನಕ್ಕೆ ಬಂದಿದೆ. 2021ರ ಮಾರ್ಚ್ ಅಂತ್ಯಕ್ಕೆ 34.90 ಲಕ್ಷ ಮನೆಗಳಿಗೆ ನಳ ಸಂಪರ್ಕ ಕಲ್ಪಿಸಲಾಗಿದೆ. ಒಟ್ಟು 97.91 ಲಕ್ಷ ಮನೆಗಳ ಪೈಕಿ 2024ರ ಮಾರ್ಚ್ ವೇಳೆಗೆ 69.75 ಲಕ್ಷ ಮನೆಗಳಿಗೆ ನಳ ಸಂಪರ್ಕ ಕಲ್ಪಿಸುವ ಗುರಿ ಇದೆ. ಅಮೃತ ಯೋಜನೆಯಡಿ ಈ ಗುರಿಯನ್ನು ಅವಧಿ ಪೂರ್ವದಲ್ಲೇ ಪೂರ್ಣಗೊಳಿಸಲು ಗ್ರಾಮ ಪಂಚಾಯತ್‌ಗಳನ್ನು ಪ್ರೇರೇಪಿಸಲಾಗುತ್ತಿದೆ. ಹಾಗಾಗಿ ಅಮೃತ ಯೋಜನೆಯಡಿ 750 ಗ್ರಾಮ ಪಂಚಾಯಿತಿಯ ಎಲ್ಲಾ ಮನೆಗಳಿಗೆ ಕುಡಿಯುವ ನೀರಿನ ನಳ ಸಂಪರ್ಕ ಸಿಗಲಿದೆ. ಇದರಿಂದ ಗ್ರಾಮೀಣ ಭಾಗದ ಜನರು ಕುಡಿಯುವ ನೀರನ್ನು ತರಲು ದೂರ ದೂರದವರೆಗೆ ಹೋಗುವುದು ತಪ್ಪಲಿದೆ.



Downloaded From: www.kpscvaani.com

**ಘನತ್ಯಾಜ್ಯ ವಿಲೇವಾರಿ:**

ಒಂದು ಕಾಲದಲ್ಲಿ ಹಳ್ಳಿಗಳೆಂದರೆ ತಿಪ್ಪೆಗಳು ಎಂದು ಮೂಗು ಮುರಿಯುವ ಕಾಲವಿತ್ತು. ಈಗ ಬಹುತೇಕ ವೈಜ್ಞಾನಿಕ ಪದ್ಧತಿಗಳ ಮೂಲಕ ಘನ ಹಾಗೂ ದ್ರವ್ಯತ್ಯಾಜ್ಯ ವಿಲೇವಾರಿಯಾಗುತ್ತಿದ್ದು, ಬಹುತೇಕ ಸ್ವಚ್ಚತೆಯ ಬದ್ಧತೆ ಕಂಡು ಬರುತ್ತಿದೆ. ಸತ್ಯ ಮೇವ ಜಯತೆ ಎಂಬ ಘೋಷ ವಾಕ್ಯವನ್ನು ಸ್ವಚ್ಚ ಭಾರತ್ ಮಿಷನ್ ಜಾರಿಯ ಬಳಿಕ ಸ್ವಚ್ಛ ಮೇವ ಜಯತೆ ಎಂದು ಬಳಕೆ ಮಾಡಲಾಗುತ್ತಿದೆ. ಸ್ವಚ್ಚ ಭಾರತದ ನಗರ ಯೋಜನೆ ಮೊದಲ ಹಂತ ಮುಗಿದು ಅಕ್ಟೋಬರ್ 1ರಂದು ಎರಡನೇ ಹಂತ ಚಾಲ್ತಿಗೆ ಬಂದಿದೆ. ಗ್ರಾಮೀಣ ಭಾಗದ ನೈರ್ಮಲೀಕರಣಕ್ಕಾಗಿ 2005 ರಿಂದ 2012ರವರೆಗೆ ಸಂಪೂರ್ಣ ಸ್ವಚ್ಛತಾ ಆಂದೋಲನವನ್ನು ಅನುಷ್ಠಾನಗೊಳಿಸಲಾಗಿತ್ತು.

ಈಗ ಅಮೃತ ಯೋಜನೆಯಿಂದ 750 ಗ್ರಾಮ ಪಂಚಾಯಿತಿಯಲ್ಲೂ ವೈಜ್ಞಾನಿಕವಾಗಿ ಘನ ಹಾಗೂ ದ್ರವ್ಯತ್ಯಾಜ್ಯ ವಿಲೇವಾರಿಗೆ ಕ್ರಮವಹಿಸಲಾಗುತ್ತಿರುವುದರಿಂದ ಇನ್ನು ಮುಂದೆ ಗ್ರಾಮಗಳು ನೈರ್ಮಲ್ಯ ಮುಕ್ತವಾಗಿ ಕಂಗೊಳಿಸಲಿವೆ.

ಇನ್ನು ಮನೆ ಮನೆಗಳಿಂದ ತ್ಯಾಜ್ಯ ಸಂಗ್ರಹಿಸುವ ಪದ್ಧತಿ ನಗರ ಪ್ರದೇಶಗಳ ಮಾದರಿಯಲ್ಲೇ ಗ್ರಾಮೀಣ ಭಾಗದಲ್ಲೂ ಶುರುವಾಗಲಿದೆ. ಅಮೃತ ಯೋಜನೆಯಲ್ಲಿ ಶೇ.100ರಷ್ಟು ತ್ಯಾಜ್ಯ ವಿಂಗಡಣೆ ಹಾಗೂ ವಿಲೇವಾರಿಯ ಗುರಿ ಹೊಂದಿದೆ. ತ್ಯಾಜ್ಯ ನೀರನ್ನು ಕೂಡ ವೈಜ್ಞಾನಿಕವಾಗಿ ಸಂಸ್ಕರಣೆ ಮಾಡಿ ಮರು ಬಳಕೆ ಮಾಡಲು ಹಲವಾರು ತಂತ್ರಜ್ಞಾನಗಳನ್ನು ಬಳಸಲಾಗತ್ತದೆ.

**ಶೈಕ್ಷಣಿಕ ಪ್ರಗತಿಗೆ ನಾಂದಿ:**

ಅಮೃತ ಯೋಜನೆ ಸಮಾಜದ ಸುಸ್ಥಿರ ಅಭಿವೃದ್ಧಿಗೆ ಮೂಲಧಾತುವಾಗಿರುವ ಶಿಕ್ಷಣದ ಮೂಲಸೌಲಭ್ಯಗಳ ಹೆಚ್ಚಳಕ್ಕೂ ಆದ್ಯತೆ ನೀಡಿದೆ. ಆಯ್ಕೆಯಾದ ಗ್ರಾಮ ಪಂಚಾಯಿತಿಯ ಶಾಲೆ/ ಅಂಗನವಾಡಿಗಳಲ್ಲಿ ಸುಸಜ್ಜಿತ ಸೌಲಭ್ಯಗಳನ್ನು ಕಲ್ಪಿಸಲು ಶಿಕ್ಷಣ ಇಲಾಖೆಯ ಅನುದಾನ ಬಳಕೆ ಮಾಡಿಕೊಳ್ಳಬಹುದಾಗಿದೆ. ಶಿಕ್ಷಣ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸೌಲಭ್ಯ, ಶೌಚಾಲಯ, ಗೋಡೆ ನಿರ್ಮಾಣ, ಕಟ್ಟಡ ದುರಸ್ತಿ, ಸ್ವಂತಕಟ್ಟಡ ಸೇರಿದಂತೆ ಅನೇಕ ವ್ಯವಸ್ಥೆಗಳು ಪೂರ್ಣಗೊಳ್ಳಲಿವೆ. ಬಹುತೇಕ ಶಾಲೆಗಳ ಅಭಿವೃದ್ಧಿಗೆ ಶಾಸಕರ ಮತ್ತು ಸಿಎಸ್ಆರ್ ನಿಧಿ ಬಳಕೆ ಮಾಡಿಕೊಳ್ಳಲು ಯೋಜಿಸಲಾಗಿದೆ.

ಉದ್ಯಾನವನಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆಯ ಅನುದಾನ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಬೀದಿ ದೀಪಗಳು ಹಾಗೂ ಸೌರಶಕ್ತಿ ದೀಪಗಳ ಅಳವಡಿಕೆಗೆ, ಡಿಜಿಟಲ್ ಲೈಬ್ರರಿ ಸ್ಥಾಪನೆಗೆ ಗ್ರಾಮ ಪಂಚಾಯತಿಯಲ್ಲಿರುವ ಸ್ವಂತ ಅನುದಾನ ಅಥವಾ 15ನೇ ಹಣಕಾಸು ಯೋಜನೆಯ ಆರ್ಥಿಕ ನೆರವನ್ನು ಬಳಕೆ ಮಾಡಿಕೊಳ್ಳಲು ಸೂಚಿಸಲಾಗಿದೆ.

750 ಗ್ರಾಮ ಪಂಚಾಯಿತಿಯಲ್ಲಿ ವಸತಿ ಇಲ್ಲದ ಪ್ರತಿಯೊಬ್ಬರಿಗೂ ವಸತಿ ಕಲ್ಪಿಸಲು ಆಯ್ದ ಪಂಚಾಯಿತಿಗಳಲ್ಲಿ ಸಮರೋಪಾದಿಯಲ್ಲಿ ಯೋಜನೆಯನ್ನು ರೂಪಿಸಲಾಗುತ್ತಿದೆ.

ಗ್ರಾಮ ಪಂಚಾಯಿತಿಗಳು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲೀಕರಣ ಇಲಾಖೆ, ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಗ್ರಾಮೀಣ ಮೂಲಸೌಲಭ್ಯ ಅಭಿವೃದ್ಧಿ ನಿಗಮ ಸೇರಿ ಅಮೃತ ಯೋಜನೆಯನ್ನು ಅನುಷ್ಠಾನಕ್ಕೆ ತರಲಿವೆ. ಯೋಜನೆಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಕಾರ್ಯಕ್ರಮಗಳಲ್ಲದೆ ಇತರೆ ಮೂಲಗಳಿಂದ ದೊರೆಯಬಹುದಾದ ಆರ್ಥಿಕ ದೇಣಿಗೆ, ಭೌತಿಕ ಸಂಪನ್ಮೂಲಗಳು, ಶಾಸಕರ ಕ್ಷೇತ್ರಾಭಿವೃದ್ಧಿ ಅನುದಾನ, ಕಾರ್ಪೋರೇಟ್ ಸಂಸ್ಥೆಗಳ ಸಾಮಾಜಿಕ ಹೊಣೆಗಾರಿಕೆ ನಿಧಿ ಸೇರಿದಂತೆ ಹಲವಾರು ಸ್ವರೂಪದಲ್ಲಿ ಹಣ ಕ್ರೋಢೀಕರಿಸಲು ಅವಕಾಶ ಕಲ್ಪಿಸಲಾಗಿದೆ.

ಯೋಜನೆಗೆ ಗ್ರಾಮ ಪಂಚಾಯತ್‌ಗಳನ್ನು ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿರುವ ಸಮಿತಿಗಳು ಆಯ್ಕೆ ಮಾಡಲಿವೆ. ಎರಡುವರೆ ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಅದರಲ್ಲೂ ಪರಿಶಿಷ್ಟ ಜಾತಿ/ ಪಂಗಡಗಳ ಸಮುದಾಯ ಹೆಚ್ಚಿರುವ ಗ್ರಾಮ ಪಂಚಾಯತ್‌ಗಳನ್ನು ಆಯ್ಕೆ ಮಾಡಲು ಸೂಚಿಸಲಾಗಿದೆ. ರಾಷ್ಟ್ರೀಯ ಜಲಜೀವನ್ ಮಿಷನ್, ಘನ ಮತ್ತು ದ್ರವ್ಯ ತ್ಯಾಜ್ಯ ನಿರ್ವಹಣೆಯನ್ನು ಅಳವಡಿಸಿರುವ ಗ್ರಾಮ ಪಂಚಾಯತಿಗಳನ್ನು ಆದ್ಯತೆ ಮೇರೆಗೆ ಪರಿಗಣಿಸಲಾಗುವುದು. ಯೋಜನೆಗಳನ್ನು ಜಾರಿಗೊಳಿಸುವಾಗ ಆಯಾ ಇಲಾಖೆಗಳ ಮಾನದಂಡಗಳನ್ನು ಪಾಲನೆ ಮಾಡಬೇಕು. ಪ್ರತಿ ತಿಂಗಳು ಯೋಜನೆಯ ಪ್ರಗತಿ ಪರಿಶೀಲನೆ ನಡೆಸಬೇಕು, ಪೂರ್ಣಗೊಂಡ ಕಾಮಗಾರಿಗಳ ಗುಣಮಟ್ಟವನ್ನು ಕಡ್ಡಾಯವಾಗಿ ಪರಿಶೀಲನೆ ಮಾಡಿಸಬೇಕು ಎಂದು ಸೂಚಿಸಲಾಗಿದೆ.

ಒಟ್ಟಿನಲ್ಲಿ ಅಮೃತ ಗ್ರಾಮ ಪಂಚಾಯತ್ ಯೋಜನೆಯಡಿ ಪ್ರತಿ ಗ್ರಾಮ ಪಂಚಾಯಿತಿಯು ಬೀದಿದೀಪಗಳ ಅವಳವಡಿಕೆ, ಮನೆಗಳಿಗೆ ಕುಡಿಯುವ ನೀರಿನ ನಳ ಸಂಪರ್ಕ, ಘನ ತ್ಯಾಜ್ಯ ವಿಂಗಡಣೆ ಮತ್ತು ವಿಲೇವಾರಿ, ಉದ್ಯಾನವನ, ಗ್ರಂಥಾಲಯಗಳ ಡಿಜಿಟಲೀಕರಣ, ಶೌಚಾಲಯ, ಶಾಲೆಗಳು/ಅಂಗನವಾಡಿಗಳಿಗೆ ಆಟದ ಮೈದಾನ ಹಾಗೂ ಆವರಣ ಗೋಡೆ, ಕೆರೆ/ಕಲ್ಯಾಣಿಗಳ ಪುನಶ್ಚೇತನ ಇವೇ ಮುಂತಾದ ಸೌಕರ್ಯಗಳನ್ನು ಪಡೆದುಕೊಂಡು ಅಭಿವೃದ್ಧಿ ಹೊಂದುವ ಮೂಲಕ ನಗರ ಜೀವನದ ಸಾಮ್ಯತೆಯನ್ನು ಪಡೆದುಕೊಳ್ಳಲಿವೆ.






Downloaded From: www.kpscvaani.com



# ದೇಶದಲ್ಲೇ ಮೊಟ್ಟಮೊದಲ ಬಾರಿಗೆ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತಂದ ಹೆಗ್ಗಳಿಕೆ ನಮ್ಮ ರಾಜ್ಯದ್ದು

**ಯುವ ಜನರಿಗೆ ಉತ್ತಮ ಭವಿಷ್ಯ ನೀಡುವ ಸಲುವಾಗಿ ರಾಜ್ಯದಲ್ಲಿ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ದೇಶದಲ್ಲೇ ಮೊದಲ ಬಾರಿಗೆ ಜಾರಿಗೆ ತರಲಾಗುತ್ತಿದ್ದು, ಇದರ ಕುರಿತು ಎದ್ದಿರುವ ಅನುಮಾನ, ಆತಂಕಗಳಿಗೆ ಉನ್ನತ ಶಿಕ್ಷಣ ಸಚಿವರಿಂದಲೇ ಉತ್ತರವನ್ನು ಪಡೆದುಕೊಳ್ಳಲಾಗಿದೆ.**

ಪಿ. ಪ್ರದೀಪ್

ರಾಷ್ಟ್ರೀಯ ಶಿಕ್ಷಣ ನೀತಿ (ಎನ್.ಇ.ಪಿ.2020) ಎಂದ ತಕ್ಷಣವೇ ಹಲವಾರು ಅಂಶಗಳು ಮುನ್ನೆಲೆಗೆ ಬರುತ್ತವೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಸ್ವಾತಂತ್ರ್ಯ, ಡಿಸಿಪ್ಲಿನ್ ಕೋರ್ಸ್ ಸಬ್ಜೆಕ್ಟ್, ಓಪನ್ ಎಲೆಕ್ಟಿವ್ಸ್, ಕಟ್ಟುಪಾಡಿನ ಭಿನ್ನತೆಯಿಂದ ಮುಕ್ತಿ, ಬಹುಶಿಸ್ತುಗಳ ಕಲಿಕೆ, ಸಮಗ್ರತೆ, ಬಹು ಸಲ ಪ್ರವೇಶಾತಿ, ಬಹುಸಲ ನಿರ್ಗಮನ, ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ಆದರೆ ಇವುಗಳ ನಿಜವಾದ ಅರ್ಥವೇನು? ಎನ್ಇಪಿ ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಇವುಗಳನ್ನು ಪಾಲಿಸುವುದು ಹೇಗೆ?, ಕಾಲೇಜೊಂದರಲ್ಲಿ ಇದನ್ನು ಅನುಷ್ಠಾನಗೊಳಿಸಲು ಹೊರಟಾಗ ಅದರ ಸ್ವರೂಪ ಹೇಗಿರುತ್ತದೆ? ವಿದ್ಯಾರ್ಥಿಗಳಿಗೆ ಇದು ನಿಜವಾಗಿಯೂ ತಲುಪುವ ರೀತಿ ಹೇಗೆ?– ಈ ರೀತಿಯ ಹತ್ತು ಹಲವು ಪ್ರಶ್ನೆಗಳು ಪೋಷಕರು ಮತ್ತು ಮಕ್ಕಳಿಗೆ ಉದ್ಭವಿಸುತ್ತದೆ. ಅವರ ಈ ಎಲ್ಲಾ ಪ್ರಶ್ನೆಗಳಿಗೆ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತರಾದ **ಪಿ. ಪ್ರದೀಪ್** ಅವರು ಉನ್ನತ ಶಿಕ್ಷಣ ಸಚಿವರಾದ **ಡಾ. ಸಿ.ಎಸ್. ಅಶ್ವಥ್ ನಾರಾಯಣ** ಅವರಿಂದಲೇ ಉತ್ತರವನ್ನು ಪಡೆದುಕೊಂಡಿದ್ದಾರೆ.

ಈ ಪ್ರಶ್ನೆ ಮತ್ತು ಉತ್ತರಗಳು ಖಂಡಿತಾ ನಿಮ್ಮ ಬಹುಪಾಲು ಅನುಮಾನಗಳನ್ನು ದೂರ ಮಾಡಲಿದೆ.

### ಪದವಿ (Degree) ಎಷ್ಟು ವರ್ಷದ್ದಾಗಿರುತ್ತದೆ?

ಪದವಿ (Degree) ಈ ಮುಂಚಿನಂತೆಯೇ 3 ವರ್ಷದ್ದಾಗಿರುತ್ತದೆ. 3 ವರ್ಷಗಳ ವಿದ್ಯಾಭ್ಯಾಸವನ್ನು ಯಶಸ್ವಿಯಾಗಿ ಮುಗಿಸಿದರೆ ವಿದ್ಯಾರ್ಥಿಗೆ ಪದವಿ ಸಿಗುತ್ತದೆ. ವಿದ್ಯಾರ್ಥಿಗಳಿಗೆ ನಾಲ್ಕನೇ ವರ್ಷವೂ ವಿದ್ಯಾಭ್ಯಾಸವನ್ನು ಮುಂದುವರಿಸುವ ಆಯ್ಕೆ



Downloaded From: www.kpscvaani.com

ಇರುತ್ತದೆ. ನಾಲ್ಕನೇ ವರ್ಷವನ್ನು ಯಶಸ್ವಿಯಾಗಿ ಮುಗಿಸಿದರೆ ಆನರ್ಸ್ ಪದವಿ (Honours Degree) ಸಿಗುತ್ತದೆ. ಆನರ್ಸ್ ಪದವಿ ಪಡೆದ ವಿದ್ಯಾರ್ಥಿ ಮತ್ತೊಂದು ವರ್ಷ (ಅಂದರೆ ಐದನೇ ವರ್ಷ) ವಿದ್ಯಾಭ್ಯಾಸವನ್ನು ಮಾಡಿ ಯಶಸ್ವಿಯಾಗಿ ಮುಗಿಸಿದರೆ ಮಾಸ್ಟರ್ಸ್ ಪದವಿ (Masters Degree) ಸಿಗುತ್ತದೆ. ವಿದ್ಯಾರ್ಥಿಯು ಆನರ್ಸ್ ಮತ್ತು ಮಾಸ್ಟರ್ಸ್ ವಿದ್ಯಾಭ್ಯಾಸವನ್ನು ಪದವಿ ಪಡೆದ ಕಾಲೇಜಿನಲ್ಲಿ ಅಥವಾ ಇನ್ನಾವುದೇ ಕಾಲೇಜಿನಲ್ಲಿ ಮಾಡಬಹುದು.

ಸಂಶೋಧನೆ ಆಯಾಮದೊಂದಿಗೆ (Research Component) ಆನರ್ಸ್ ಪದವಿಯನ್ನು ಪಡೆದವರು ಮಾಸ್ಟರ್ಸ್ ಪದವಿ (Masters Degree) ಪಡೆಯದೆಯೇ ನೇರವಾಗಿ ಪಿ.ಎಚ್.ಡಿ ಗೆ (Ph.D.) ಪ್ರವೇಶಿಸಬಹುದು.

**ಈ ಮುಂಚೆ ಯಾವುದೇ ಕೋರ್ಸ್‌ನಲ್ಲಿ (Course) ವಿಷಯಗಳ ಕಾಂಬಿನೇಷನ್ (Combination)ಅನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬಹುದಿತ್ತು. NEP ಅಡಿಯಲ್ಲಿ ವಿದ್ಯಾರ್ಥಿಯ ಆಸಕ್ತಿಯ ಪ್ರತಿ ವಿಷಯವನ್ನೂ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವಿದೆಯೇ?**

ಹೌದು NEP ಅಡಿಯಲ್ಲಿ ವಿದ್ಯಾರ್ಥಿಯು ಓದಲಿಚ್ಛಿಸುವ ಕೋರ್ಸ್‌ಗಳಲ್ಲಿ ತನ್ನ ಆಸಕ್ತಿಯ ವಿಷಯಗಳನ್ನೇ ಆಯ್ಕೆಮಾಡಿಕೊಂಡು ವ್ಯಾಸಂಗ ಮಾಡುವ ಸ್ವಾತಂತ್ರ್ಯವಿರುತ್ತದೆ.

**ಕೋರ್ಸ್‌ನಲ್ಲಿ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವುದು ಹೇಗೆ?**

ಕಲೆ(Arts) ಮತ್ತು ವಿಜ್ಞಾನ (Science) ಕೋರ್ಸ್‌ಗಳ ಕಾಂಬಿನೇಷನ್‌ನಲ್ಲಿನ 3 ವಿಷಯಗಳ ಪೈಕಿ ವಿದ್ಯಾರ್ಥಿಯು ಕೋರ್ಸ್‌ಗೆ ಸಂಬಂಧಪಟ್ಟ 02 ವಿಷಯಗಳನ್ನು ಆಯ್ಕೆಮಾಡಿಕೊಳ್ಳಬೇಕು. ಇನ್ನೊಂದು ವಿಷಯವನ್ನು ವಿದ್ಯಾರ್ಥಿಯು ತನ್ನ ಆಸಕ್ತಿಗನುಗುಣವಾಗಿ ಯಾವ ಕೋರ್ಸ್‌ನಿಂದಾದರೂ ಆಯ್ಕೆ ಮಾಡಿಕೊಳ್ಳಬಹುದು.

ಉದಾಹರಣೆಗೆ ವಿದ್ಯಾರ್ಥಿಯು BA ಓದಲು ಇಚ್ಛಿಸಿದರೆ, ಎರಡು ವಿಷಯಗಳನ್ನು (Discipline Core Subjects) ಕಲೆಗೆ (Arts) ಸಂಬಂಧಪಟ್ಟ ವಿಷಯಗಳ ಪೈಕಿ ಆಯ್ಕೆ ಮಾಡಿಕೊಳ್ಳಬೇಕು (ಉದಾ:– History, Political Science, Geography, Psychology, Kannada, ಇತ್ಯಾದಿ).

ಒಂದು ವಿಷಯವನ್ನು (Open Elective) ಯಾವ ಕೋರ್ಸ್‌ನಿಂದಾದರೂ ಆಯ್ಕೆ ಮಾಡಿಕೊಳ್ಳಬಹುದು, ಎಂದರೆ ಕಲೆ (Arts), ವಿಜ್ಞಾನ (Science) ಮತ್ತು ವಾಣಿಜ್ಯ (Commerce), BCA, BBM, ಇತ್ಯಾದಿ ಯಾವುದರಿಂದಲಾದರೂ ಆಯ್ಕೆ ಮಾಡಿಕೊಳ್ಳಬಹುದು. ವಿದ್ಯಾರ್ಥಿಯ ಮೊದಲ 4 ಸೆಮಿಸ್ಟರ್‌ಗಳಲ್ಲಿ ಪ್ರತಿಯೊಂದು ಸೆಮಿಸ್ಟರ್‌ನಲ್ಲಿಯೂ ಒಂದು open Elective ವಿಷಯವನ್ನು ಆಯ್ಕೆ ಮಾಡಿಕೊಳ್ಳಬಹುದು (ಪ್ರತಿಯೊಂದು ಸೆಮಿಸ್ಟರ್‌ನಲ್ಲಿಯೂ ಬೇರೆ ಬೇರೆ ವಿಷಯವನ್ನು ಆಯ್ಕೆ ಮಾಡಿಕೊಳ್ಳಬಹುದು).

ಇತರ ಎಲ್ಲಾ ಕೋರ್ಸ್‌ಗಳಾದ BBM, BCA, BCom, ಇತ್ಯಾದಿ ಕೋರ್ಸ್‌ಗಳು ವಿಷಯಾಧಾರಿತ ಕೋರ್ಸ್‌ಗಳಾದ್ದರಿಂದ (Subject Specific Courses), ಕೋರ್ಸ್‌ಗೆ ಸಂಬಂಧಪಟ್ಟ ಎರಡು ವಿಷಯಗಳನ್ನು ಆಯ್ಕೆಮಾಡುವ ಅಗತ್ಯವಿರುವುದಿಲ್ಲ. ಈ ವಿದ್ಯಾರ್ಥಿಗಳು ಈ ಕೋರ್ಸ್‌ಗಳಲ್ಲಿನ ನಿರ್ಧಾರಿತ ವಿಷಯಗಳನ್ನು ಅಭ್ಯಾಸ ಮಾಡುತ್ತಾರೆ.

ಒಂದು ವಿಷಯವನ್ನು (Open Elective) ತಾವು ಆಯ್ಕೆಮಾಡಿಕೊಂಡಿರುವ ಕೋರ್ಸ್ ಅನ್ನು ಹೊರತುಪಡಿಸಿ ಇತರ ಯಾವುದೇ ಕೋರ್ಸ್‌ನಿಂದ ಆಯ್ಕೆ ಮಾಡಿಕೊಳ್ಳಬಹುದು. ವಿದ್ಯಾರ್ಥಿಯ ಮೊದಲ 4 ಸೆಮಿಸ್ಟರ್‌ಗಳಲ್ಲಿ ಪ್ರತಿಯೊಂದು ಸೆಮಿಸ್ಟರ್‌ನಲ್ಲಿಯೂ ಒಂದು open Elective ವಿಷಯವನ್ನು ಆಯ್ಕೆ ಮಾಡಿಕೊಳ್ಳಬಹುದು (ಪ್ರತಿಯೊಂದು ಸೆಮಿಸ್ಟರ್‌ನಲ್ಲಿಯೂ ಬೇರೆ ಬೇರೆ ವಿಷಯವನ್ನು ಆಯ್ಕೆ ಮಾಡಿಕೊಳ್ಳಬಹುದು).

**Open Elective ವಿಷಯವನ್ನು ಆಯ್ಕೆ ಮಾಡಿಕೊಳ್ಳುವಾಗ ಕಾಲೇಜಿನಲ್ಲಿ ಉಪಲಬ್ಧವಿರುವ ವಿಷಯಗಳ ಪೈಕಿಯೇ ಆಯ್ಕೆ ಮಾಡಿಕೊಳ್ಳಬೇಕೆ?**

ಹೌದು, ಪ್ರತಿ ಕಾಲೇಜು ತನ್ನಲ್ಲಿ ಉಪಲಬ್ಧವಿರುವ ವಿಷಯಗಳ ಪೈಕಿ ವಿದ್ಯಾರ್ಥಿಗಳ Open Elective Subject ನ ಆಯ್ಕೆಗೆ ಅವಕಾಶ ನೀಡುತ್ತದೆ. ಸಂಬಂಧಪಟ್ಟ ಕಾಲೇಜಿನಲ್ಲಿ ಉಪಲಬ್ಧವಿರುವ ವಿಷಯಗಳ ಪೈಕಿ ವಿದ್ಯಾರ್ಥಿಯು ತನಗೆ





Downloaded From: www.kpscvaani.com



ಆಸಕ್ತಿಯಿರುವ ವಿಷಯವನ್ನು Open Elective ಆಗಿ ಆಯ್ಕೆ ಮಾಡಿಕೊಳ್ಳಬಹುದು.

### Discipline Core Subjects ಮತ್ತು Open Elective Subject ಎಂದರೇನು?

ವಿದ್ಯಾರ್ಥಿಯು ಓದಲಿಚ್ಛಿಸುವ ಕೋರ್ಸಿಗೆ ಸಂಬಂಧಪಟ್ಟ ವಿಷಯಗಳನ್ನು Discipline Core Subjects ಎನ್ನಲಾಗುತ್ತದೆ. ವಿದ್ಯಾರ್ಥಿಯು ತಾನು ಓದಲಿಚ್ಛಿಸುವ ಕೋರ್ಸ್‌ನಲ್ಲಿನ ಅಥವಾ ಇತರ ಯಾವುದೇ ಕೋರ್ಸ್‌ನಲ್ಲಿನ ಒಂದು ವಿಷಯವನ್ನು ತನ್ನ ಆಸಕ್ತಿಗನುಗುಣವಾಗಿ ಆಯ್ಕೆ ಮಾಡಿಕೊಳ್ಳಬಹುದು. ಈ ವಿಷಯವನ್ನು Open Elective Subject ಎಂದು ಕರೆಯಲಾಗುತ್ತದೆ.

### ಈ ಮುಂಚಿನ ಉನ್ನತ ಶಿಕ್ಷಣದಲ್ಲಿ ಇದ್ದಂತಹ Hard Separation ಎಂದರೇನು?

ಈ ಮುಂಚೆ ವಿದ್ಯಾರ್ಥಿಯು ಪದವಿಗಳಿಸಲು ಕಲೆ (Arts) ಆಯ್ಕೆ ಮಾಡಿಕೊಂಡರೆ ಕೇವಲ ಕಲಾ ವಿಷಯಗಳನ್ನು ಮಾತ್ರ ಓದಬಹುದಿತ್ತು. ವಿಜ್ಞಾನ (Science) ಆಯ್ಕೆ ಮಾಡಿಕೊಂಡರೆ ಕೇವಲ ವಿಜ್ಞಾನದ ವಿಷಯಗಳನ್ನು ಮಾತ್ರ ಓದಬಹುದಿತ್ತು. ಹೀಗೆ ವಿದ್ಯಾರ್ಥಿಯು ತಾನು ಆಯ್ ಕ್ಮಾಡಿಕೊಂಡ ಕೋರ್ಸ್‌ನಲ್ಲಿನ ವಿಷಯಗಳನ್ನು ಹೊರತುಪಡಿಸಿ ಇತರ ಕೋರ್ಸ್‌ನಲ್ಲಿನ ವಿಷಯಗಳನ್ನು ಅಧ್ಯಯನ ಮಾಡುವ ಅವಕಾಶ ಈ ಮುಂಚಿನ ವ್ಯವಸ್ಥೆಯಲ್ಲಿರಲಿಲ್ಲ. ಇದನ್ನು Hard Separation ಎಂದು ಕರೆಯಲಾಗುತ್ತದೆ.

### ಶಿಕ್ಷಣದಲ್ಲಿ Hard Separation ಇರಬಾರದು, ಅದರ ಬದಲಾಗಿ Multi Disciplinary (ಬಹುಶಿಸ್ತೀಯ), ಸಮಗ್ರ (Holistic) ಶಿಕ್ಷಣ ವ್ಯವಸ್ಥೆ ಇರಬೇಕು ಎಂದು NEP ಹೇಳುತ್ತದೆ. ಹಾಗೆಂದರೇನು?

ವಿದ್ಯಾರ್ಥಿಯು ತಾನು ಆಯ್ಕೆ ಮಾಡಿಕೊಂಡ ಕೋರ್ಸ್‌ನಲ್ಲಿನ ವಿಷಯಗಳಿಗೆ ಮಾತ್ರ ಸೀಮಿತವಾಗಿ ಎಂದರೆ, ಇತರ ಕೋರ್ಸ್‌ಗಳಲ್ಲಿನ ಯಾವುದೇ ವಿಷಯವನ್ನು ಅಭ್ಯಾಸ ಮಾಡಲಾಗದಂತಹ Hard Separation ಇರಬಾರದೆಂದು NEP ಹೇಳುತ್ತಿದೆ. ವಿದ್ಯಾರ್ಥಿಯು ತನ್ನ ಶೈಕ್ಷಣಿಕ ಜೀವನದಲ್ಲಿನ ಅಥವಾ ಮುಖ್ಯವಾಗಿ ಮುಂದಿನ ಜೀವನದಲ್ಲಿನ ಯಾವುದೇ ಸಮಸ್ಯೆಗೆ (ಉದ್ಯೋಗದಲ್ಲಿನ, ಸ್ವಂತ ಉದ್ಯೋಗದಲ್ಲಿನ, ಸಮಾಜದಲ್ಲಿನ ಅಥವಾ ತನ್ನದೇ ಜೀವನದಲ್ಲಿನ ಯಾವುದೇ ಸಮಸ್ಯೆ) ಪರಿಹಾರ ಕಂಡುಕೊಳ್ಳಬೇಕಾದಲ್ಲಿ ಅನೇಕ ಆಯಾಮಗಳಿಂದ ಆಲೋಚಿಸಬೇಕಾಗುತ್ತದೆ.

ವಿವಿಧ ಆಯಾಮಗಳಲ್ಲಿ ಆಲೋಚಿಸುವ ಶಕ್ತಿ ಸಾಮರ್ಥ್ಯಗಳನ್ನು ವಿದ್ಯಾರ್ಥಿಯು ಹೊಂದಬೇಕಾದಲ್ಲಿ, ವಿದ್ಯಾರ್ಥಿಗೆ ತಾನು ಆಯ್ಕೆ ಮಾಡಿಕೊಂಡ ಮುಖ್ಯ ಕೋರ್ಸ್‌ಗಳಲ್ಲಿನ ವಿಷಯಗಳ ಜೊತೆಗೆ ಇತರ ವಿಷಯಗಳ ಕುರಿತು ತಕ್ಕಮಟ್ಟಿನ ಜ್ಞಾನವೂ ಬೇಕಾಗುತ್ತದೆ. ವಿದ್ಯಾರ್ಥಿಯ ವ್ಯಕ್ತಿತ್ವ ರೂಪುಗೊಳ್ಳುವುದೇ ವಿದ್ಯಾರ್ಥಿಯ ಶೈಕ್ಷಣಿಕ ಜೀವನದಲ್ಲಿ. ವಿದ್ಯಾರ್ಥಿಯು ಉತ್ತಮ ಪ್ರಜೆಯಾಗಿ, ತನ್ನ ಬದುಕನ್ನು ಕಟ್ಟಿಕೊಳ್ಳುವ ಜೊತೆಗೆ ಸಮಾಜದ ಕಷ್ಟ–ನಷ್ಟಗಳಿಗೆ ಸ್ಪಂದಿಸುವ ವ್ಯಕ್ತಿಯಾಗಿ ರೂಪುಗೊಳ್ಳಬೇಕೆಂದರೆ ಉತ್ತಮ ಶಿಕ್ಷಣದಿಂದ ಮಾತ್ರ ಸಾಧ್ಯ.

ಪ್ರತಿ ವಿದ್ಯಾರ್ಥಿಯ ಪರಿಪೂರ್ಣ ವ್ಯಕ್ತಿತ್ವವನ್ನು (Well Rounded Personality) ರೂಪಿಸಲು ಮತ್ತು ಪ್ರತಿ ವಿದ್ಯಾರ್ಥಿಗಿರುವ ತನ್ನದೇ ಆದ ಶಕ್ತಿ–ಸಾಮರ್ಥ್ಯ, ಆಸಕ್ತಿಗಳನ್ನು ಗುರುತಿಸಿ ಅದನ್ನು ಸಂಪೂರ್ಣ ಅನಾವರಣಗೊಳಿಸಲು (To develop the creative potential of each individual) –ಮೇಲೆ ವಿವರಿಸಿದಂತೆ ಬಹು ಶಿಸ್ತೀಯ (Multi-Disciplinary)– ಸಮಗ್ರ (Holistic) ಸ್ವರೂಪದ ಶಿಕ್ಷಣ ಅಗತ್ಯವೆಂದು NEP ಹೇಳುತ್ತದೆ.

### Multidisciplinary ಶಿಕ್ಷಣ ಎಂದಾಕ್ಷಣ, ವಿದ್ಯಾರ್ಥಿಯು ತಾನು ಆಯ್ಕೆಮಾಡಿಕೊಳ್ಳುವ ಕೋರ್ಸ್‌ಗಳಲ್ಲಿನ ಆಳವಾದ ಅಧ್ಯಯನ (Specialization in one selected Course) ಮಾಡಲಾಗುವುದಿಲ್ಲ ಎನ್ನುವ ಆತಂಕ ನಿಜವೇ?

ಇದು ನಿಜವಲ್ಲ. ವಿದ್ಯಾರ್ಥಿಯು ತಾನು ಪದವಿಗಾಗಿ ಆಯ್ಕೆ ಮಾಡಿಕೊಂಡ ಕೋರ್ಸ್‌ಗಳಲ್ಲಿನ ವಿಷಯಗಳನ್ನೇ ಪ್ರಮುಖವಾಗಿ ಅಭ್ಯಾಸ ಮಾಡುತ್ತಾನೆ. ಇದರ ಜೊತೆಗೆ ಪ್ರತಿ ಸೆಮಿಸ್ಟರ್‌ನಲ್ಲಿ ಒಂದು ವಿಷಯವನ್ನು ಮಾತ್ರ ತನ್ನದೇ ಕೋರ್ಸ್‌ನಿಂದ ಅಥವಾ ಇನ್ನಾವುದೇ ಕೋರ್ಸ್‌ನಿಂದ Open Elective ಆಗಿ ಆಯ್ಕೆ ಮಾಡಿಕೊಂಡು ಅಭ್ಯಾಸ ಮಾಡಬಹುದಾಗಿರುತ್ತದೆ. ಜೊತೆಗೆ ವಿದ್ಯಾರ್ಥಿಯ ಪರಿಪೂರ್ಣ ವ್ಯಕ್ತಿತ್ವವನ್ನು ರೂಪಿಸುವಂತಹ ಮತ್ತು ವಿದ್ಯಾರ್ಥಿಯ ಉದ್ಯೋಗಾವಕಾಶವನ್ನು ಹೆಚ್ಚಿಸುವ ವಿಷಯಗಳನ್ನು (ಕೌಶಲ್ಯ ಮತ್ತು ಸಾಮರ್ಥ್ಯ ವೃದ್ಧಿಯ ಕೋರ್ಸ್‌ಗಳು– Skill and Ability Enhancement Courses) ಪ್ರತಿ ವಿದ್ಯಾರ್ಥಿಗೆ ಕಲಿಸಲಾಗುತ್ತದೆ.

ಮೇಲೆ ವಿವರಿಸಿದಂತೆ ವಿದ್ಯಾರ್ಥಿಯು ತನ್ನ ಆಯ್ಕೆಯ ಕೋರ್ಸ್‌ನಲ್ಲಿನ ವಿಷಯಗಳನ್ನೇ ಪ್ರಮುಖವಾಗಿ ಅಭ್ಯಾಸ ಮಾಡುವುದರಿಂದ ಹಾಗೂ ಇತರ ವಿಷಯಗಳನ್ನು ಆಸಕ್ತಿಗನುಗುಣವಾಗಿ ಮತ್ತು ಆವಶ್ಯಕತೆಗನುಸಾರವಾಗಿ ತಕ್ಕ ಮಟ್ಟಿಗೆ ಮಾತ್ರ ಕಲಿಯುವುದರಿಂದ, ವಿದ್ಯಾರ್ಥಿಗೆ ತಾನು ಆಯ್ಕೆಮಾಡಿಕೊಂಡ ಕೋರ್ಸ್‌ನಲ್ಲಿನ ವಿಷಯಗಳ ಆಳವಾದ ಅಧ್ಯಯನದ ಜೊತೆಗೆ ಪರಿಪೂರ್ಣವಾದ ಮತ್ತು ಸಮಗ್ರವಾದ ಶಿಕ್ಷಣವೂ ದೊರೆಯುತ್ತದೆ.

### ಬಹುಶಿಸ್ತೀಯ ಶಿಕ್ಷಣ (Multidisciplinary education) ನೀಡುವುದರಿಂದ ವಿದ್ಯಾರ್ಥಿಗೆ ಯಾವ ಕೋರ್ಸ್‌ನಲ್ಲಿ ಪದವಿ ಸಿಗುತ್ತದೆ?

ಈಗಿನಂತೆಯೇ ವಿದ್ಯಾರ್ಥಿ ಆಯ್ಕೆ ಮಾಡಿಕೊಳ್ಳುವ ಕೋರ್ಸ್‌ನಲ್ಲಿಯೇ ವಿದ್ಯಾರ್ಥಿಗೆ ಪದವಿ ಸಿಗುತ್ತದೆ. ಅಂದರೆ, ಕಲೆ ಆಯ್ಕೆ ಮಾಡಿಕೊಂಡರೆ BA ಪದವಿ ಸಿಗುತ್ತದೆ, ವಿಜ್ಞಾನ ಆಯ್ಕೆ ಮಾಡಿಕೊಂಡರೆ B.Sc ಪದವಿ ಸಿಗುತ್ತದೆ, ವಾಣಿಜ್ಯ ಆಯ್ಕೆ ಮಾಡಿಕೊಂಡರೆ B.Com ಪದವಿ ಸಿಗುತ್ತದೆ ಇತ್ಯಾದಿ.



Downloaded From: www.kpscvaani.com

ವಿದ್ಯಾರ್ಥಿಯು ತಾನು ಆಯ್ಕೆ ಮಾಡಿಕೊಂಡ ಕೋರ್ಸ್‌ಗಳಲ್ಲಿನ ವಿಷಯಗಳನ್ನು ಪ್ರಮುಖವಾಗಿ ಅಭ್ಯಾಸ ಮಾಡುವುದರ ಜೊತೆಗೆ, ಇತರ ವಿಷಯಗಳನ್ನು ಆಸಕ್ತಿಗನುಗುಣವಾಗಿ, ಉದ್ಯೋಗಾವಕಾಶದ ಆವಶ್ಯಕತೆಗನುಗುಣವಾಗಿ, ತಕ್ಕಮಟ್ಟಿಗೆ ಅಭ್ಯಾಸ ಮಾಡಬಹುದಾದಂತಹ ಶಿಕ್ಷಣ ವ್ಯವಸ್ಥೆಯೇ ಬಹುಶಿಸ್ತೀಯ (Multidisciplinary) ಶಿಕ್ಷಣ ವ್ಯವಸ್ಥೆ.

ವಿದ್ಯಾರ್ಥಿಯು ತನ್ನ ಆಯ್ಕೆಯ ಕೋರ್ಸ್‌ಳಗಲ್ಲಿನ ವಿಷಯಗಳ ಜೊತೆಗೆ, ಇತರ ಕೋರ್ಸ್‌ಗಳಲ್ಲಿನ ಒಂದು ವಿಷಯವನ್ನು ಪ್ರತಿ ಸೆಮಿಸ್ಟರ್‌ನಲ್ಲಿ Open Elective ಆಗಿ ಅಭ್ಯಾಸ ಮಾಡುವ (ಉದಾಹರಣೆಗೆ, ಕಲಾ (Arts) ವಿಭಾಗದ ವಿದ್ಯಾರ್ಥಿಯು ವಿಜ್ಞಾನ (Science) ಅಥವಾ ವಾಣಿಜ್ಯ (Commerce) ಅಥವಾ ಕಂಪ್ಯೂಟರ್ ಸೈನ್ಸ್ (Computer Science) ಇತ್ಯಾದಿ ಕಲಿಯಲು) ಸ್ವಾತಂತ್ರ್ಯವಿರುತ್ತದೆಯೇ ಹೊರತು, ನಿರ್ಬಂಧವಿರುವುದಿಲ್ಲ.

**ಬಹು ಆಗಮನ ಬಹು ನಿರ್ಗಮನ (Multi-entry Multi-exit) ಶಿಕ್ಷಣ ವ್ಯವಸ್ಥೆ ಎಂದರೇನು?**

ಈಗಿನ ವ್ಯವಸ್ಥೆಯಲ್ಲಿ ವಿದ್ಯಾರ್ಥಿಯು ಕಾರಣಾಂತರಗಳಿಂದ ವ್ಯಾಸಂಗವನ್ನು ಅರ್ಧಕ್ಕೇ ನಿಲ್ಲಿಸಿದಲ್ಲಿ, ವಿದ್ಯಾರ್ಥಿಯು ಅಲ್ಲಿಯವರೆಗೆ ಮಾಡಿದ ವಿದ್ಯಾಭ್ಯಾಸಕ್ಕೆ ಯಾವುದೇ ಪ್ರಮಾಣಪತ್ರ ದೊರೆಯುವುದಿಲ್ಲ ಹಾಗೂ ವಿದ್ಯಾರ್ಥಿಯು ಮತ್ತೆ ವ್ಯಾಸಂಗವನ್ನು ಮುಂದುವರಿಸಲು ಇಚ್ಛಿಸಿದಲ್ಲಿ ಪದವಿ ಅಧ್ಯಯನವನ್ನು ಮೊದಲಿನಿಂದ ಪ್ರಾರಂಭಿಸಬೇಕಾಗುತ್ತದೆ.

NEP ಅಡಿಯಲ್ಲಿ ಯಾವುದೇ ವಿದ್ಯಾರ್ಥಿಯು ಕಾರಣಾಂತರಗಳಿಂದ ಪದವಿಯನ್ನು ಅರ್ಧಕ್ಕೇ ನಿಲ್ಲಿಸಿದಲ್ಲಿ ವಿದ್ಯಾರ್ಥಿಗೆ ಕೆಳಗಿನಂತೆ ಪ್ರಮಾಣ ಪತ್ರ ದೊರಕುತ್ತದೆ. ಮೊದಲನೇ ವರ್ಷವನ್ನು ಯಶಸ್ವಿಯಾಗಿ ಪೂರೈಸಿದಲ್ಲಿ ಪ್ರಮಾಣಪತ್ರ (Certificate) ನೀಡಲಾಗುತ್ತದೆ. ಎರಡನೇ ವರ್ಷವನ್ನು ಯಶಸ್ವಿಯಾಗಿ ಪೂರೈಸಿದಲ್ಲಿ ಡಿಪ್ಲೊಮಾ (Diploma) ನೀಡಲಾಗುತ್ತದೆ. ಮೂರನೇ ವರ್ಷವನ್ನು ಯಶಸ್ವಿಯಾಗಿ ಪೂರೈಸಿದ ನಂತರ ಪದವಿ (Degree) ನೀಡಲಾಗುತ್ತದೆ.

ಜೊತೆಗೆ, ಮುಂದೆ ವಿದ್ಯಾರ್ಥಿಯು ವ್ಯಾಸಂಗವನ್ನು ಮುಂದುವರಿಸಲು ಇಚ್ಛಿಸಿದಲ್ಲಿ, ವಿದ್ಯಾರ್ಥಿಯು ಯಾವ ಹಂತದಲ್ಲಿ ವ್ಯಾಸಂಗವನ್ನು ಅರ್ಧಕ್ಕೆ ನಿಲ್ಲಿಸಿದ್ದನೋ, ಆ ಹಂತದಿಂದಲೇ ಮುಂದುವರಿಸಬಹುದಾಗಿದೆ. ಅಂದರೆ, ಮೊದಲನೇ ವರ್ಷವನ್ನು ಯಶಸ್ವಿಯಾಗಿ ಪೂರೈಸಿದಲ್ಲಿ– ಎರಡನೇ ವರ್ಷಕ್ಕೆ ಸೇರಬಹುದು. ಎರಡನೇ ವರ್ಷವನ್ನು ಯಶಸ್ವಿಯಾಗಿ ಪೂರೈಸಿದಲ್ಲಿ – ಮೂರನೇ ವರ್ಷಕ್ಕೆ ಸೇರಬಹುದು.

**ಬಹು ಆಗಮನ ಬಹು ನಿರ್ಗಮನ (Multi-Entry Multi-Exit) ವ್ಯವಸ್ಥೆಯಲ್ಲಿ ನೀಡಲಾಗುವ ಪ್ರಮಾಣಪತ್ರ (Certificate) ಮತ್ತು ಡಿಪ್ಲೊಮಾ (Diploma)ದಿಂದ ಪ್ರಯೋಜನವೇನು?**

ಮೊದಲನೇ ವರ್ಷವನ್ನು ಪೂರೈಸಿದಲ್ಲಿ ನೀಡಲಾಗುವ Certificate ಮತ್ತು ಎರಡನೇ ವರ್ಷವನ್ನು ಪೂರೈಸಿದಲ್ಲಿ ನೀಡಲಾಗುವ Diploma ಗಳಿಗೆ ಔದ್ಯೋಗಿಕ ವಲಯದಲ್ಲಿ ಬೆಲೆ ಸಿಗಬೇಕು ಹಾಗೂ ಆ Certificate ಅಥವಾ Diploma ಗಳ ಆಧಾರದಲ್ಲಿ ವಿದ್ಯಾರ್ಥಿಗೆ ಉದ್ಯೋಗಾವಕಾಶ ಸಿಗಬೇಕು ಎಂಬ ಉದ್ದೇಶದಿಂದಲೇ ಪದವಿ ಪಠ್ಯಕ್ರಮವನ್ನು (Curriculum) ಕೆಳಗಿನಂತೆ "ರಾಷ್ಟ್ರೀಯ ಕೌಶಲ್ಯವಾರು ಅರ್ಹತೆಗಳ ಚೌಕಟ್ಟು" (National Skills Qualifications Framework) –ಇದರ ವಿವಿಧ "ಕೌಶಲ್ಯ ಮಟ್ಟ" ಗಳಿಗೆ ಅನುಗುಣವಾಗಿ, ಮೊದಲ ವರ್ಷದ ಪಠ್ಯಕ್ರಮ – ಕೌಶಲ್ಯ ಮಟ್ಟ 5 ಎಂದು, ಎರಡನೇ ವರ್ಷದ ಪಠ್ಯಕ್ರಮ – ಕೌಶಲ್ಯ ಮಟ್ಟ 6, ಮೂರನೇ ವರ್ಷದ ಪಠ್ಯಕ್ರಮ – ಕೌಶಲ್ಯ ಮಟ್ಟ 7, ನಾಲ್ಕನೇ ವರ್ಷದ ಆನರ್ಸ್ ಪಠ್ಯಕ್ರಮ – ಕೌಶಲ್ಯ ಮಟ್ಟ 8 ಹಾಗೂ ಐದನೇ ವರ್ಷದ ಮಾಸ್ಟರ್ಸ್ ಪಠ್ಯಕ್ರಮ – ಕೌಶಲ್ಯ ಮಟ್ಟ 9 ಎಂದು ರೂಪಿಸಲಾಗುತ್ತಿದೆ.

**ಬಹು ಆಗಮನ ಬಹು ನಿರ್ಗಮನ ವ್ಯವಸ್ಥೆಯಲ್ಲಿ ಮೊದಲನೇ ವರ್ಷಕ್ಕೆ ಪ್ರಮಾಣಪತ್ರ (Certificate) ಹಾಗೂ ಎರಡನೇ ವರ್ಷಕ್ಕೆ ಡಿಪ್ಲೊಮಾ (Diploma) ದೊರಕುವುದರಿಂದ ವಿದ್ಯಾರ್ಥಿಗಳು ವ್ಯಾಸಂಗವನ್ನು ಅರ್ಧಕ್ಕೇ ನಿಲ್ಲಿಸುವ ಆತಂಕವಿದೆಯೇ?**

ಯಾವುದೇ ವಿದ್ಯಾರ್ಥಿ ಕಾರಣಾಂತರಗಳಿಂದ ಗತ್ಯಂತರವಿಲ್ಲದೇ ಪದವಿ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿದಲ್ಲಿ, ಆ ವಿದ್ಯಾರ್ಥಿಯು ಅಲ್ಲಿಯವರೆಗೆ ಕಲಿತಂತಹ ವಿದ್ಯೆ ಹಾಗೂ ಪಟ್ಟ ಶ್ರಮ ವ್ಯರ್ಥವಾಗಬಾರದು ಮತ್ತು ಅಲ್ಲಿಯವರೆಗೆ ಕಲಿತ ವಿದ್ಯೆಗೆ ಅನುಗುಣವಾಗಿ ವಿದ್ಯಾರ್ಥಿಗೆ ಉದ್ಯೋಗಾವಕಾಶ ಸಿಗುವಂತಾಗಬೇಕು ಎಂಬ ಕಾರಣಕ್ಕಷ್ಟೇ ಮೊದಲನೇ ವರ್ಷದ




Downloaded From: www.kpscvaani.com

ನಂತರ ಪ್ರಮಾಣಪತ್ರ (Certificate) ಮತ್ತು ಎರಡನೇ ವರ್ಷದ ನಂತರ ಡಿಪ್ಲೊಮಾ (Diploma) ನೀಡಲಾಗುತ್ತದೆ.

ಪ್ರಮಾಣಪತ್ರಕ್ಕೆ (Certificate) "ಕೌಶಲ್ಯ ಮಟ್ಟ 5" ರ ಬೆಲೆ ಮತ್ತು ಡಿಪ್ಲೊಮಾಗೆ (Diploma)"ಕೌಶಲ್ಯ ಮಟ್ಟ 6" ರ ಬೆಲೆ ಸಿಗುತ್ತದೆಯೇ ಹೊರತು ಪದವಿ (Degree) ಯ ಬೆಲೆ ಸಿಗುವುದಿಲ್ಲ. ಪದವಿ (Degree) ದೊರೆಯಬೇಕಾದರೆ ವಿದ್ಯಾರ್ಥಿಯು ಮೂರು ವರ್ಷಗಳ ವ್ಯಾಸಂಗವನ್ನು ಪೂರೈಸಲೇಬೇಕು.

ಯಾವುದೇ ವಿದ್ಯಾರ್ಥಿಯು ಪದವಿ ತರಗತಿಗೆ ಸೇರುವುದು ಪದವಿ (Degree) ಪಡೆಯಬೇಕೆಂಬ ಉದ್ದೇಶಕ್ಕಾಗಿಯಾದ್ದರಿಂದ, ಪ್ರಮಾಣಪತ್ರ ಅಥವಾ ಡಿಪ್ಲೊಮಾ ಸಿಗುತ್ತದೆ ಎಂದು ವಿದ್ಯಾರ್ಥಿಯು ಪದವಿ ಶಿಕ್ಷಣವನ್ನು ಅರ್ಧಕ್ಕೆ ಮೊಟಕುಗೊಳಿಸಬಹುದೆಂಬ ಆತಂಕ ಸತ್ಯಕ್ಕೆ ದೂರವಾದದ್ದು.

**NEP ಅಡಿಯಲ್ಲಿ ಕಾಂಬಿನೇಶನ್‌ಗೆ ಬದಲಾಗಿ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವ ಮತ್ತು ಯಾವುದೇ ಕೋರ್ಸ್/ಶಿಸ್ತಿನಿಂದ (Course/Discipline) ಒಂದು Open Elective ಆಯ್ಕೆ ಮಾಡಿಕೊಳ್ಳಲು ವಿದ್ಯಾರ್ಥಿಗೆ ಅವಕಾಶವಿರುವುದರಿಂದ ಸಂಬಂಧಪಟ್ಟ ಕಾಲೇಜುಗಳಲ್ಲಿ ಆಯ್ಕೆ ಮಾಡಿಕೊಂಡ ವಿಷಯಗಳನ್ನು ಬೋಧಿಸಲು ಆವಶ್ಯಕತೆಗನುಗುಣವಾಗಿ ಅಧ್ಯಾಪಕರು ಇದ್ದಾರೆಯೆ?**

ಪ್ರತಿ ಕಾಲೇಜು ಒಂದು ವಿಶ್ವವಿದ್ಯಾಲಯದ ಸಂಯೋಜನೆಗೆ (affiliation) ಒಳಪಟ್ಟಿರುತ್ತದೆ. ವಿಶ್ವವಿದ್ಯಾಲಯವು ಯಾವುದೇ ಕಾಲೇಜನ್ನು ಸಂಯೋಜನೆಗೆ ಒಳಪಡಿಸುವಾಗ, ಸದರಿ ಕಾಲೇಜಿನಲ್ಲಿರುವ ಮೂಲಭೂತ ಸೌಕರ್ಯಗಳು ಮತ್ತು ಅಧ್ಯಾಪಕರ ಉಪಲಬ್ಧತೆಗನುಗುಣವಾಗಿ ಸದರಿ ಕಾಲೇಜಿಗೆ ಕೋರ್ಸ್‌ಗಳನ್ನು, ಈ ಪ್ರತಿ ಕೋರ್ಸ್‌ನಲ್ಲಿರುವ ಕಾಂಬಿನೇಶನ್‌ಗಳನ್ನು (Combination) ಮತ್ತು ಪ್ರತಿ ಕಾಂಬಿನೇಶನ್‌ನಲ್ಲಿ ತೆಗೆದುಕೊಳ್ಳಬಹುದಾದ ವಿದ್ಯಾರ್ಥಿಗಳ ಸಂಖ್ಯೆಯನ್ನು ಮಂಜೂರು ಮಾಡಿರುತ್ತದೆ.

ಹೀಗೆ ಪ್ರತಿ ಕಾಲೇಜಿಗೆ ಮಂಜೂರಾದ ಕಾಂಬಿನೇಶನ್‌ಗಳಲ್ಲಿನ ವಿಷಯಗಳನ್ನು ಸಂಬಂಧಪಟ್ಟ ಕಾಲೇಜು ತನ್ನಲ್ಲಿಗೆ ಬರುವ ವಿದ್ಯಾರ್ಥಿಗಳ ಆಯ್ಕೆಗೆ ಒದಗಿಸುತ್ತದೆ. ಪ್ರತಿ ಕಾಲೇಜಿಗೆ ಮಂಜೂರಾದ ಪ್ರತಿ ಕೋರ್ಸ್–ಕಾಂಬಿನೇಶನ್‌ನಲ್ಲಿನ ಪ್ರತಿ ವಿಷಯಕ್ಕೆ ಅವಶ್ಯಕ ಸಂಖ್ಯೆಯ ಅಧ್ಯಾಪಕರು ಈಗಾಗಲೇ ಉಪಲಬ್ಧವಿರುವುದರಿಂದ ಮತ್ತು ಸದರಿ ವಿಷಯಗಳನ್ನೇ ಸಂಬಂಧಪಟ್ಟ ಕಾಲೇಜು ಓಇಕ ಅಡಿ ವಿದ್ಯಾರ್ಥಿಗಳ ಆಯ್ಕೆಗೆ ನೀಡುವುದರಿಂದ ಅಧ್ಯಾಪಕರ ಕೊರತೆ ಎದುರಾಗುವುದಿಲ್ಲ.

ಯಾವುದೇ ಕಾಲೇಜು ಯಾವುದೇ ಹೊಸ ವಿಷಯವನ್ನು ವಿದ್ಯಾರ್ಥಿಗಳ ಆಯ್ಕೆಗೆ ನೀಡಲು ಇಚ್ಛಿಸಿದಲ್ಲಿ, ಆ ವಿಷಯವನ್ನು ಬೋಧಿಸಲು ಆವಶ್ಯಕ ಸೌಕರ್ಯ ಮತ್ತು ಅಧ್ಯಾಪಕರ ವ್ಯವಸ್ಥೆ ಮಾಡಿ, ವಿಶ್ವವಿದ್ಯಾಲಯದಿಂದ ಅನುಮತಿ ಪಡೆದು, ನಂತರ ವಿದ್ಯಾರ್ಥಿಗಳ ಆಯ್ಕೆಗೆ ನೀಡಬಹುದಾಗಿದೆ.

ಉದಾಹರಣೆಗೆ ಬೆಂಗಳೂರಿನ ವಿಜಯನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಲಾ ವಿಭಾಗಕ್ಕೆ ಮಂಜೂರಾದ 3 ಕಾಂಬಿನೇಶನ್‌ಗಳಲ್ಲಿನ ವಿಷಯಗಳಾದ History, Economics, Sociology, Journalism, Kannada ಮತ್ತು Political Science ಗಳನ್ನು ಕಲಾ ಕೋರ್ಸ್‌ಗೆ ಸೇರಲಿಚ್ಛಿಸುವ ವಿದ್ಯಾರ್ಥಿಗಳ ಆಯ್ಕೆಗೆ ಒದಗಿಸಲಾಗಿದೆ.

ಹಾಗೆಯೇ ಸದರಿ ಕಾಲೇಜಿನ ವಿಜ್ಞಾನ ವಿಭಾಗಕ್ಕೆ ಮಂಜೂರಾದ 3 ಕಾಂಬಿನೇಶನ್‌ಗಳಲ್ಲಿನ ವಿಷಯಗಳಾದ Chemistry, Physics, Mathematics, Zoology, Botany ಮತ್ತು Computer Science ಗಳನ್ನು ವಿಜ್ಞಾನ ಕೋರ್ಸ್‌ಗೆ ಸೇರಲಿಚ್ಛಿಸುವ ವಿದ್ಯಾರ್ಥಿಗಳ ಆಯ್ಕೆಗೆ ಒದಗಿಸಲಾಗಿದೆ.

ಅದೇ ರೀತಿ ಕಲಾ ವಿಭಾಗದಲ್ಲಿನ ಎಲ್ಲ ವಿಷಯಗಳನ್ನು ಮತ್ತು ವಿಜ್ಞಾನ ವಿಭಾಗದಲ್ಲಿನ ಎಲ್ಲ ವಿಷಯಗಳನ್ನು, ಎಲ್ಲ ವಿದ್ಯಾರ್ಥಿಗಳಿಗೆ (ಕಲಾ ಮತ್ತು ವಿಜ್ಞಾನ ಎರಡೂ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ) ಒಂದು Open Elective ಆಯ್ಕೆಗಾಗಿ ಒದಗಿಸಲಾಗತ್ತದೆ.

**NEP ಅಡಿಯಲ್ಲಿ ಭಾಷೆಗಳ ಕಲಿಕೆಯ ಬಗ್ಗೆ ಮತ್ತು ಕನ್ನಡ ಭಾಷೆಯ ಕಲಿಕೆಯ ಬಗ್ಗೆ ತಿಳಿಸಿ.**

ಪದವಿಯ ಮೊದಲ ಎರಡು ವರ್ಷಗಳ ನಾಲ್ಕು ಸೆಮಿಸ್ಟರ್‌ಗಳಲ್ಲಿ ಎರಡು ಭಾಷೆಗಳನ್ನು ವಿದ್ಯಾರ್ಥಿಗಳು ಕಲಿಯಬಹುದಾಗಿದೆ. ಎರಡು ಭಾಷೆಗಳ ಪೈಕಿ ಒಂದು ಭಾಷೆಯಾಗಿ ಕನ್ನಡದ ಕಲಿಕೆಯನ್ನು ಕಡ್ಡಾಯಗೊಳಿಸಲಾಗಿದೆ. ಕನ್ನಡ ನಾಡು, ನುಡಿ, ಸಂಸ್ಕೃತಿ, ಸಾಹಿತ್ಯದ ಬಗ್ಗೆ ಎಲ್ಲ ವಿದ್ಯಾರ್ಥಿಗಳಲ್ಲಿ ಅರಿವು ಮೂಡಲಿ ಎಂಬ ಉದ್ದೇಶದಿಂದ ನಾಡಭಾಷೆ ಕನ್ನಡದ ಕಲಿಕೆಯನ್ನು ಎಲ್ಲ ವಿದ್ಯಾರ್ಥಿಗಳಿಗೆ ಕಡ್ಡಾಯಗೊಳಿಸಲಾಗಿದೆ. ಕನ್ನಡದ ಜೊತೆ ವಿದ್ಯಾರ್ಥಿಯು ತನ್ನ ಆಸಕ್ತಿಯ ಮತ್ತೊಂದು ಭಾಷೆಯನ್ನು (ಪ್ರತಿಯೊಂದು ವರ್ಷದಲ್ಲಿಯೂ ಬೇರೆ ಬೇರೆ ಭಾಷೆಯನ್ನು ಆಯ್ಕೆ ಮಾಡಿಕೊಳ್ಳಬಹುದು) ಕಲಿಯಬಹುದಾಗಿದೆ.

ಆದರೆ ಹೊರ ರಾಜ್ಯದ ವಿದ್ಯಾರ್ಥಿಗಳಿಗೆ ಹಾಗೂ ಎರಡನೇ PUC ವರೆಗೆ ಕನ್ನಡವನ್ನೇ ಕಲಿಯದ ವಿದ್ಯಾರ್ಥಿಗಳಿಗೆ ವ್ಯಾವಹಾರಿಕ ಕನ್ನಡ (Functional Kannada) ವನ್ನು ಮಾತ್ರ ಒಂದು ಸೆಮಿಸ್ಟರ್‌ನಲ್ಲಿ ಕಲಿಯುವುದು ಕಡ್ಡಾಯವಾಗಿರುತ್ತದೆ. ಕನ್ನಡದ ಜೊತೆ ವಿದ್ಯಾರ್ಥಿಯು ತನ್ನ ಆಸಕ್ತಿಯ ಮತ್ತೊಂದು ಭಾಷೆಯನ್ನು (ಪ್ರತಿಯೊಂದು ವರ್ಷದಲ್ಲಿಯೂ ಬೇರೆ ಬೇರೆ ಭಾಷೆಯನ್ನು ಆಯ್ಕೆ ಮಾಡಿಕೊಳ್ಳಬಹುದು) ಕಲಿಯಬಹುದಾಗಿದೆ. ಭಾಷೆ ಕಲಿಯಬೇಕಾದ ನಾಲ್ಕು ಸೆಮಿಸ್ಟರ್‌ಗಳ ಪೈಕಿ ಇನ್ನುಳಿದ ಮೂರು ಸೆಮಿಸ್ಟರ್‌ಗಳಲ್ಲಿ ಸದರಿ ವಿದಾರ್ಥಿಗಳು ತಮ್ಮ ಆಯ್ಕೆಯ ಯಾವುದೇ ಎರಡು ಭಾಷೆಗಳನ್ನು (ಪ್ರತಿಯೊಂದು ವರ್ಷದಲ್ಲಿಯೂ ಬೇರೆ ಬೇರೆ ಭಾಷೆಗಳನ್ನು ಆಯ್ಕೆ ಮಾಡಿಕೊಳ್ಳಬಹುದು) ಕಲಿಯಬಹುದಾಗಿರುತ್ತದೆ.

ಕನ್ನಡಿಗರು ಪದವಿಯ ಮೊದಲ ಎರಡು ವರ್ಷಗಳ ನಾಲ್ಕು ಸೆಮಿಸ್ಟರ್‌ಗಳಲ್ಲಿ ಕನ್ನಡದ ಜೊತೆಗೆ ತಮ್ಮ ಆಯ್ಕೆಯ ಮತ್ತೊಂದು ಭಾಷೆಯನ್ನು ಕಲಿಯಬಹುದು. ಹೊರ ರಾಜ್ಯದ ಮತ್ತು ಎರಡನೇ ಕಗಅ ವರೆಗೆ ಕನ್ನಡವನ್ನೇ ಕಲಿಯದವರು ಪದವಿಯ ಮೊದಲ ಎರಡು ವರ್ಷಗಳ ನಾಲ್ಕು ಸೆಮಿಸ್ಟರ್‌ಗಳ ಪೈಕಿ ಒಂದು ಸೆಮಿಸ್ಟರ್‌ನಲ್ಲಿ ವ್ಯಾವಹಾರಿಕ ಕನ್ನಡ (ಈಣಟಿಛಿಣಠಿಚಿಟ ಏಚಿಟಿಟಿಚಿಜಚಿ) ಮತ್ತು ತಮ್ಮ ಇಚ್ಛೆಯ ಮತ್ತೊಂದು ಭಾಷೆಯನ್ನು ಕಲಿಯಬಹುದು. ಉಳಿದ ಮೂರು ಸೆಮಿಸ್ಟರ್‌ಗಳಲ್ಲಿ ತಮ್ಮ ಆಯ್ಕೆಯ ಯಾವುದೇ ಎರಡು ಭಾಷೆಗಳನ್ನು ಕಲಿಯಬಹುದು.

ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ಸಚಿವರು ಈ ಸುದೀರ್ಘವಾದ ಪ್ರಶ್ನಾವಳಿಗೆ ನೀಡಿರುವ ಉತ್ತರದಿಂದ ಖಂಡಿತವಾಗಿ ಎಲ್ಲರ ಅನುಮಾನ ಮತ್ತು ಆತಂಕಗಳು ದೂರವಾಗಲಿದೆ ಎಂದು ಭಾವಿಸಲಾಗಿದೆ.



Downloaded From: www.kpscvaani.com



# ಯಶಸ್ವಿಯಾಗಿ ನಡೆದ ವಿಧಾನಮಂಡಲ ಮುಂಗಾರು ಅಧಿವೇಶನ

**ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ತಮ್ಮ ಮೊದಲ ವಿಧಾನಮಂಡಲ ಅಧಿವೇಶವನ್ನು ಅತ್ಯಂತ ಯಶಸ್ವಿಯಾಗಿ ನಿಭಾಯಿಸಿದ್ದಾರೆ. ಇತ್ತೀಚಿನ ದಿನಗಳಲ್ಲೇ ಅತ್ಯಂತ ಫಲಪ್ರದ ಮತ್ತು ಅರ್ಥಪೂರ್ಣ ಎಂಬ ಹೆಗ್ಗಳಿಕೆಗೆ ಮುಂಗಾರು ಅಧಿವೇಶನ ಪಾತ್ರವಾಗಿದ್ದು, ಅಧಿವೇಶನದ ಒಂದು ಸಾರಾಂಶವನ್ನು ಈ ಲೇಖನದಲ್ಲಿ ಪ್ರಸ್ತುತ ಪಡಿಸಲಾಗಿದೆ.**

ನಂಜುಂಡಪ್ಪ.ವಿ

ಅಧಿವೇಶನ ಸಂಸದೀಯ ಪ್ರಜಾತಂತ್ರ ವ್ಯವಸ್ಥೆಯ ಜೀವಾಳ. ಬಸವರಾಜ ಎಸ್ ಬೊಮ್ಮಾಯಿ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಒಂದೂವರೆ ತಿಂಗಳ ಬಳಿಕ ಸೆಪ್ಟೆಂಬರ್ 13 ರಿಂದ 24 ರ ವರೆಗೆ ಬೆಂಗಳೂರಿನಲ್ಲಿ ನಡೆದ ಮುಂಗಾರು ಅಧಿವೇಶನ ಧರಣಿ, ಪ್ರತಿಭಟನೆ, ಕೋಲಾಹಲಗಳ ಬದಲಿಗೆ ವಿವಿಧ ವಿಷಯಗಳ ಬಗ್ಗೆ ವ್ಯಾಪಕ ಚರ್ಚೆ, ಸಂವಾದ, ವಾದ, ಪ್ರತಿವಾದಕ್ಕೆ ವೇದಿಕೆಯಾಗಿ ಹಲವಾರು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಸಫಲವಾಗಿದೆ. ಮೋಡ ಮುಸುಕಿದ ವಾತಾವರಣ, ಆಗ್ಗಾಗ್ಗೆ ಸುರಿದ ಮಳೆಯ ನಡುವೆಯೂ ನಾಡಿನ ನಾನಾ ಸಮಸ್ಯೆಗಳು ಸದನದಲ್ಲಿ ಪ್ರತಿಧ್ವನಿಸಿದವು. ಯಾವುದೇ ಜಟಿಲ ವಿಷಯವಾದರೂ ಚರ್ಚೆ, ಸಂವಾದದ ಮೂಲಕ ಅದಕ್ಕೆ ಪರಿಹಾರ ಕಂಡುಕೊಳ್ಳಬೇಕು ಎನ್ನುವುದು ಸಂಸದೀಯ ವ್ಯವಸ್ಥೆಯ ಸತ್ ಸಂಪ್ರದಾಯವಾಗಿದೆ. ಈ ಬಾರಿ ಇದೇ ತಳಹದಿಯ ಮೇಲೆ ಅಧಿವೇಶನ ನಡೆದಿದ್ದು, ಮತ್ತೆ ಸಂಸದೀಯ ಉತ್ಸವಕ್ಕೆ ಜೀವ ಕಳೆ ಬಂದಂತಾಗಿದೆ.

ಯಾವುದೇ ಅಧಿವೇಶನ ಸರ್ಕಾರಕ್ಕೆ ಅಗ್ನಿ ಪರೀಕ್ಷೆ. ಇಂತಹ ಸಂಸದೀಯ ಹಬ್ಬ ವರ್ಷದಲ್ಲಿ ಕನಿಷ್ಠ 100 ದಿನಗಳಿಗೂ ಹೆಚ್ಚು ಕಾಲ ನಡೆಯಬೇಕು ಎನ್ನುವ ಬೇಡಿಕೆ ಮೊದಲಿನಿಂದಲೂ ಇದೆ. ಈ ಹಿಂದೆ ಹಲವು ಬಾರಿ ಕಲಾಪದ ದಿನಗಳು ಶತಕದ ಗಡಿ ದಾಟಿದ ಉದಾಹರಣೆಗಳಿವೆ. ಆದರೆ ಇತ್ತೀಚಿನ ದಿನಗಳಲ್ಲಿ ಕಲಾಪದ ಪ್ರಮಾಣ ಕ್ಷೀಣಿಸುತ್ತಿದ್ದು, ಗುಣಮಟ್ಟವೂ ಕುಸಿಯುತ್ತಿದೆ. ಹೀಗಾಗಿಯೇ ವರ್ಷದಲ್ಲಿ ಕನಿಷ್ಠ 60 ದಿನಗಳ ಕಾಲ ಕಲಾಪ ನಡೆಯಬೇಕು ಎನ್ನುವ ನಿಯಮವನ್ನು ಸಹ ಜಾರಿಗೆ ತರಲಾಗಿದೆ. ಈ ಆಶಯಕ್ಕೆ ಪೂರಕವಾಗಿ ಕೋವಿಡ್ ಎರಡನೇ ಅಲೆ ಬಳಿಕ ಈ ಬಾರಿಯ ಮುಂಗಾರು ಅಧಿವೇಶನದಲ್ಲಿ 10 ದಿನಗಳ ಕಾಲ ಸದನ ನಡೆದು ಸಫಲವಾಗಿ ಸಂಪನ್ನಗೊಂಡಿದೆ.



Downloaded From: www.kpscvaani.com

## ಲೋಕಸಭಾಧ್ಯಕ್ಷರ ಭಾಷಣ

**ಅಧಿವೇಶನದ ಕೊನೆಯ ದಿನ ಸ್ವಾತಂತ್ರ್ಯ ಅಮೃತಮಹೋತ್ಸವದ ಹಿನ್ನೆಲೆಯಲ್ಲಿ ವಿಧಾನಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಭಾಷಣ ಮಾಡಿದರು. ಲೋಕಸಭೆಯ ಮಾದರಿಯಲ್ಲಿ ಅತ್ಯುತ್ತಮ ಶಾಸಕ ಪ್ರಶಸ್ತಿಯನ್ನು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಲೋಕಸಭಾ ಸಭಾಧ್ಯಕ್ಷರು ಪ್ರಶಸ್ತಿ ಪ್ರದಾನ ಮಾಡಿದರು.**

ಸ್ವತಃ ಬಸವರಾಜ ಬೊಮ್ಮಾಯಿ ಅವರು ನುರಿತ ಸಂಸದೀಯಪಟು. ಈ ಹಿಂದೆ ಜಲ ಸಂಪನ್ಮೂಲ, ಗೃಹ ಮತ್ತಿತರ ಪ್ರಮುಖ ಖಾತೆಗಳನ್ನು ನಿಭಾಯಿಸಿದ ಅನುಭವಿ. ಅವರ ಸಂಪುಟದಲ್ಲಿ ಸಚಿವರಾಗಿರುವ ಆರಗ ಜ್ಞಾನೇಂದ್ರ, ವಿ.ಸುನೀಲ್ ಕುಮಾರ್, ಬಿ.ಸಿ.ನಾಗೇಶ್, ಹಾಲಪ್ಪ ಆಚಾರ್, ಶಂಕರ್ ಪಾಟೀಲ ಮುನೇನಕೊಪ್ಪ, ಮುನಿರತ್ನ ಅವರಿಗೂ ಇದು ಚೊಚ್ಚಲ ಅಧಿವೇಶನವಾಗಿತ್ತು. ಇಡೀ ಸರ್ಕಾರ ಅಧಿವೇಶನವನ್ನು ಯಶಸ್ವಿಯಾಗಿ ನಡೆಸಿ ಸೈ ಎನಿಸಿಕೊಂಡಿದೆ.

ಅಧಿವೇಶನ ಪ್ರಾರಂಭಕ್ಕೂ ಮುನ್ನ ಎಲ್ಲಾ ಸಚಿವರು ಕಲಾಪದಲ್ಲಿ ಪಾಲ್ಗೊಳ್ಳಬೇಕು ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ವಿಧಾನಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಅವರು ಮುಖ್ಯಮಂತ್ರಿ ಅವರಿಗೆ ಪತ್ರ ಬರೆದಿದ್ದರು. ಇದೇ ರೀತಿ ಅಧಿಕಾರಿಗಳು ಸಹ ಕಲಾಪದಿಂದ ದೂರ ಉಳಿಯಬಾರದು ಎಂದು ಮುಖ್ಯಕಾರ್ಯದರ್ಶಿ ಅವರಿಗೆ ಪತ್ರ ಬರೆದಿದ್ದರು. ಈ ಪ್ರಯತ್ನ ಯಶಸ್ವಿಯಾಗಿದ್ದು, ಅಧಿಕಾರಿಗಳು ಮತ್ತು ಸಚಿವರ ಗೈರು ಹಾಜರಿ ಬಗ್ಗೆ ಅಷ್ಟಾಗಿ ಆಕ್ಷೇಪ ಕೇಳಿ ಬರಲಿಲ್ಲ.

ಇನ್ನು ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಅಗತ್ಯ ವಸ್ತುಗಳಾದ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲದ ಬೆಲೆ ಏರಿಕೆ, ಕೋವಿಡ್ ಸಂಕಷ್ಟದ ನಂತರ ದಿನದಿಂದ ದಿನಕ್ಕೆ ದುಬಾರಿಯಾಗುತ್ತಿರುವ ಜನಸಾಮಾನ್ಯರ ಬದುಕಿನ ಬವಣೆಗಳನ್ನು ಪ್ರತಿಪಕ್ಷ ಸದಸ್ಯರು ಸದನದಲ್ಲಿ ಪ್ರಸ್ತಾಪಿಸಿದರು. ಹಣಕಾಸು ವಿಷಯದಲ್ಲಿ ಪರಿಣಿತರಾದ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ವಿಧಾನಸಭೆಯಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆ ಕುರಿತು ಎಳೆಎಳೆಯಾಗಿ ಅನಾವರಣಗೊಳಿಸಿದರು. ಜೆಡಿಎಸ್ ನಾಯಕ ಎಚ್.ಡಿ. ಕುಮಾರ ಸ್ವಾಮಿ, ಮತ್ತಿತರ ಪ್ರತಿಪಕ್ಷ ಸದಸ್ಯರ ಪ್ರಸ್ತಾಪಗಳಿಗೆ ಅಷ್ಟೇ ದಕ್ಷತೆ ಮತ್ತು ಚಾಣಕ್ಯತನದಿಂದ ಮುಖ್ಯಮಂತ್ರಿ ಅವರು ಉತ್ತರ ನೀಡಿದ್ದು ಸಹ ಗಮನಾರ್ಹವಾಗಿತ್ತು.

ಸರ್ಕಾರದ ಬೊಕ್ಕಸಕ್ಕೆ ಅಗತ್ಯವಾಗಿದ್ದ 10,265 ಕೋಟಿ ರೂಪಾಯಿ ಪೂರಕ ಅಂದಾಜುಗಳಿಗೆ ಅನುಮೋದನೆ ದೊರೆತು ಸರ್ಕಾರದ ಶಾಸನ ಬದ್ಧ ವೆಚ್ಚಕ್ಕೆ ಸದನ ರಹದಾರಿ ಮಾಡಿಕೊಟ್ಟಿದೆ. ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರ ವಿರೋಧದ ನಡುವೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ [ತಿದ್ದುಪಡಿ] ವಿಧೇಯಕ ಉಭಯ ಸದನಗಳಲ್ಲಿ ಅನುಮೋದನೆ ಪಡೆಯಿತು. ಇದರಿಂದ ಜಿಲ್ಲಾ, ತಾಲ್ಲೂಕು ಪಂಚಾಯತ್‌ಗಳ ಕ್ಷೇತ್ರ ಪುನರ್ವಿಂಗಡಣೆ ರದ್ದಾಗಲಿದ್ದು, ಹೊಸದಾಗಿ ಕ್ಷೇತ್ರಗಳನ್ನು ವಿಂಗಡಣೆ ಮಾಡುವ ಅನಿವಾರ್ಯತೆ ಸೃಷ್ಟಿಯಾಗಿದೆ.

ಆನ್ ಲೈನ್ ಜೂಜನ್ನು ಶಿಕ್ಷಾರ್ಹ ಅಪರಾಧವನ್ನಾಗಿ ಮಾಡುವ "ಕರ್ನಾಟಕ ಪೊಲೀಸ್ [ತಿದ್ದುಪಡಿ] ವಿಧೇಯಕ" ಅಂಗೀಕಾರಗೊಂಡಿರುವುದು ಉತ್ತಮ ಬೆಳವಣಿಗೆ. ಆಧುನಿಕ ಜಗತ್ತಿನಲ್ಲಿ ತಂತ್ರಜ್ಞಾನ ಆಧಾರಿತವಾಗಿ ಬೆಳೆಯುತ್ತಿರುವ ಆನ್ ಲೈನ್ ಜೂಜು ನಿರ್ಬಂಧಿಸುವುದು ಈ ತಿದ್ದುಪಡಿಯ ಉದ್ದೇಶವಾಗಿದೆ. ಜೂಜಿನಲ್ಲಿ ತೊಡಗಿಕೊಂಡರೆ ಈಗಿರುವ ಒಂದು ವರ್ಷದ ಬದಲಾಗಿ ಮೂರು ವರ್ಷಗಳ ಸೆರೆವಾಸ ಮತ್ತು ದಂಡದ ಪ್ರಮಾಣವನ್ನು ಒಂದು ಸಾವಿರದಿಂದ ಒಂದು ಲಕ್ಷ ರೂ ವರೆಗೆ ಹೆಚ್ಚಿಸುವುದು ಇದರ ತಿರುಳಾಗಿದೆ. ಇದು ಈಗ ಕಾನೂನಾಗಿ ಪರಿವರ್ತನೆಯಾಗಿದ್ದು, ಜೂಜಿನಲ್ಲಿ ತೊಡಗುವವರ ಮೇಲೆ ಕ್ರಮ ಕೈಗೊಳ್ಳುವ ಪ್ರಕ್ರಿಯೆಯೂ ಆರಂಭಗೊಂಡಿದೆ.

ಇನ್ನು ಅಧಿವೇಶನದ ಮೊದಲಾರ್ಧದಲ್ಲಿ ನೀರಾವರಿ ವಿಷಯಗಳ ಕುರಿತಂತೆಯೂ ಗಹನವಾದ ಚರ್ಚೆ ನಡೆಯಿತು. ಉತ್ತರ ಕರ್ನಾಟಕದ ಮಹದಾಯಿ, ಕೃಷ್ಣಾ, ದಕ್ಷಿಣ ಕರ್ನಾಟಕದ ಮೇಕೆದಾಟು, ಎತ್ತಿನ ಹೊಳೆ ನೀರಾವರಿ ಯೋಜನೆಗಳ ಬಗ್ಗೆ ಉಭಯ ಸದನಗಳಲ್ಲೂ ಸದಸ್ಯರು ಚರ್ಚೆ ನಡೆಸಿದರು. ಆಡಳಿತ, ಪ್ರತಿಪಕ್ಷ ಎಂಬ ಬೇಧವಿಲ್ಲದೇ ಎಲ್ಲಾ ಸದಸ್ಯರು ನೀರಿನ ವಿಚಾರದಲ್ಲಿ ಧ್ವನಿ ಎತ್ತಿ ನೆಲ, ಜಲ, ಭಾಷೆ ವಿಚಾರದಲ್ಲಿ ಸತ್ ಸಂಪ್ರದಾಯವನ್ನು ಸದಸ್ಯರು ಪರಿಪಾಲನೆ ಮಾಡಿದರು. ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಸದಸ್ಯರ ಕಳಕಳಿಗೆ ಸ್ಪಂದಿಸಿ, ಮಹದಾಯಿ, ಮೇಕೆದಾಟು ಯೋಜನೆಗಳ ಜಾರಿಗೆ ಸರ್ಕಾರ ಬದ್ಧವಾಗಿದ್ದು, ರಾಜ್ಯದ ಜಲ ರಕ್ಷಣೆಗಾಗಿ ಕಾನೂನು ಹೋರಾಟಕ್ಕೂ ಸರ್ಕಾರ ಸಮರ್ಥವಾಗಿ ಅಣಿಯಾಗಿದೆ ಎಂದು ಹೇಳಿದರು.

ಮಳೆಯಿಂದ ಆಗಿರುವ ನೆರೆ ಹಾವಳಿ ಮತ್ತಿತರ ಮಹತ್ವದ ವಿಷಯಗಳ ಚರ್ಚೆಗೆ ಉಭಯ ಸದನಗಳಲ್ಲೂ ಚರ್ಚೆಗೆ ಅವಕಾಶ ಕಲ್ಪಿಸಲಾಗಿತ್ತು. ಪ್ರತಿಪಕ್ಷಗಳು ಸಹ ತಮ್ಮ ಕರ್ತವ್ಯ ಅರಿತು ಜನಪರವಾಗಿ ಕಾರ್ಯ ನಿರ್ವಹಿಸಿದವು. 2021ನೇ ಸಾಲಿನ ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮ ಸಾರ ಚರಂಡಿ ವ್ಯವಸ್ಥೆ (ತಿದ್ದುಪಡಿ) ವಿಧೇಯಕ, 2021ನೇ ಸಾಲಿನ ಕರ್ನಾಟಕ ಕೃಷಿ ಸಂಬಂಧ ಕೀಟಗಳು ಮತ್ತು ರೋಗಗಳ (ತಿದ್ದುಪಡಿ) ವಿಧೇಯಕ, ಬಂದಿಗಳ ಗುರುತಿಸುವಿಕೆ (ಕರ್ನಾಟಕ ತಿದ್ದುಪಡಿ) ವಿಧೇಯಕ, ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ ಹಾಗೂ ಕರ್ನಾಟಕ ಬಂದೀಖಾನೆ ಅಭಿವೃದ್ಧಿ ಮಂಡಳಿ ವಿಧೇಯಕ, ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕ, ಕರ್ನಾಟಕ ಧಾರ್ಮಿಕ ಕಟ್ಟಡಗಳ (ಸಂರಕ್ಷಣೆ) ವಿಧೇಯಕ ಸೇರಿ ಹಲವು ವಿಧೇಯಕಗಳಿಗೆ ವಿಧಾನಮಂಡಲದಲ್ಲಿ ಅನುಮೋದನೆ ದೊರೆತಿದೆ.

ಇನ್ನು ಕೋವಿಡ್ ಎರಡನೇ ಅಲೆ ನಿಭಾಯಿಸುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಮತ್ತಿತರರು ವಿಧಾನಸಭೆಯಲ್ಲಿ ಮಾಡಿದ ಟೀಕೆಗೆ ಅಧಿವೇಶನದ ಕೊನೆಯ ದಿನ ಉತ್ತರಿಸಿದ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ. ಸುಧಾಕರ್, ಕರ್ನಾಟಕ ಈ ಆರೋಗ್ಯ ಸಮಸ್ಯೆಯನ್ನು ಉತ್ತಮವಾಗಿ ನಿರ್ವಹಣೆ ಮಾಡಿದೆ. ಕೋವಿಡ್ ಮೊದಲ ಅಲೆಗೂ ಮುನ್ನ ರಾಜ್ಯದಲ್ಲಿ 750 ಐಸಿಯು, ವೆಂಟಿಲೇಟರ್‌ಗಳು ಇದ್ದವು. ನಾವು ಒಂದೇ



Downloaded From: www.kpscvaani.com

ವರ್ಷದಲ್ಲಿ 3887 ಐಸಿಯು, ವೆಂಟಿಲೇಟರ್ ಸೌಲಭ್ಯ ಕಲ್ಪಿಸಿದ್ದೇವೆ. ಆಕ್ಸಿಜನ್ ಸಹಿತಿ 4445 ಹಾಸಿಗೆಗಳು ಇದ್ದವು. ಒಂದು ವರ್ಷದಲ್ಲಿ 28440 ಆಕ್ಸಿಜನ್ ಸಹಿತ ಹಾಸಿಗೆ ಸೌಲಭ್ಯ ಒದಗಿಸಿದ್ದೇವೆ. ಆಯುಷ್ಮಾನ್ ಭಾರತ ಯೋಜನೆ ವಿಶ್ವದಲ್ಲೇ ಅತಿದೊಡ್ಡ ಆರೋಗ್ಯ ವಿಮಾ ಯೋಜನೆಯಾಗಿದೆ. ಇದು 10 ಕೋಟಿ ಕುಟುಂಬಗಳ ಸುಮಾರು 50 ಕೋಟಿ ಜನರಿಗೆ ಪ್ರಯೋಜನವಾಗಿದೆ ಎಂದು ಸಚಿವ ಡಾ.ಕೆ. ಸುಧಾಕರ್ ಸ್ಪಷ್ಟವಾದ ಮಾಹಿತಿ ನೀಡಿದರು.

ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ನಿರ್ದಿಷ್ಟವಾಗಿ ವಿಧಾನಸಭೆಯಲ್ಲಿ ವಾದ, ಪ್ರತಿವಾದ, ವಾಗ್ವಾದ ನಡೆಯಿತು. ರಾಜ್ಯ ಸರ್ಕಾರ ಜಾರಿಗೆ ತರುತ್ತಿರುವ ನೂತನ ಶಿಕ್ಷಣ ನೀತಿ ಬಗ್ಗೆ ಸದನದಲ್ಲಿ ಚರ್ಚೆಯಾಗಬೇಕು. ಸರ್ಕಾರ ಏಕಿಷ್ಟು ಆತುರವಾಗಿ ಇದನ್ನು ಅನುಷ್ಠಾನಗೊಳಿಸುತ್ತಿದೆ ಎಂದು ಪ್ರತಿಪಕ್ಷದ ಸದಸ್ಯರು ಪ್ರಶ್ನಿಸಿದರು. ಇದಕ್ಕೆ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ನೂತನ ನೀತಿ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ತಜ್ಞರು, ಶಿಕ್ಷಣ ಪ್ರೇಮಿಗಳು, ಸಮಾಜ ಸೇವಕರು ಸೇರಿ ಅನೇಕರ ಜೊತೆ ಚರ್ಚಿಸಿ ಈ ನೀತಿ ಜಾರಿಗೆ ತರಲಾಗಿದೆ. ಕಾಂಗ್ರೆಸಿಗರು ಈವರೆಗೂ ವಿದೇಶಿ ಶಿಕ್ಷಣವನ್ನೇ ನೆಚ್ಚಿಕೊಂಡಿದ್ದರು. ಪ್ರಧಾನಿ ನರೇಂದ್ರ ಮೋದಿ ಈಗ ಸ್ವದೇಶಿ ನೀತಿಯನ್ನು ಜಾರಿಗೆ ತಂದಿದ್ದಾರೆ ಎಂದು ಬಲವಾಗಿ ಸಮರ್ಥಿಸಿಕೊಂಡರು.

**ಕೊನೆಯ ದಿನ, ಕಲಾಪದ ಕೊನೆಯಲ್ಲಿ**

ಕಲಾಪದ ಕೊನೆಯ ದಿನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನು ಸದನದಲ್ಲಿ ಮಂಡಿಸಿದರು. ಧನ ವಿನಿಯೋಗ ವಿಧೇಯಕ ಸೇರಿದಂತೆ 17 ವಿಧೇಯಕ ಮಂಡಿಸಲಾಗಿದ್ದು, 19 ವಿಧೇಯಕಗಳನ್ನು ಅಂಗೀಕರಿಸಲಾಗಿದೆ. 21 ಸೂಚನೆಗಳನ್ನು ನಿಯಮ 69ರಡಿಯಲ್ಲಿ ಸ್ವೀಕರಿಸಿ ಐದು ಸೂಚನೆಗಳನ್ನು ಮಂಡಿಸಲಾಗಿದೆ. ಗಮನ ಸೆಳೆಯುವ 361 ಪ್ರಸ್ತಾವಗಳ ಪೈಕಿ 58 ಪ್ರಸ್ತಾವಗಳ ಕುರಿತು ಸದನದಲ್ಲಿ ಚರ್ಚೆಯಾಗಿದೆ. ಇದರಲ್ಲಿ 41 ಉತ್ತರಗಳನ್ನು ಮಂಡಿಸಲಾಗಿದೆ. ಶೂನ್ಯ ವೇಳೆಯಲ್ಲಿ 21 ಮಂದಿ ಸದಸ್ಯರು ವಿವಿಧ ವಿಷಯಗಳ ಕುರಿತು ಸದನದಲ್ಲಿ ಪ್ರಸ್ತಾಪಿಸಿದ್ದಾರೆ. ಈ ಬಾರಿಯ ಅಧಿವೇಶನದಲ್ಲಿ ಶೇ.90ಕ್ಕಿಂತ ಹೆಚ್ಚು ಕಾರ್ಯಕಲಾಪಗಳನ್ನು ನಡೆಸಲಾಗಿದೆ ಎಂದು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹರ್ಷ ವ್ಯಕ್ತಪಡಿಸಿದರು. ನಂತರ ರಾಷ್ಟ್ರಗೀತೆಯ ಬಳಿಕ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದರು.

ಇನ್ನು ಕೊನೆಯ ದಿನ ಮೇಲ್ಮನೆಯಲ್ಲಿ ಮೈಸೂರಿನ ಅತ್ಯಾಚಾರ ಪ್ರಕರಣ ಪ್ರತಿಧ್ವನಿಸಿತು. ನಿಯಮ 330ರ ಅಡಿ ನಡೆದ ಚರ್ಚೆಗೆ ಸರ್ಕಾರದ ಪರವಾಗಿ ಉತ್ತರಿಸಿದ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧು ಸ್ವಾಮಿ, ಅತ್ಯಾಚಾರಿಗಳು ಮತ್ತು ಲೈಂಗಿಕ ದೌರ್ಜನ್ಯ ಪ್ರಕರಣಗಳನ್ನು ತಡೆಗಟ್ಟಲು ಶಿಕ್ಷೆಯ ಪ್ರಮಾಣ ಹೆಚ್ಚಿಸಲು ಕಠಿಣ ಕಾನೂನು ತರುವ ಜೊತೆಗೆ ಕಾಯ್ದೆಗೆ ಅಗತ್ಯ ತಿದ್ದುಪಡಿ ಮಾಡಲಾಗುವುದು. ತಿದ್ದುಪಡಿ ತರುವ ಸಂಬಂಧ ಸರ್ಕಾರ ಕಾನೂನು ತಜ್ಞರೊಂದಿಗೆ ಚರ್ಚೆ ನಡೆಸಲಿದೆ. ಅತ್ಯಾಚಾರಿಗಳಿಗೆ ಕಠಿಣ ಕಾನೂನು ಜಾರಿ ಮಾಡುವ ಕುರಿತು ಕಾನೂನು ಆಯೋಗದ ಮೂಲಕ ವರದಿ ಆಧರಿಸಿ ಕೇಂದ್ರಕ್ಕೆ ಶಿಫಾರಸ್ಸು ಮಾಡಲಾಗುವುದು. ಮಹಿಳೆಯರು ಮತ್ತು ಮಕ್ಕಳ ಮೇಲೆ ನಡೆಯುವ ಅತ್ಯಾಚಾರ, ಲೈಂಗಿಕ ದೌರ್ಜನ್ಯ ಪ್ರಕರಣಗಳನ್ನು ಸಮರ್ಥನೆ ಮಾಡಿಕೊಳ್ಳುವುದಿಲ್ಲ ಎಂದು ಹೇಳಿದರು.

ರಾಜ್ಯದ ಪ್ರವಾಸಿತಾಣ, ದೇವಸ್ಥಾನಗಳು, ಹುಡುಗ-ಹುಡುಗಿ ಭೇಟಿ ನೀಡುವಂತಹ ಸ್ಥಳಗಳಲ್ಲಿ ಪೊಲೀಸ್ ಕಾವಲು ಮತ್ತಷ್ಟು ಹೆಚ್ಚು ಮಾಡಲಾಗುವುದು. ಪೋಕ್ಸೋ ಪ್ರಕರಣಗಳಡಿ ದಾಖಲಾಗುವ ವಿಚಾರಣೆಗಳ ಸಂದರ್ಭದಲ್ಲಿ ಪುರುಷ ವಕೀಲರ ಮುಂದೆ ಸಂತ್ರಸ್ತೆ ಕೆಲವು ವಿಚಾರಗಳನ್ನು ಹಂಚಿಕೊಳ್ಳುವಾಗ ಮುಜುಗರವಾಗಬಹುದು ಎಂಬ ಏಕೈಕ ಉದ್ದೇಶದಿಂದ ಮಹಿಳಾ ವಕೀಲರನ್ನು ನೇಮಕ ಮಾಡಲು ಸರ್ಕಾರ ಮುಂದಾಗಿದೆ. ಪೋಕ್ಸೋ, ಅತ್ಯಾಚಾರ ಪ್ರಕರಣಗಳನ್ನು ಶೀಘ್ರ ಗತಿಯಲ್ಲಿ ತನಿಖೆ ನಡೆಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಲು ಸರ್ಕಾರ ಶ್ರಮಿಸಲಿದೆ ಎಂದು ಹೇಳಿದರು.




ಬಳಿಕ ಪೀಠದಲ್ಲಿದ್ದ ಉಪ ಸಭಾಪತಿ ಎಂ.ಕೆ ಪ್ರಾಣೇಶ್ ಅವರು, ವಿಧಾನಸಭೆಯಿಂದ ಅಂಗೀಕಾರ ರೂಪದಲ್ಲಿದ್ದ " ಧಾರ್ಮಿಕ ಸಂರಕ್ಷಣೆ ವಿದೇಯಕ 2021 " ಅನ್ನು ಮುಖ್ಯಮಂತ್ರಿಗಳ ಪರವಾಗಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ ಮಾಧುಸ್ವಾಮಿ ಮಂಡಿಸಿ ವಿಧೇಯಕದ ಉದ್ದೇಶಗಳ ಬಗ್ಗೆ ವಿವರ ನೀಡಿದರು. ಎಲ್ಲಾ ಸಮುದಾಯಗಳ ಧಾರ್ಮಿಕ ಕೇಂದ್ರಗಳ ರಕ್ಷಣೆಗೆ ಹಾಗೂ ಕೋಮು ಸೌಹಾರ್ದತೆ ಕಾಪಾಡುವ ಸಲುವಾಗಿ ಮತ್ತು ಸಾರ್ವಜನಿಕರ ಯಾವುದೇ ಧಾರ್ಮಿಕ ಭಾವನೆಗಳಿಗೆ ನೋವಾಗದಂತೆ ಧಾರ್ಮಿಕ ಕಟ್ಟಡಗಳ ಸಂರಕ್ಷಣೆಗೆ ಈ ವಿಧೇಯಕ ತರಲಾಗಿದೆ ಎಂದರು. ಬಳಿಕ ವಿಧೇಯಕವನ್ನು ಮತಕ್ಕೆ ಹಾಕಿದಾಗ ಧ್ವನಿಮತದ ಅಂಗೀಕಾರ ದೊರೆಯಿತು.

ನಂತರ ಉಪ ಸಭಾಪತಿ ಪ್ರಾಣೇಶ್ ಅಧಿವೇಶನದ ವರದಿ ಮಂಡಿಸಿ, ಹತ್ತು ದಿನಗಳ ಅವಧಿಯಲ್ಲಿ ಖಾಸಗೀ ವಿಧೇಯಕ ಸೇರಿ 19 ವಿಧೇಯಕಗಳು ಅಂಗೀಕಾರವಾಗಿವೆ. ಹಲವು ವಿಷಯಗಳ ಕುರಿತು ಉಪಯುಕ್ತ ಚರ್ಚೆಗಳು ನಡೆದಿವೆ. 130 ಗಮನ ಸೆಳೆಯುವ ಸೂಚನೆ ಸ್ವೀಕರಿಸಿದ್ದು, ಅದರಲ್ಲಿ 27ಕ್ಕೆ ಉತ್ತರ ನೀಡಲಾಗಿದೆ. ಗಂಗಾ ಕಲ್ಯಾಣ ಯೋಜನೆ ಸೇರಿದಂತೆ ವಿವಿಧ ಯೋಜನೆಗಳಿಗೆ ಸಂಬಂಧಪಟ್ಟಂತೆ ರಚಿಸಲಾಗಿರುವ ಸದನ ಸಮಿತಿ ಅವಧಿ ವಿಸ್ತರಿಸಲಾಗಿದೆ. ಈ ಬಾರಿ ಸದನ ಯಶಸ್ವಿಯಾಗಿ ನಡೆದಿದೆ. ಇದಕ್ಕೆ ಎಲ್ಲರನ್ನೂ ಅಭಿನಂದಿಸುವುದಾಗಿ ತಿಳಿಸಿದರು.



Downloaded From: www.kpscvaani.com






# ಜಂಟಿ ಸದನದಲ್ಲಿ ಲೋಕಸಭಾಧ್ಯಕ್ಷರ ಭಾಷಣ

ಬಿ.ಜಿ. ಪೂರ್ಣಿಮ

**ದೇಶದ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಆಚರಣೆಯ ಅಂಗವಾಗಿ ರಾಜ್ಯ ಸರ್ಕಾರದ ಆಹ್ವಾನದ ಮೇರೆಗೆ ಆಗಮಿಸಿದ ಲೋಕಸಭಾಧ್ಯಕ್ಷರಾದ ಓಂ ಬಿರ್ಲಾ ಅವರು ಜಂಟಿ ಸದನವನ್ನು ಉದ್ದೇಶಿಸಿ ಮಾಡಿದ ಭಾಷಣದ ಸಾರಾಂಶ.**

ಲೋಕಸಭಾಧ್ಯಕ್ಷರಾದ ಓಂ ಬಿರ್ಲಾ ಅವರು "ಪ್ರಜಾಪ್ರಭುತ್ವ ಸಂಸದೀಯ ಮೌಲ್ಯಗಳ ರಕ್ಷಣೆ" ವಿಷಯದ ಕುರಿತು ಸೆಪ್ಟೆಂಬರ್ 24 ರಂದು ರಾಜ್ಯ ವಿಧಾನಮಂಡಲದಲ್ಲಿ ಉಭಯ ಸದನಗಳ ಸದಸ್ಯರಿಗೆ ಸದನದ ಘನತೆಯನ್ನು ಕಾಪಾಡುವ ಕುರಿತು ಹಲವು ಸಲಹೆಗಳನ್ನು ನೀಡಿದರು.

ಸದನದ ಕಲಾಪಗಳಲ್ಲಿ ಸಾರ್ವಜನಿಕ ಹಿತಾಸಕ್ತಿ ಕಾಪಾಡುವಂತಹ ವಿಧೇಯಕಗಳು ಅಂಗೀಕಾರಗೊಳ್ಳುತ್ತವೆ. ಆದರೆ ಕಲಾಪಗಳಿಗೆ ಅಡಚಣೆಯಾದಲ್ಲಿ ವಿಧೇಯಕಗಳು ಚರ್ಚೆಗಳಿಲ್ಲದೆ



Downloaded From: www.kpscvaani.com

## ಯಡಿಯೂರಪ್ಪ ಅವರಿಗೆ ಅತ್ಯುತ್ತಮ ಶಾಸಕ ಪ್ರಶಸ್ತಿ

ಇದೇ ಪ್ರಥಮ ಬಾರಿಗೆ ಪ್ರಸಕ್ತ ಸಾಲಿನಿಂದ ನೀಡುತ್ತಿರುವ "**ಅತ್ಯುತ್ತಮ ಶಾಸಕ ಪ್ರಶಸ್ತಿ**"ಯನ್ನು ಲೋಕಸಭಾಧ್ಯಕ್ಷರಾದ ಓಂ ಬಿರ್ಲಾ ಅವರು ಮಾಜಿ ಮುಖ್ಯಮಂತ್ರಿ ಹಾಗೂ ಸದನದ ಹಿರಿಯ ಶಾಸಕರಾದ ಬಿ.ಎಸ್. ಯಡಿಯೂರಪ್ಪ ಅವರಿಗೆ ಪ್ರದಾನ ಮಾಡಿದರು. ಶಿಸ್ತಿನ ಸಂಸದೀಯ ನಡವಳಿಕೆಗೆ ಉತ್ತೇಜನ ನೀಡುವ ಸಲುವಾಗಿ ಲೋಕಸಭೆಯಲ್ಲಿ ನೀಡಲಾಗುತ್ತಿರುವ ಪ್ರಶಸ್ತಿಯಂತೆ ರಾಜ್ಯದಲ್ಲೂ ಅತ್ಯುತ್ತಮ ಶಾಸಕ ಪ್ರಶಸ್ತಿಯನ್ನು ಪ್ರಸಕ್ತ ಸಾಲಿನಿಂದ ಆರಂಭಿಸಲಾಗಿದೆ. ಸಂಸದೀಯ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಬೇಕೆಂಬ ಉದ್ದೇಶದಿಂದ ರಚಿಸಲಾಗಿರುವ ಸಮಿತಿಗೆ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಅಧ್ಯಕ್ಷರಾಗಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಕಾನೂನು ಸಂಸದೀಯ ವ್ಯವಹಾರ ಸಚಿವರಾದ ಜೆ.ಸಿ. ಮಾಧುಸ್ವಾಮಿ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಹಿರಿಯ ಶಾಸಕಾರದ ಆರ್.ವಿ.ದೇಶಪಾಂಡೆ ಸಮಿತಿಯ ಸದಸ್ಯರಾಗಿದ್ದಾರೆ. ಈ ಸಮಿತಿಯು ಪ್ರಸಕ್ತ ಸಾಲಿಗೆ ಬಿ.ಎಸ್.ಯಡಿಯೂರಪ್ಪ ಅವರಿಗೆ ಅತ್ಯುತ್ತಮ ಶಾಸಕ ಪ್ರಶಸ್ತಿಗೆ ಆಯ್ಕೆ ಮಾಡಿದೆ.

ಶಾಸಕರು ಮಾತ್ರ ಈ ಪ್ರಶಸ್ತಿಗೆ ಅರ್ಹರಾಗಿದ್ದು, ಮಂತ್ರಿಗಳು ಪ್ರಶಸ್ತಿ ವ್ಯಾಪ್ತಿಗೆ ಬರುವುದಿಲ್ಲ. ಅತ್ಯುತ್ತಮ ಶಾಸಕ ಪ್ರಶಸ್ತಿಗೆ ಪ್ರಥಮವಾಗಿ ಯಡಿಯೂರಪ್ಪ ಅವರು ಭಾಜನರಾಗಿದ್ದಾರೆ. ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಯಡಿಯೂರಪ್ಪ ಅವರು ವಿಧಾನಮಂಡಲದ ಇತಿಹಾಸದಲ್ಲಿ ಇದೇ ಪ್ರಥಮ ಬಾರಿಗೆ ನೀಡಲಾದ ಅತ್ಯುತ್ತಮ ಶಾಸಕ ಪ್ರಶಸ್ತಿಯನ್ನು ವಿನೀತ ಭಾವದಿಂದ ಸ್ವೀಕರಿಸಿದ್ದೇನೆ. ಜನರ ಆಶೋತ್ತರಗಳನ್ನು ಈಡೇರಿಸುವ ನಿಟ್ಟಿನಲ್ಲಿ ಪ್ರಜಾಪ್ರಭುತ್ವದ ವ್ಯವಸ್ಥೆಯೊಳಗೆ ನನ್ನ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸಿದ ತೃಪ್ತಿ ನನಗಿದೆ ಎಂದು ಹರ್ಷ ವ್ಯಕ್ತಪಡಿಸಿದರು. ವಿಧಾನಸಭಾಧ್ಯಕ್ಷರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಪ್ರಶಸ್ತಿ ಕುರಿತು ಮಾತನಾಡುತ್ತಾ, ರೈತನಾಯಕರಾಗಿ, ಜನತೆಯ ಆಗುಹೋಗುಗಳಿಗೆ ಸ್ಪಂದಿಸಿತ್ತಾ, ಸಂಸದೀಯ ವ್ಯವಸ್ಥೆಯಲ್ಲಿ 8 ಬಾರಿ ಗೆದ್ದು ಬಂದು, ರೈತರ ಸಾಲ ಮನ್ನಾ ಇನ್ನಿತರ ಅತ್ಯುತ್ತಮ ಕೆಲಸವನ್ನು ನಿರ್ವಹಿಸಿ, ಉಪ ಮುಖ್ಯಮಂತ್ರಿಯಾಗಿ, ನಾಲ್ಕು ಬಾರಿ ಮುಖ್ಯಮಂತ್ರಿಯಾಗಿ, ಸದನದಲ್ಲಿ ಸಕ್ರಿಯವಾಗಿ ಭಾಗವಹಿಸಿ ಬಿ.ಎಸ್. ಯಡಿಯೂರಪ್ಪ ಅವರು ಜನಸೇವೆಯನ್ನು ಜನಾರ್ಧನ ಸೇವೆ ಎಂಬಂತೆ ಮಾಡಿದ್ದಾರೆ. ಹಾಗಾಗಿ ಇಂತಹ ಪ್ರಶಸ್ತಿಗೆ ಮೊದಲ ಬಾರಿಗೆ ಯಡಿಯೂರಪ್ಪ ಅವರು ಆಯ್ಕೆಯಾಗಿರುವುದು ಪ್ರಶಸ್ತಿಯ ಹಿರಿಮೆಯನ್ನು ಹೆಚ್ಚಿಸಿದೆ ಎಂದರು.

**"ಪಕ್ಷಾಂತರ ನಿಷೇಧ ಕಾಯಿದೆ ಹಾಗೂ ಸ್ಪೀಕರ್ಸ್ ಅಧಿಕಾರ ಸಂಬಂಧ ಸಂವಿಧಾನದ 10 ನೇ ಪರಿಚ್ಛೇದದ ತಿದ್ದುಪಡಿ ಕರಡು ವರದಿ ಸಲ್ಲಿಕೆಯಾಗಿದ್ದು, ಈ ಕುರಿತಂತೆ ಅಕ್ಟೋಬರ್ 26 ರಿಂದ 28 ರವರೆಗೆ ಶಿಮ್ಲಾದಲ್ಲಿ ಜರುಗಲಿರುವ ಸ್ಪೀಕರ್ಸ್ ಸಮ್ಮೇಳನದಲ್ಲಿ ಚರ್ಚಿಸಿ ಅಂತಿಮ ರೂಪ ಕೊಡಲಾಗುವುದು."**

–ಓಂ ಬಿರ್ಲಾ, ಲೋಕಸಭಾ ಸ್ಪೀಕರ್

ಅಂಗೀಕಾರವಾಗುತ್ತದೆ. ಯಾವುದೇ ಸಾರ್ವಜನಿಕ ಹಿತಾಸಕ್ತಿಯ ವಿಧೇಯಕವು ಎರಡೂ ಸದನಗಳಲ್ಲಿ ಕೂಲಕುಂಶವಾಗಿ ಚರ್ಚೆ ಆದಾಗಲೇ ಸಾರ್ವಜನಿಕರಿಗೂ ವಿಧೇಯಕದ ಮೇಲೆ ಭರವಸೆ ಮೂಡುತ್ತದೆ. ಹಾಗಾಗಿ ಕಲಾಪದ ವೇಳೆ ಚರ್ಚೆಯಲ್ಲಿ ಎಲ್ಲೂರ ಪರಸ್ಪರ ಸೌಜನ್ಯ ಮತ್ತು ಗೌರವದಿಂದ ಪಾಲ್ಗೊಳ್ಳಬೇಕು. ಆದರೆ ಅಭಿಪ್ರಾಯ, ಭಿನ್ನತೆಗಳು ಶಾಸಕಾಂಗದ ಚೌಕಟ್ಟಿನಲ್ಲಿರಬೇಕು ಎಂದು ಅವರು ತಿಳಿಸಿದರು.

ತಮ್ಮ ಭಾಷಣದಲ್ಲಿ ಕಿತ್ತೂರು ಚೆನ್ನಮ್ಮ ಅವರನ್ನು ಸ್ಮರಿಸಿದ ಓಂ ಬಿರ್ಲಾ ಅವರು, ಚೆನ್ನಮ್ಮ ಅವರ ತ್ಯಾಗ ನಮಗೆ ಸ್ಫೂರ್ತಿ ಎಂದರು. ಅವರ ಆದರ್ಶಗಳೇ ನಮ್ಮ ಮೌಲ್ಯಗಳನ್ನು ಹೆಚ್ಚಿಸುತ್ತವೆ. ಸದನದಲ್ಲಿ ವಿರೋಧ, ಭಿನ್ನಮತ, ತರ್ಕ, ವಾದ–ವಾಗ್ವಾದ, ಚರ್ಚೆ ಎಲ್ಲವೂ ಇರಬೇಕು. ಆಗಲೇ ಪ್ರಜಾಪ್ರಭುತ್ವ ವ್ಯವಸ್ಥೆಗೆ ಒಂದು ಅರ್ಥ ಬರಲು ಸಾಧ್ಯ. ಆದರೆ ಚರ್ಚೆಯಿಂದ ಕಲಾಪಕ್ಕೆ ಅಡಚಣೆ ಉಂಟಾಗಬಾರದು. ಸಂಸದೀಯ ವ್ಯವಸ್ಥೆಗೆ ಘನತೆ ತರುವ ಹೊಣೆ ನಮ್ಮೆಲ್ಲರ ಮೇಲಿದೆ. ಕಲಾಪಗಳಿಗೆ ಅಡ್ಡಿಪಡಿಸುವುದು ಜನತೆಯ ಆಶೋತ್ತರಗಳಿಗೆ ಅಪಚಾರ ಮಾಡಿದಂತೆ. ಭಿನ್ನಮತ, ವಾಗ್ವಾದ, ಪ್ರತಿಭಟನೆಗಳು ಸದನದ ಘನತೆಗೆ ಅನುಗುಣವಾಗಿರಬೇಕು.

ಕಲಾಪವು ನಿಯಮಗಳಿಗೆ ಅನುಗುಣವಾಗಿ ಗೌರವ ಮತ್ತು ಘನತೆಯಿಂದ ನಡೆದಾಗ ಮಾತ್ರ ಪ್ರಜಾಪ್ರಭುತ್ವ ವ್ಯವಸ್ಥೆಯು ಹೆಚ್ಚು ಪರಿಪಕ್ವತೆಯತ್ತ ಮುನ್ನಡೆಯಲು ಸಾಧ್ಯ. ಹಾಗಾಗಿ ಸದಸ್ಯರೆಲ್ಲರೂ ಶಿಸ್ತಿನ ನಡವಳಿಕೆಯನ್ನು ಪ್ರದರ್ಶಿಸುವ ಮೂಲಕ ಸಭೆಯ ಘನತೆಯನ್ನು ಎತ್ತಿ ಹಿಡಿಯಬೇಕು ಎಂದು ಅವರು ಅಭಿಪ್ರಾಯಪಟ್ಟರು. ನಮ್ಮ ಪ್ರಜಾಪ್ರಭುತ್ವ ಜನಕೇಂದ್ರಿತವಾಗಿದ್ದು, ಇದರ ನಿರ್ಮಾತೃಗಳು ಸಂವಿಧಾನ ರೂಪಿಸುವಾಗ ಜನರ ಹಿತವನ್ನೇ ಪ್ರಮುಖವಾಗಿ ಗಮನದಲ್ಲಿಟ್ಟುಕೊಂಡಿದ್ದರು.

ಈವರೆಗೆ ಅನುಸರಿಸಿದ ಸಂಸದೀಯ ವ್ಯವಸ್ಥೆಯ ಪಾಲನೆಯಲ್ಲಿ ಪ್ರಜಾತಂತ್ರದ ಮೌಲ್ಯಗಳನ್ನು ಕಾಪಾಡುವಲ್ಲಿ ಪ್ರಜಾತಂತ್ರದ ಸಂಸ್ಥೆಗಳನ್ನು ಹೆಚ್ಚು ಜವಾಬ್ದಾರಿಯುತಗೊಳಿಸುವಲ್ಲಿ ಎಷ್ಟರ ಮಟ್ಟಿಗೆ ಯಶಸ್ವಿಯಾಗಿದ್ದೇವೆ ಎಂಬ ದಿಸೆಯಲ್ಲಿ ಎಲ್ಲ ರಾಜಕೀಯ ಪಕ್ಷಗಳು ಚಿಂತನೆ ಮಾಡಬೇಕು. ಜನಪ್ರತಿನಿಧಿಗಳು ಜನರ ಆಶೋತ್ತರಗಳನ್ನು ಪೂರೈಸುವ ಮಾಧ್ಯಮ. ಆದ್ದರಿಂದ ಜನರ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ಸದನದಲ್ಲಿ ಭಾಗಿಯಾಗುವ ಮೂಲಕ ಜನಪ್ರತಿನಿಧಿಗಳು ಶಿಸ್ತಿನ ನಡವಳಿಕೆಯನ್ನು ಅಳವಡಿಸಿಕೊಳ್ಳುವಂತೆ ಅವರು ಸದನದ ಸದಸ್ಯರಿಗೆ ಕಿವಿಮಾತು ಹೇಳಿದರು.

ದೇಶದ ಸ್ವಾತಂತ್ರ್ಯೋತ್ಸವದ 75 ವರ್ಷಗಳ ಸುದೀರ್ಘ ಪಯಣದಲ್ಲಿ ಪ್ರಜಾಪ್ರಭುತ್ವದ ಉಳಿವಿಗಾಗಿ ಹಾಗೂ ಬಲಪಡಿಲು ಜನಪ್ರತಿನಿಧಿಗಳ ಪಾತ್ರ ಬಹಳ ಪ್ರಮುಖವಾದುದು. ಹಾಗಾಗಿ ಪ್ರಜಾಪ್ರಭುತ್ವದ ಸಂಸ್ಥೆಗಳನ್ನು ಹೆಚ್ಚು ಕ್ರಿಯಾಶೀಲವನ್ನಾಗಿಸುವ ಜೊತೆಗೆ ಸದನದ ಕಲಾಪಗಳಲ್ಲಿ ಶಿಸ್ತು ಮತ್ತು ಘನತೆಯಿಂದ ಜನಸಾಮಾನ್ಯರ ಭಾವನೆಗಳಿಗೆ ಅನುಗುಣವಾಗಿ ನಡೆಯಬೇಕು. ಆಗ ಮಾತ್ರ ಸಂಸದೀಯ ಮೌಲ್ಯಗಳು ಹೆಚ್ಚುತ್ತದೆ ಎಂದು ಅವರು ಅಭಿಪ್ರಾಯಪಟ್ಟರು. ■



Downloaded From: www.kpscvaani.com





# ತಂತ್ರಜ್ಞಾನ ಕೇಂದ್ರಗಳಾಗಿ ಐಟಿಐ

ರೋಹಿಣಿ ಕೆ

**ಕೌಶಲ್ಯಾಭಿವೃದ್ಧಿಯ ಮೂಲಕ ರಾಜ್ಯದ ಯುವಶಕ್ತಿಯನ್ನು ಅತ್ಯುತ್ತಮ ಸಂಪನ್ಮೂಲವನ್ನಾಗಿಸಿ ನಮ್ಮ ಕೈಗಾರಿಕಾ ವಲಯವನ್ನು ಸದೃಢಗೊಳಿಸುವಲ್ಲಿ ರಾಜ್ಯದ 150 ಸರಕಾರಿ ಐಟಿಐಗಳು ಕಾರ್ಪೋರೇಟ್ ಸಂಸ್ಥೆಯ ಸಹಯೋಗದಲ್ಲಿ ಪ್ರಮುಖ ತಂತ್ರಜ್ಞಾನ ಕೇಂದ್ರಗಳಾಗಿ ಪರಿವರ್ತನೆ ಹೊಂದಲಿವೆ.**

ರಾಜ್ಯ ಸರ್ಕಾರ 'ಉದ್ಯೋಗ' ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವ ಉದ್ದೇಶದಿಂದ ಟಾಟಾ ಕಂಪೆನಿಯ ಜೊತೆಗೆ ಇನ್ನಿತರ 20 ಕೈಗಾರಿಕಾ ಘಟಕಗಳೊಂದಿಗೆ ರಾಜ್ಯ ಸರಕಾರದ ಪಾಲುದಾರಿಕೆಯೊಂದಿಗೆ ಐಟಿಐ ಟೆಕ್ನಾಲಜಿ ಹಬ್‌ಗಳು ರಾಜ್ಯದಲ್ಲಿ ವಾರ್ಷಿಕ 20,000 ತಾಂತ್ರಿಕ ನಿಪುಣರನ್ನು ಸೃಷ್ಟಿಸಲು ಮುಂದಾಗಿದೆ.

ಎಸ್ ಎಸ್ ಎಲ್ ಸಿ ಪಾಸಾದ ಮಕ್ಕಳಿಗೆ ಐಟಿಐ ಕೋರ್ಸ್‌ಗಳ ಮುಖಾಂತರ ಹಾಗೂ ಶಾರ್ಟ್ ಟರ್ಮ್ ಕೋರ್ಸ್ ಮೂಲಕ ವೃತ್ತಿಪರ ಕೋರ್ಸ್‌ಗಳನ್ನು ಇಂಜಿನಿಯರ್ ಕೋರ್ಸ್‌ಗಳಿಗೆ ಸಮನಾಂತರವಾಗಿ ಕಲಿಸಿ, ಯುವಕರಲ್ಲಿ ವೃತ್ತಿ ನೈಪುಣ್ಯವನ್ನು ತುಂಬುವ ಜೊತೆಗೆ ಭವಿಷ್ಯದ ಅನ್ವೇಷಣಾ ತಂತ್ರಜ್ಞಾನ ಮತ್ತು ಕೈಗಾರಿಕಾ ವಲಯಕ್ಕೆ ನೈಪುಣ್ಯದ ಕೊರತೆಯುಂಟಾಗದಂತೆ ರೂಪಿಸಿರುವ ಯೋಜನೆ ಇದಾಗಿದೆ. ಆತ್ಮ ನಿರ್ಭರ ಭಾರತಕ್ಕೆ ಪೂರಕವಾಗಿ ಈ ಯೋಜನೆಯನ್ನು ರೂಪಿಸಲ್ಪಟ್ಟಿದ್ದು, ಇದು ನಿರುದ್ಯೋಗ ನಿವಾರಣೆಗೂ ತನ್ನದೇ ಆದ ಕೊಡುಗೆಯನ್ನು ನೀಡಲಿದೆ.

ಮುಖ್ಯಮಂತ್ರಿಯಾದಿಯಾಗಿ, ಸಂಬಂಧಪಟ್ಟ ಇಲಾಖೆಯ ಮಂತ್ರಿಗಳು, ಪರಿಣತ ಅಧಿಕಾರಿಗಳಿಂದ ಹಿಡಿದು ಉತ್ತಮ ಶಿಕ್ಷಕರ ತಂಡವನ್ನು ರಾಜ್ಯದಾದ್ಯಂತ ಈ ನಿಟ್ಟಿನಲ್ಲಿ ನಿರ್ಮಿಸಿದ್ದು, ಶಾರ್ಟ್ ಟರ್ಮ್ ಕೋರ್ಸ್ ಮುಖಾಂತರ ವಾರ್ಷಿಕವಾಗಿ ಇಪ್ಪತ್ತು ಸಾವಿರದಂತೆ ಸುಮಾರು ಒಂದು ಲಕ್ಷ ವೃತ್ತಿ ನೈಪುಣ್ಯ ಹೊಂದಿದವರನ್ನು ಸೃಷ್ಟಿಸಲು ಯೋಜನೆ ರೂಪಿಸಲಾಗಿದೆ.

ಯೋಜನೆಗೆ ಒಟ್ಟು  4,636 ಕೋಟಿ ರೂ.ಗಳನ್ನು ಮೀಸಲಿಟ್ಟಿದ್ದು, ಇದರಲ್ಲಿ ರಾಜ್ಯ ಸರ್ಕಾರದ್ದು 657657 ಕೋಟಿ ರೂ. ಗಳನ್ನು ಮೀಸಲಿರಿಸಿದ್ದು, ರಾಜ್ಯಾದ್ಯಂತ 150 ಐಟಿಐಗಳನ್ನು ಈ ನಿಟ್ಟಿನಲ್ಲಿ ಮೇಲ್ದರ್ಜೆಗೆ ಏರಿಸಲಾಗುತ್ತಿದೆ. ಕಲ್ಯಾಣ ಕರ್ನಾಟಕಕ್ಕೂ ಹೆಚ್ಚಿನ ಒತ್ತು ನೀಡಲಾಗಿದ್ದು, 9 ಐಟಿಐ ಕಾಲೇಜುಗಳನ್ನು ಕಲ್ಬುರ್ಗಿಯಲ್ಲಿ ಮೇಲ್ದರ್ಜೆಗೆ ಏರಿಸಲಾಗಿದೆ.

ಮೈಸೂರಿನಲ್ಲಿ 9, ಮಡಿಕೇರಿ, ಯಾದಗಿರಿಯಲ್ಲಿ ಎರಡು ಕಾಲೇಜುಗಳು ಸೇರಿವೆ. ರಾಜ್ಯದ ಐಟಿಐ ಕಾಲೇಜುಗಳು ಇನ್ನು ಮುಂದೆ ಪ್ರಮುಖ ತಂತ್ರಜ್ಞಾನ ಕೇಂದ್ರಗಳಾಗಿ ಪರಿವರ್ತನೆ ಹೊಂದಲಿವೆ. ರಾಜ್ಯದ ಕೌಶಲ್ಯಾಭಿವೃದ್ಧಿ ಉದ್ಯಮ ಶೀಲತೆ ಮತ್ತು ಜೀವನೋಪಾಯ ಇಲಾಖೆಯ ಉದ್ಯೋಗ ಯೋಜನೆಯಡಿ ಖಾಸಗಿ ಪಾಲುದಾರಿಕೆಯ ಟಾಟಾ ಟೆಕ್ನಾಲಜೀಸ್ ಲಿಮಿಟೆಡ್ ಮತ್ತು ಇತರೆ 20 ಖಾಸಗಿ ಸಂಸ್ಥೆಗಳ ಸಹಯೋಗದಲ್ಲಿ ಕೈಗೊಂಡಿರುವ ಈ ಯೋಜನೆ ಶಿಕ್ಷಣ ಕ್ಷೇತ್ರದಲ್ಲಿ ಅದರಲ್ಲೂ ನಿರ್ದಿಷ್ಟವಾಗಿ ವೃತ್ತಿ ಶಿಕ್ಷಣದಲ್ಲಿ ಇಷ್ಟೊಂದು ದೊಡ್ಡ



Downloaded From: www.kpscvaani.com

ಪ್ರಮಾಣದಲ್ಲಿ ಖಾಸಗಿ ಪಾಲುದಾರಿಕೆಯಡಿ ಯೋಜನೆ ಜಾರಿಯಾಗುತ್ತಿರುವುದು ಇದೆ ಮೊದಲು.

ಭವಿಷ್ಯದ ಕೈಗಾರಿಕೆಗಳ ಅಗತ್ಯಕ್ಕೆ ಅನುಗುಣವಾಗಿ ನೈಪುಣ್ಯತೆ ಹೊಂದಿದ ಉದ್ಯಮಿ ಹಾಗೂ ಉದ್ಯೋಗಿಗಳನ್ನು ಸೃಷ್ಟಿಸುವ ಗುರಿ ಹೊಂದಲಾಗಿದೆ. ಸರಕಾರಿ ಮತ್ತು ಖಾಸಗಿ ವಲಯದ ಒಪ್ಪಂದದಂತೆ ಸರಕಾರಿ ಐಟಿಐಗಳ ಭೌತಿಕ ಸ್ವರೂಪವೆ ಬದಲಾಗಲಿದ್ದು, ಈ ಉದ್ದೇಶಕ್ಕಾಗಿ ರಾಜ್ಯ ಸರಕಾರ 220 ಕೋಟಿ ರೂ. ನೀಡುತ್ತಿದೆ. 150 ವಿಶೇಷ ಕಾರ್ಯಾಗಾರಗಳು, 72 ಹೊಸ ತಂತ್ರಜ್ಞಾನ ಪ್ರಯೋಗ ಶಾಲೆಗಳನ್ನು ನಿರ್ಮಿಸಿ, 78 ಪ್ರಯೋಗ ಶಾಲೆಗಳನ್ನು ಸಹ ಉನ್ನತೀಕರಣಗೊಳಿಸಲಾಗುತ್ತಿದೆ. ವಿದ್ಯಾರ್ಥಿಗಳಿಗೆ ಅತ್ಯಾಧುನಿಕ ತಂತ್ರಜ್ಞಾನ ತರಬೇತಿ ಹಾಗೂ ಉದ್ಯಮ ಕೇಂದ್ರಿತ ಪಠ್ಯಕ್ರಮ ಅಡಕಗೊಳಿಸಲಾಗುತ್ತಿದೆ.

ಪಾಲಿಟೆಕ್ನಿಕ್‌ಗಳು ಹಾಗೂ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಐದು ವರ್ಷಗಳವರೆಗೆ ವಿಸ್ಯಾಟ್ ತಂತ್ರಜ್ಞಾನದ ಮೂಲಕ ವಿಶಿಷ್ಟ ವಿದ್ಯುನ್ಮಾನ ಕಲಿಕಾ ವೇದಿಕೆ, ಅತ್ಯಾಧುನಿಕ ಉಪಕರಣಗಳು ಹಾಗೂ ಜಾಗತಿಕ ಮಟ್ಟದ ಉಪಕರಣಗಳನ್ನು ಒದಗಿಸುತ್ತಿರುವುದು ವಿಶೇಷವಾಗಿದೆ.

ತಂತ್ರಾಂಶಗಳ ಉತ್ಕೃಷ್ಟ ತರಬೇತಿಯನ್ನು ಖಚಿತ ಪಡಿಸುವ ಸಲುವಾಗಿ ಮೂರು ವರ್ಷಗಳವರೆಗೆ ಐಟಿಐ ತರಬೇತುದಾರರಿಗೆ ಉದ್ಯಮ ವಿಷಯ ತಜ್ಞರಿಂದ ತರಬೇತಿ ಒದಗಿಸಲಾಗುತ್ತಿದೆ. ಅತಿ ಸಣ್ಣ ಮತ್ತು ಮಧ್ಯಮ ಗಾತ್ರದ ಕೈಗಾರಿಕೆಗಳು ಹಾಗೂ ಬೃಹತ್ ಕೈಗಾರಿಕೆಗಳೊಂದಿಗೆ ಆವಿಷ್ಕಾರ ಹಾಗೂ ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಕೊಳ್ಳಲು ತಂತ್ರಜ್ಞಾನ ಚಟುವಟಿಕಾ ಕೇಂದ್ರಗಳನ್ನು ಸಹ ಪ್ರಾರಂಭ ಮಾಡಲಾಗುತ್ತಿದೆ. ರಾಜ್ಯದಾದ್ಯಂತ ಉದ್ಯೋಗ ಅವಕಾಶಗಳ ಲಭ್ಯತೆ ಹೆಚ್ಚಿಸಲು ಶಿಕ್ಷಣ ಕ್ರಮ ಹಾಗೂ ಕೈಗಾರಿಕೆಗಳ ಸಂಪರ್ಕಕ್ಕೂ ಅವಕಾಶ ನೀಡುತ್ತಿರುವುದು 'ಉದ್ಯೋಗ' ಯೋಜನೆಯ ಮತ್ತೊಂದು ಪ್ರಮುಖ ಆಯಾಮ.

ಹತ್ತನೇ ತರಗತಿ ಪರೀಕ್ಷೆಯಲ್ಲಿ ಅದರಲ್ಲೂ ವಿಜ್ಞಾನ ಮತ್ತು ಗಣಿತದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ದೀರ್ಘಾವಧಿ ಕೋರ್ಸ್‌ಗಳನ್ನು ಆರಂಭಿಸಲಾಗುತ್ತಿದೆ. ತಲಾ ಒಂದು ವರ್ಷದ ಕಂಪ್ಯೂಟರ್ ಏಯ್ಡ್ ಮ್ಯಾನುಫ್ಯಾಕ್ಚರಿಂಗ್, ಮ್ಯಾನುಫ್ಯಾಕ್ಚರಿಂಗ್ ಪ್ರೊಸೆಸ್ ಕಂಟ್ರೋಲ್ ಅಂಡ್ ಅಟೋಮೇಷನ್, ಬೇಸಿಕ್ ಡಿಸೈನ್ ಅಂಡ್ ಅಡಿಟಿವ್ ಮ್ಯಾನುಫ್ಯಾಕ್ಚರಿಂಗ್, ಇಂಡಸ್ಟ್ರಿಯಲ್ ರೊಬೊಟಿಕ್ ಅಂಡ್ ಡಿಜಿಟಲ್ ಮ್ಯಾನುಫ್ಯಾಕ್ಚರಿಂಗ್, ಅಡ್ವಾನ್ಸ್ ಪ್ಲಂಬಿಂಗ್, ಅರ್ಟಿಸನ್ ಯೂಸಿಂಗ್ ಅಡ್ವಾನ್ಸ್‌ಡ್ ಟೂಲ್ಸ್ ಕೋರ್ಸ್‌ಗಳಿವೆ. ಎರಡು ವರ್ಷದ ದೀರ್ಘಾವಧಿ ಕೋರ್ಸ್‌ಗಳೆಂದರೆ ಅಡ್ವಾನ್ಸ್‌ಡ್ ಅಟೋಮೊಬೈಲ್ ಇಂಜಿನಿಯರಿಂಗ್, ಬ್ಯಾಟರಿ ಎಲೆಕ್ಟ್ರಿಕ್ ವೆಹಿಕಲ್, ಬೇಸಿಕ್ ಡಿಸೈನ್ ಅಂಡ್ ವರ್ಚುವಲ್ ವೆರಿಫಿಕೇಶನ್, ಮತ್ತು ಅಡ್ವಾನ್ಸ್‌ಡ್ ಮ್ಯಾನುಫ್ಯಾಕ್ಚರಿಂಗ್ ಕೋರ್ಸ್‌ಗಳನ್ನು ಆರಂಭಿಸಲಾಗುತ್ತಿದೆ.

ಅಕ್ಟೋಬರ್ 4 ರಂದು ಇದೇ ಮೊದಲ ಬಾರಿಗೆ ರಾಜ್ಯದ ಎಲ್ಲಾ ಜಿಲ್ಲಾ ನೋಡಲ್ ಕೇಂದ್ರಗಳಲ್ಲಿ ಶಿಶಿಕ್ಷುಮೇಳವನ್ನು ಅತ್ಯಂತ ಸುಸಜ್ಜಿತವಾಗಿ ಮತ್ತು ಶಿಸ್ತುಬದ್ಧವಾಗಿ ಆಯೋಜಿಸಲಾಗಿತ್ತು.
APPRENTICESHIP TRAINING ಎಂದರೆ ತರಬೇತಿದಾರರಿಗೆ ಸುಧಾರಿತ / ಆಧುನಿಕ ತಂತ್ರಜ್ಞಾನವನ್ನು ಕರಗತ ಮಾಡಿಕೊಳ್ಳುವ ಈ ಪ್ರಕ್ರಿಯೆಗೆ ಸರ್ಕಾರದ ವಿವಿಧ ಸಂಸ್ಥೆಗಳು ಮತ್ತು ಕೈಗಾರಿಕಾ ವಲಯದಿಂದ ಅತ್ಯುತ್ತಮ ಪ್ರತಿಕ್ರಿಯೆ ದೊರೆತಿದೆ. ಉದ್ದಿಮೆಗಳಿಗೆ ಅದರ ಭವಿಷ್ಯಕ್ಕೆ ಅಗತ್ಯವಾದ ಕುಶಲತೆ ಹೊಂದಿರುವ ಮಾನವಸಂಪನ್ಮೂಲ ಅಭಿವೃದ್ಧಿ ಪಡಿಸುವ ಸದಾವಕಾಶವನ್ನು ಕೈಗಾರಿಕೆಗಳು, ಐಟಿಐ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಉತ್ತಮ ರೀತಿಯಲ್ಲಿ ಬಳಸಿಕೊಂಡಿದ್ದಾರೆ.

> **ಕೈಗಾರಿಕಾ ಬೆಳವಣಿಗೆಗೆ ಪೂರಕವಾಗಿ ನಿಪುಣ ಕಾರ್ಮಿಕ ಸಂಪನ್ಮೂಲ ಒದಗಿಸಲು ರಾಜ್ಯ ಸರ್ಕಾರದ ಕೌಶಲ್ಯಾಭಿವೃದ್ಧಿ ಉದ್ಯಮ ಶೀಲತೆ ಮತ್ತು ಜೀವನೋಪಾಯ ಇಲಾಖೆ “ಉದ್ಯೋಗ” ಎಂಬ ವಿನೂತನ ಯೋಜನೆ ಜಾರಿಗೆ ತಂದಿದೆ. ವೃತ್ತಿತರಬೇತಿ ಕ್ಷೇತ್ರದಲ್ಲಿ ಇದು ಹೊಸ ಆಯಾಮ ಸೃಷ್ಟಿಸುವ ಜತೆಗೆ ಉದ್ಯೋಗ ಸೃಷ್ಟಿಗೆ ಹೊಸ ಅವಕಾಶದ ಬಾಗಿಲನ್ನು ತೆರೆಯಲಿದೆ.**

Earn while learn, ಪರಿಕಲ್ಪನೆ ಅಡಿಯಲ್ಲಿ ಈ ಮೇಳ ನಡೆದಿದೆ. ರೈಲ್ವೆ, ಸೇನೆಯಿಂದ ಶಿಶಿಕ್ಷು ತರಬೇತಿಗೆ ಹೆಚ್ಚಿನ ಬೇಡಿಕೆ ಕಂಡು ಬಂದಿದೆ. ಹೊಸ ತಂತ್ರಜ್ಞಾನವಷ್ಟೇ ಅಲ್ಲದೇ ಸಾಂಪ್ರದಾಯಕ ಟರ್ನರ್, ಫಿಟ್ಟರ್ ನಂತಹ ತರಬೇತಿ ಪಡೆದವರಿಗೂ ಹೆಚ್ಚಿನ ಶಿಶಿಕ್ಷು ತರಬೇತಿಗೆ ಬೇಡಿಕೆ ಕಂಡು ಬಂದಿದೆ. ಇದಲ್ಲದೇ ಖಾಸಗಿ ವಲಯದ ಉದ್ದಿಮೆಗಳು, ಬಿ.ಎಚ್.ಇ.ಎಲ್. ಮತ್ತಿತರ ಸಂಸ್ಥೆಗಳಿಂದಲೂ ಬೇಡಿಕೆ ಕಂಡು ಬಂದಿದೆ.

ಇದಲ್ಲದೇ ನುರಿತ ಮಾನವಸಂಪನ್ಮೂಲ ಒದಗಿಸಲು ಅಲ್ಪಾವಧಿ ಕೋರ್ಸ್‌ಗಳನ್ನು ಸಹ ಆರಂಭಿಸಲಾಗಿದೆ. ಐಟಿಐನ ಅಂತಿಮ ವರ್ಷದ ವಿದ್ಯಾರ್ಥಿ, ಐಟಿಐ ಪದವೀಧರರು, ವೃತ್ತಿಪರರರಾಗಿ ಕೆಲಸ ಮಾಡುತ್ತಿರುವವರು ತಂತ್ರಜ್ಞಾನವಲಯದಲ್ಲಿ ತಮ್ಮ ವೃತ್ತಿಪರತೆಯನ್ನು ವೃದ್ಧಿಸಿಕೊಳ್ಳಲು ಬಯಸುವವರಿಗಾಗಿ 23 ವೈವಿಧ್ಯಮಯ ಕೋರ್ಸ್‌ಗಳನ್ನು ಆರಂಭಿಸಲಾಗುತ್ತಿದೆ. ಐಟಿಐಗಳು ಇದೀಗ ಮೇಲ್ದರ್ಜೆಗೆ ಏರುತ್ತಿವೆ. ವಿದ್ಯಾರ್ಥಿಗಳಿಗೆ ಆಧುನಿಕ ವಲಯದಲ್ಲಿ ತರಬೇತಿ ನೀಡಲು ಸಜ್ಜಾಗುತ್ತಿವೆ. ಸರ್ಕಾರ ಇದೀಗ ಅಪ್ರೆಂಟಿಶಿಪ್ ಮೇಳಗಳನ್ನು ಆಯೋಜಿಸುತ್ತಿವೆ. ಇದರ ಜತೆಗೆ ಖಾಸಗಿ ಮತ್ತು ಕೇಂದ್ರ ಸರ್ಕಾರದ ಜತೆಗೂಡಿ ಕಾರ್ಯನಿರ್ವಹಿಸುವ ವೇದಿಕೆಯನ್ನು ಸಹ ಕಲ್ಪಿಸುತ್ತಿದೆ. ಐಟಿಐ ಶಿಕ್ಷಣ ಪೂರ್ಣಗೊಳಿಸಿದ ನಂತರ ಶಿಶಿಕ್ಷು ತರಬೇತಿ ಪಡೆಯಲು, ಬಳಿಕ ಉತ್ತಮ ಉದ್ಯೋಗ ಪಡೆಯಲು ಇದೊಂದು ಉಜ್ವಲ ಅವಕಾಶವಾಗಿದೆ. ವೃತ್ತಿ ಶಿಕ್ಷಣ ತರಬೇತಿ ಕೋರ್ಸ್‌ಗಳ ವಲಯದಲ್ಲಿ ಉದ್ಯೋಗ ಯೋಜನೆ ಬರುವ ದಿನಗಳಲ್ಲಿ ಮಹತ್ವದ ಮತ್ತು ಪ್ರಧಾನ ಪಾತ್ರವಹಿಸಲಿದೆ. ನೀವು ಕೂಡ ಐಟಿಐ ತರಬೇತಿ ಶಿಕ್ಷಣ ಪಡೆಯಬೇಕಿದ್ದಲ್ಲಿ, ತಕ್ಷಣವೇ ನಿಮ್ಮ ಸಮೀಪದ ಸರ್ಕಾರಿ ಐಟಿಐಗಳಿಗೆ ಭೇಟಿ ನೀಡಿ, ಹೆಚ್ಚಿನ ಮಾಹಿತಿಗಾಗಿ 080 – 25189105 ಅನ್ನು ಸಂಪರ್ಕಿಸಬಹುದು. ■



Downloaded From: www.kpscvaani.com

# ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೊಂದಿಗೆ

# ಮಾತು ಮಂಥನ

**ತಮ್ಮ ಆಡಳಿತದ ಅವಧಿಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಏನೆಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂಬುದನ್ನು ತಿಳಿಯುವ ನಿಮಿತ್ತ ಕನ್ನಡ ರಾಜ್ಯೋತ್ಸವ ಅಂಗವಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಟಿ.ಎಸ್.ನಾಗಾಭರಣ ಅವರೊಂದಿಗೆ ಮಾತು ಮಂಥನ ನಡೆಸಲಾಗಿದೆ.**



ಕೆ.ಎಸ್.ರಾಜಮನ್ನಾರ್

ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡವನ್ನು ಇನ್ನೂ ವಿಸ್ತಾರವಾಗಿ ಬಳಸುವಂತೆ ಮಾಡಿ ಅದು ಕನ್ನಡ ತಂತ್ರಜ್ಞಾನದ ನಂಟನ್ನು ಟೈಪಿಂಗ್‌ನಿಂದಾಚೆಗೂ ಕೊಂಡೊಯ್ದು ಇನ್ನಷ್ಟು ಭದ್ರಪಡಿಸಬೇಕು. ಆಡಳಿತದ ಎಲ್ಲ ಹಂತಗಳಲ್ಲಿ ಕನ್ನಡ ಸಾಧ್ಯವಾಗಿ ಇ-ಆಡಳಿತ ರೂಪುಗೊಳ್ಳಬೇಕು. ಅದಕ್ಕೆ ಬೇಕಾದ ಪಾರಿಭಾಷಿಕ ಪದಕೋಶಗಳು ಸಿದ್ಧವಾಗುತ್ತಿವೆ. ಸಾಮಾಜಿಕ ಜಾಲತಾಣಗಳಾದ ಟ್ವಿಟರ್, ಫೇಸ್ಬುಕ್, ವಾಟ್ಸ್‌ಆ್ಯಪ್‌ಗಳಲ್ಲಿ ಕನ್ನಡದ ಸಂದೇಶಗಳು ಕನ್ನಡ ನಾಡಿನ ಹಿರಿಮೆ ಎತ್ತಿಹಿಡಿಯಬೇಕು. ಎಲ್ಲ ಹಂತದಲ್ಲಿ ಕನ್ನಡ ಅನುಷ್ಠಾನಕ್ಕಾಗಿ ವಿಧಾನಮಂಡಲದ ಉಭಯ ಸದನಗಳಲ್ಲಿ ಸರ್ಕಾರ ಸಮಗ್ರ ಕನ್ನಡ ಬಳಕೆ ಮಸೂದೆ ಅಂಗೀಕರಿಸಬೇಕೆಂಬುದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಪ್ರಮುಖ ಹಕ್ಕೊತ್ತಾಯ.

ತಂತ್ರಜ್ಞಾನದ ತಾರಾಮಂಡಲದಲ್ಲಿ ಕನ್ನಡ ಅನುಗಾಲವೂ ಹೊಳೆವ ನಕ್ಷತ್ರದಂತೆ, ನಾಳಿನ ಮಕ್ಕಳಿಗೆ ತಂತ್ರಜ್ಞಾನದ ಜೊತೆಜೊತೆಗೆ ಕನ್ನಡ ಪ್ರೇಮ ಬೆಳೆಸಲು ಬೇಕಾಗುವ ಅಂಶಗಳನ್ನು ಆಯ್ದ ಆಸಕ್ತರಿಂದ ಕನ್ನಡ – ಕನ್ನಡಿಗ – ಕರ್ನಾಟಕ ಎಂಬ ಐಕ್ಯಮಂತ್ರದ ಲೇಖನಗಳನ್ನು, ಕಥೆ, ಕವನ, ನಾಟಕಗಳನ್ನು ಸಿದ್ಧಪಡಿಸಲು ತಯಾರಿ ಮಾಡಲಾಗಿದೆ. ಆಡಳಿತ, ಉದ್ಯೋಗ, ಶಿಕ್ಷಣ ವಲಯದಲ್ಲಿ ಸರಿಗನ್ನಡ ಬಳಕೆ ಹೆಚ್ಚಿಸಲು ಎಲ್ಲ ಹಂತದ ಶೀಘ್ರಲಿಪಿಗಾರರಿಗೆ, ಅನುವಾದಕರಿಗೆ, ಅನಿವಾಸಿ ಕನ್ನಡಿಗರಿಗೆ ಕನ್ನಡ ಕಲಿಸುವ ಶಿಕ್ಷಕರ ತರಬೇತಿ, ಕನ್ನಡ ವಿಕಿಪಿಡಿಯಾ ತರಬೇತಿ ಹಾಗೂ ಕನ್ನಡಿಗ ಮತ್ತು ಕನ್ನಡದ ಅಸ್ಮಿತೆಗೆ ಕಾನೂನಾತ್ಮಕವಾಗಿ ತೊಂದರೆಯಾದರೆ ದೂರು ಸ್ವೀಕರಿಸಲು ದೂರು ಸಂಗ್ರಹಕ ಪೋರ್ಟಲ್ ರಚನೆಗೂ ಯೋಜನೆ ಸಿದ್ಧಗೊಂಡಿದೆ.

ಭಾಷೆ ಮತ್ತು ಸಂಸ್ಕೃತಿಯ ಆಧಾರದ ಮೇಲೆ ರಾಜ್ಯಗಳ ಮರುವಿಂಗಡಣೆಯಾಗಿ, ಭಾಷಾವಾರು ರಾಜ್ಯಗಳ ರಚನೆಯ ಮೂಲ ತಳಹದಿಯ ಮೇಲೆ ಒಕ್ಕೂಟ ವ್ಯವಸ್ಥೆಗೆ ಒಳಪಟ್ಟ ದೇಶ ಭಾರತ. ಬಹು ಸಂಸ್ಕೃತಿ, ಬಹುತ್ವ ಮತ್ತು ವೈವಿಧ್ಯತೆ ಜನರ ಬದುಕಿನ ಜೀವಾಳ. ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಮಗುವಿನ ಮಾತೃಭಾಷೆಗೆ ಆದ್ಯತೆ ನೀಡಿರುವುದು ನಾಡಿನ ಉದ್ದಾಮ ಸಾಹಿತಿಗಳ ಹಲವು ದಶಕಗಳ ಆಶೋತ್ತರಗಳನ್ನು ಅನಾವರಣಗೊಳಿಸಿದೆ. ಭಾಷೆ ಎಂಬುದು ನಾವು ಎಲ್ಲಿಂದ ಬಂದಿದ್ದೇವೆ, ಎಲ್ಲಿಗೆ ಹೋಗುತ್ತಿದ್ದೇವೆ ಎಂಬುದರ ನೀಲನಕ್ಷೆಯೂ ಹೌದು. ದಾರಿದೀಪವೂ ಹೌದು. ಸಂವಿಧಾನದಲ್ಲಿ ಅಡಕವಾಗಿರುವ ಪ್ರಮುಖ 22 ಭಾರತೀಯ ಭಾಷೆಗಳಿಗೂ ಸೂಕ್ತ ಸ್ಥಾನಮಾನ ಸಿಗಬೇಕು. ಈ ನಿಟ್ಟಿನಲ್ಲಿ ದೇಶದಲ್ಲಿ ದೊಡ್ಡ ಭಾಷಾ ಕ್ರಾಂತಿಯಾಗಬೇಕು.



Downloaded From: www.kpscvaani.com

## ತಂತ್ರಾಂಶಗಳಲ್ಲಿ ಕನ್ನಡ ಬಳಕೆಗೆ ಆದ್ಯತೆ

"ಕನ್ನಡ, ಕನ್ನಡಿಗ ಮತ್ತು ಕರ್ನಾಟಕ ಸರ್ವ ಪರಿ", ಇದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಧ್ಯೇಯ ವಾಕ್ಯ. ಆಡಳಿತದಲ್ಲಿ ಕನ್ನಡವೇ ಸಾರ್ವಭೌಮ. ಕನ್ನಡ ಜನದನಿಯ ಭಾಷೆಯಾಗಬೇಕು. ಪ್ರಾಧಿಕಾರ, ಸರ್ಕಾರದ ಆದೇಶ, ಸುತ್ತೋಲೆಗಳಿಂದಲೇ ಭಾಷೆ ಉಳಿಯದು, ಬೆಳೆಯದು. ಭಾಷೆ ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಜನಸಮುದಾಯದ ಪಾತ್ರವೇ ಬಹಳ ನಿರ್ಣಾಯಕ. ಸಮುದಾಯವನ್ನು ಕಾಲ-ಕಾಲಕ್ಕೆ ಜಾಗೃತಗೊಳಿಸುವ ಕೆಲಸ ಪ್ರಾಧಿಕಾರದಿಂದ ಆಗುತ್ತಿದೆ. ತಂತ್ರಾಂಶಗಳಲ್ಲಿ ಸಮಗ್ರ ಕನ್ನಡ ಬಳಕೆಯೇ ಪ್ರಾಧಿಕಾರದ ಪರಮ ಗುರಿ. ಸಮಗ್ರ ಕನ್ನಡ ಭಾಷಾ (ಪ್ರಸಾರ ಮತ್ತು ವ್ಯಾಪಕ ಬಳಕೆ) ಮಸೂದೆ ಜಾರಿಗೊಳಿಸುವಂತೆ ಪ್ರಾಧಿಕಾರ ಸರ್ಕಾರದ ಮೇಲೆ ನಿರಂತರ ಒತ್ತಡ ಹಾಕುತ್ತಿದೆ.

ಮಸೂದೆ ರೂಪಿಸುವ ಸಂಬಂಧ ಕನ್ನಡಪರ ಚಿಂತಕರು, ಕಾನೂನು ಪಂಡಿತರು, ಸಾಹಿತಿಗಳು, ಹೋರಾಟಗಾರರು ಕನ್ನಡ ಮತ್ತು ಸಂಸ್ಕೃತಿ ಚಿಂತಕರು, ವಾಣಿಜ್ಯ ಮತ್ತು ಕೈಗಾರಿಕಾ ತಜ್ಞರು, ಭಾಷಾ ವಿಜ್ಞಾನಿಗಳನ್ನು ಒಳಗೊಂಡ ಸಮಿತಿ ರಚನೆಗೆ ತೀರ್ಮಾನಿಸಿದೆ. ಈ ಕುರಿತು ಮೊದಲ ಪೂರ್ವಭಾವಿ ಸಭೆ ಜರುಗಿದೆ. ರಾಜ್ಯೋತ್ಸವದ ಹೊಸ್ತಿಲಿನಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರೊಂದಿಗೆ "ವಾರ್ತಾ ಜನಪದ" ನಡೆಸಿದ ಮಾತು-ಮಂಥನ.

## ಆಡಳಿತದಲ್ಲಿ ಕನ್ನಡ ಬಳಕೆಗೆ ಪ್ರಾಧಿಕಾರದ ಪ್ರಯತ್ನ ಯಾವ ದಿಕ್ಕಿನಲ್ಲಿ ಸಾಗಿದೆ?

ನಿಜ ಹೇಳಬೇಕೆಂದರೆ ಕಂಪ್ಯೂಟರ್ ಯುಗ ಆರಂಭವಾದ ಮೇಲೆ, ಆಡಳಿತದಲ್ಲಿ ಕನ್ನಡ ನಿರೀಕ್ಷೆ ಮಾಡಿದಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬರುತ್ತಿಲ್ಲ. ಹೆಜ್ಜೆ ಹೆಜ್ಜೆಗೂ ಕೆಲವು ಅಡೆ-ತಡೆಗಳು ಎದುರಾಗುತ್ತಿವೆ. ಈ ನಿಟ್ಟಿನಲ್ಲಿ ತಂತ್ರಾಂಶದಲ್ಲಿ ಕನ್ನಡ ಬಳಕೆಗೆ ಆದ್ಯತೆ ನೀಡುವ ಕೆಲಸವನ್ನು ಪ್ರಾಧಿಕಾರ ಚುರುಕುಗೊಳಿಸಿದೆ. 60 ಸಾವಿರಕ್ಕೂ ಹೆಚ್ಚು ಪರ್ಯಾಯ ಪದಗಳನ್ನು ಕಂಪ್ಯೂಟರ್ ತಂತ್ರಾಂಶದಲ್ಲಿ ಅಳವಡಿಸುವ ಕೆಲಸ ನಡೆದಿದೆ. ಕನ್ನಡದ ಇ-ಮೇಲ್ ಐಡಿಗಳನ್ನೂ ರೂಪಿಸಲಾಗುತ್ತಿದೆ. ಸ್ವಯಂ ಎಂಬ ಕೇಂದ್ರ ಸರ್ಕಾರದ ಮಾದರಿಯಲ್ಲಿ ತಂತ್ರಾಂಶಗಳ ಬಳಕೆಗೆ ಅನುಕೂಲವಾಗುವಂತೆ ವಿಶೇಷ ಕನ್ನಡ ಆ್ಯಪ್ ಗಳನ್ನು ಅಭಿವೃದ್ಧಿಪಡಿಸಿ ಕಂಪ್ಯೂಟರ್‌ನಲ್ಲಿಯೂ ಕನ್ನಡ ಅನುಷ್ಠಾನಕ್ಕೆ ಯಾವ ತೊಂದರೆಯಾಗದಂತೆ ಮಾಡಲಾಗುತ್ತಿದೆ. ಈ ನಿಟ್ಟಿನಲ್ಲಿ ಇ-ಆಡಳಿತ ಮತ್ತು ಸಾಫ್ಟ್‌ವೇರ್ ರಂಗದ ಪರಿಣಿತರ ಸಹಾಯವನ್ನು ಪ್ರಾಧಿಕಾರ ಪಡೆದುಕೊಂಡು ನಿರಂತರವಾಗಿ ಹೆಜ್ಜೆ ಹಾಕುತ್ತಿದೆ.

## ಉದ್ಯೋಗದಲ್ಲಿ ಕನ್ನಡಿಗರ ಹಿತ ಕಾಪಾಡುವ ಕ್ರಮಗಳ ಬಗ್ಗೆ?

ಕರ್ನಾಟಕದಲ್ಲಿ ಉದ್ಯೋಗ ಪಡೆಯುವವರು ಕನ್ನಡವನ್ನು ಒಂದು ಭಾಷೆಯನ್ನಾಗಿ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಓದಿರಬೇಕು. ಕರ್ನಾಟಕದಲ್ಲಿ 15 ವರ್ಷ ನೆಲೆಸಿದ್ದು, ಕನ್ನಡ ಓದಲು, ಬರೆಯಲು, ಮಾತನಾಡಲು ಬರಬೇಕು. ಉನ್ನತ ಶಿಕ್ಷಣದ ನೇಮಕಾತಿಯಲ್ಲಿ ಸ್ಥಳೀಯರಿಗೆ ಆದ್ಯತೆ ಸಿಗಬೇಕು. ಐಟಿ-ಬಿಟಿ, ಇ-ಕಾಮರ್ಸ್ ಒಳಗೊಂಡಂತೆ ರಾಜ್ಯ ಸರ್ಕಾರದ ಒಡೆತನ, ಅನುದಾನಿತ ಸಂಸ್ಥೆಗಳು ಮತ್ತು ಖಾಸಗಿ ಸಂಸ್ಥೆಗಳಲ್ಲಿ ಪ್ರಮುಖ ಪಾಲು, ಮೊದಲ ಪ್ರಾಶಸ್ತ್ಯ ಸ್ಥಳೀಯರಿಗೆ ಸಿಗುವಂತೆ ಸಮಗ್ರ ಕನ್ನಡ ಭಾಷಾ ಮಸೂದೆ ಅಂಗೀಕಾರವಾಗಬೇಕು. 2011ರ ಜನಗಣತಿಯಂತೆ ಕರ್ನಾಟಕದಲ್ಲಿ ಕನ್ನಡಿಗರ ಸಂಖ್ಯೆ ಶೇಕಡ 67, ಬೆಂಗಳೂರಿನಲ್ಲಿ ಕನ್ನಡಿಗರ ಸಂಖ್ಯೆ ಶೇಕಡಾ 35 ರಷ್ಟಿದೆ. ಇದರ ಜೊತೆಗೆ ಬೆಂಗಳೂರಿನಲ್ಲಿ 27 ವಿವಿಧ ಭಾರತೀಯ ಭಾಷೆಗಳನ್ನು ಮಾತನಾಡುವ ಜನರಿದ್ದಾರೆ.

## ಕನ್ನಡ ಕಾಯಕ ವರ್ಷಾಚರಣೆ ಬಗ್ಗೆ ಒಂದಷ್ಟು ಮಾಹಿತಿ ನೀಡುವಿರಾ

ಕನ್ನಡ ಕಾಯಕ ವರ್ಷಾಚರಣೆ ಅಭಿಯಾನ ನಡೆಸುವ ಮೂಲಕ ಪ್ರಾಧಿಕಾರ ಕನ್ನಡದ ಜಾಗೃತಿಯನ್ನುಂಟು ಮಾಡುತ್ತಿದೆ. ಇದುವರೆಗೆ 10 ಬೃಹತ್ ಅಭಿಯಾನಗಳನ್ನು ನಡೆಸಲಾಗಿದೆ. ಪ್ರಕಟಣೆಗಳನ್ನೂ ಹೊರತರುತ್ತಿದೆ. ಕನ್ನಡದ ಪರಿಣಾಮಕಾರಿ ಅನುಷ್ಠಾನದಲ್ಲಿ ಇವೆಲ್ಲವೂ ಮುಖ್ಯಪಾತ್ರ ವಹಿಸಲಿವೆ. ಕನ್ನಡ ಜನಮನದ ಭಾಷೆಯಾಗಿರಬೇಕು. ಕನ್ನಡವನ್ನು ಉಳಿಸಿ ಬೆಳೆಸುವ ಕೆಲಸ ಕೇವಲ ಸರ್ಕಾರದಿಂದಲೇ ಆಗುವ ಕೆಲಸವಲ್ಲ. ಸಮುದಾಯ ಅದಕ್ಕೆ ಸ್ಪಂದಿಸಬೇಕು, ಜನಾಂದೋಲನವಾಗಿ ಬೆಳೆಯಬೇಕು. ಇದಕ್ಕೆ ಪೂರಕ ಚಟುವಟಿಕೆಗಳನ್ನು ಪ್ರಾಧಿಕಾರ ಹಮ್ಮಿಕೊಂಡಿದೆ. ಏಕೀಕರಣದ ಆಶಯಗಳನ್ನು ಎತ್ತಿ ಹಿಡಿಯುವುದೇ ಕನ್ನಡ ಕಾಯಕ ವರ್ಷದ ಪ್ರಮುಖ ಆಚರಣೆ. ವಿಧಾನಸೌಧದಿಂದ ಗ್ರಾಮ ಪಂಚಾಯಿತಿವರೆಗೆ ಕನ್ನಡದಲ್ಲಿ ಆಡಳಿತ, ಇದು ನಮ್ಮ ಕನ್ನಡ ಕಾಯಕ. ಕರ್ನಾಟಕಕ್ಕೆ ಗಡಿಯಿದೆ, ಕನ್ನಡಕ್ಕೆ ಗಡಿ ಇಲ್ಲ. ಕನ್ನಡ ಪರಂಪರೆ ವಿಶ್ವಪರಂಪರೆ, ವಿಶ್ವಮಾನವ ತತ್ವ ನಮ್ಮ ಕನ್ನಡ ಕಾಯಕ. ಕರ್ನಾಟಕದಲ್ಲಿ ಅನ್ನ ತಿನ್ನುವ ಪ್ರತಿಯೊಂದು ಸಂಸ್ಥೆ, ವ್ಯಕ್ತಿಗಳಿಂದ ಸರೋಜಿನಿ ಮಹಿಷಿ ವರದಿ ಪಾಲನೆ ಅವಶ್ಯಕ. ಕನ್ನಡ ಕಾಯಕ ವರ್ಷಾಚರಣೆ ಪ್ರಯುಕ್ತ ಕನ್ನಡದ ಬಗ್ಗೆ ಅಭಿಮಾನ ಮೂಡಿಸಲು ಕನ್ನಡ ಕಾಯಕ ಕೈಗನ್ನಡಿ, ಕರ್ನಾಟಕದ ಅನನ್ಯ ಉತ್ಪನ್ನಗಳು ಮತ್ತು ಕನ್ನಡ ಕಾಯಕ ಕೈಗನ್ನಡಿ-ಶಿಕ್ಷಣ ಎಂಬ ಮೂರು ಪುಸ್ತಕಗಳನ್ನು ಪ್ರಾಧಿಕಾರ ಪ್ರಕಟಿಸಿದೆ.

## ಅಭಿಯಾನ-ಉದ್ದೇಶಗಳ ಒಂದಿಷ್ಟು ವಿವರಣೆ...

ವೈದ್ಯಕೀಯ ವಲಯದಲ್ಲಿ ಕನ್ನಡ ಬಳಕೆ ಅಭಿಯಾನ, ಕನ್ನಡ ಗ್ರಾಹಕ ಸ್ನೇಹಿ ಅಭಿಯಾನ ಮಾಧ್ಯಮಗಳಲ್ಲಿ ಸರಿಗನ್ನಡ ಬಳಕೆ, ನ್ಯಾಯಾಲಯಗಳಲ್ಲಿ ಕನ್ನಡ ಬಳಕೆ, ಶುದ್ಧ ಕನ್ನಡ ನಾಮಫಲಕಗಳ ಜಾಗೃತಿ ಅಭಿಯಾನ, ಆಡಳಿತ ಕಚೇರಿಗಳಲ್ಲಿ ಕನ್ನಡ ಬಳಕೆ ಜಾಗೃತಿ ಅಭಿಯಾನ, ಬ್ಯಾಂಕುಗಳಲ್ಲಿ ಕನ್ನಡ ಬಳಕೆ ಅಭಿಯಾನ ಹೀಗೆ ಪ್ರಾಧಿಕಾರ ಕನ್ನಡ ಕಾಯಕ ವರ್ಷಾಚರಣೆ ಸಮಯದಲ್ಲಿ ಹಲವು ಅಭಿಯಾನದ ಮೂಲಕ ಕನ್ನಡ ಮನಸ್ಸುಗಳನ್ನು ಬೆಸೆಯುವ, ಕನ್ನಡೇತರರು ಕನ್ನಡ ಕಲಿಯುವ, ಕನ್ನಡದ ಬಗ್ಗೆ ಮತ್ತಷ್ಟು ಜಾಗೃತಿ ಮೂಡಿಸುವ ಜನಾಂದೋಲನವನ್ನು ಅಭಿಯಾನಗಳ ರೂಪದಲ್ಲಿ ನಡೆಸಿದೆ. 2020ರ ನವೆಂಬರ್ 1 ರಿಂದ 2021 ಅಕ್ಟೋಬರ್ 31 ರವರೆಗಿನ ವರ್ಷವನ್ನು ಕನ್ನಡ ಕಾಯಕ ಎಂದು ಆಚರಿಸಲಾಗುತ್ತಿದೆ.

## ಪ್ರಾಧಿಕಾರದ ಮುಂದಿನ ಯೋಜನೆಗಳೇನು?

ರಾಜ್ಯದಲ್ಲಿ 63 ಗಡಿ ತಾಲೂಕುಗಳಿದ್ದು, ಗಡಿಭಾಗದಲ್ಲಿ ಕನ್ನಡ ಮಾಧ್ಯಮ ವಿದ್ಯಾರ್ಥಿಗಳ ಶಿಕ್ಷಣವನ್ನು ಪ್ರೋತ್ಸಾಹಿಸಲು ಗಡಿಭಾಗದ ಕನ್ನಡ ಮಾಧ್ಯಮ ಶಾಲೆಗಳಿಗೆ ಕಂಪ್ಯೂಟರ್, ಸ್ಮಾರ್ಟ್ ಕ್ಲಾಸ್ ಸೌಲಭ್ಯ ಒದಗಿಸಲಾಗುವುದು, ನವೆಂಬರ್ ಮಾಸ ಪೂರ್ತಿ ಸಮಾರೋಪ ಸಮಾರಂಭ ಜರುಗಲಿದೆ. ಇದರ ಅಂಗವಾಗಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ವಿವಿಧ ಸ್ಪರ್ಧೆಗಳ ಮೂಲಕ ನಿರಂತರ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.



Downloaded From: www.kpscvaani.com

ಬೆಂಗಳೂರು ಮಹಾನಗರ ಪಾಲಿಕೆ ಸೇರಿದಂತೆ ರಾಜ್ಯದ 31 ಜಿಲ್ಲೆಗಳಲ್ಲೂ ಕನ್ನಡ ಜಾಗೃತಿ–ಕಾಯಕ ಸಮಾರೋಪದ ಅಂಗವಾಗಿ "ನಡೆಯಾನ, ನುಡಿಯಾನ, ಗುಡಿಯಾನ" ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ "ಕರ್ನಾಟಕ ಸಂಗಾತಿ" ಎಂಬ ಕೃತಿ ಬಿಡುಗಡೆ ಮಾಡಲಾಗುತ್ತಿದೆ. ವಿಶೇಷವಾಗಿ ಕೆಎಎಸ್– ಐಎಎಸ್ ಪರೀಕ್ಷೆ ಬರೆಯಲಿರುವ ವಿದ್ಯಾರ್ಥಿಗಳ ಪಾಲಿಗೆ ಇದು ಅಮೂಲ್ಯ, ಸಂಗ್ರಹ ಯೋಗ್ಯ ಕೃತಿಯಾಗಲಿದೆ. ಇದರ ಜೊತೆಗೆ 30 ಮಕ್ಕಳ ಸಾಹಿತ್ಯ ಕೃತಿ ಸೇರಿದಂತೆ 60 ಕೃತಿಗಳನ್ನು ಹೊರತರುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

### ವಿದೇಶದಲ್ಲೂ ಕನ್ನಡ ಕಲಿಕೆಗೆ ವಿಶೇಷ ಕಾರ್ಯಕ್ರಮ?

ವಿದೇಶಗಳಲ್ಲಿ ನೆಲೆಸಿರುವ, ಕನ್ನಡ ಕಲಿಯಲು ಆಸಕ್ತಿ ತೋರುತ್ತಿರುವವರಿಗೂ ಕನ್ನಡ ಕಲಿಸುವ ಕಾಯಕ ಸಾಗಿದೆ. ಪ್ರಾಧಿಕಾರ 60 ವಿವಿಧ ದೇಶಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದು ಅಲ್ಲಿನ ಮಕ್ಕಳಿಗೆ, ಕಲಿಯುವ ಆಸಕ್ತರಿಗೆ ಆನ್ ಲೈನ್ ಮೂಲಕ ಕನ್ನಡ ಕಲಿಸಲು ಮುಂದಾಗಿದೆ. ಅವರಿಗಾಗಿಯೇ ವಿಶೇಷ ಪಠ್ಯಕ್ರಮ ತಯಾರು ಮಾಡಿ, ಸರಳವಾಗಿ ಕನ್ನಡ ಕಲಿಯುವ, ಕಲಿಸುವ ಅವಕಾಶ ಕಲ್ಪಿಸಲಾಗಿದೆ.

### ಕನ್ನಡ ಇನ್ನೂ ಪರಿಣಾಮಕಾರಿಯಾಗಿ ಜಾರಿಯಾಗಲು ಆಗಬೇಕಿರುವ ಕೆಲಸಗಳೇನು?

ಈ ವಿಚಾರದಲ್ಲಿ ಪ್ರಾಧಿಕಾರ ಗಂಭೀರವಾಗಿ ಚಿಂತನೆ ಮಾಡಿ ಸರ್ಕಾರಕ್ಕೆ ಹಲವು ಶಿಫಾರಸು ಮಾಡಲು ತೀರ್ಮಾನಿಸಿದೆ. ವಿಶೇಷವಾಗಿ ಸಮಗ್ರ ಅನುಷ್ಠಾನಕ್ಕೆ ಎಲ್ಲ ಕೆಲಸ ಕಾರ್ಯಗಳು ಸುಲಲಿತವಾಗಿ ಅದೂ ಒಂದೇ ವೇದಿಕೆಯಲ್ಲಿ ಆಗುವಂತಹ ಹೊಸ ಆಡಳಿತ ವ್ಯವಸ್ಥೆ ರೂಪುಗೊಳ್ಳಬೇಕಿದೆ. ಉದಾಹರಣೆಗೆ ರಾಜ್ಯದಲ್ಲಿ ನಾಮಫಲಕಗಳನ್ನು ಹಾಕಬೇಕಾದರೆ, ಕಾರ್ಮಿಕ ಇಲಾಖೆಯೊಂದಿಗೆ ಪ್ರಾಧಿಕಾರ ವ್ಯವಹರಿಸಬೇಕು. ಅದೇ ರೀತಿ ಕನ್ನಡದ ಹೆಸರನ್ನು ಯಾವುದಾದರೂ ರಸ್ತೆಗಳಿಗೆ, ಇಲ್ಲವೇ ವೃತ್ತಗಳಿಗೆ ನಾಮಕರಣ ಮಾಡಬೇಕೆಂದರೆ ಮಹಾನಗರ ಪಾಲಿಕೆಯನ್ನು ಅವಲಂಬಿಸಿ ಅವರ ಮೂಲಕವೇ ಮಾಡಬೇಕಿದೆ. ಹೀಗೆ, ಜನಮನದಲ್ಲಿ ಕನ್ನಡವನ್ನು ಶಾಶ್ವತವಾಗಿ ಉಳಿಸುವ ಕೆಲಸಗಳನ್ನು ಮಾಡಬೇಕಾದರೆ ಎಲ್ಲವೂ ಒಂದೇ ಸೂರಿನಡಿ ತೀರ್ಮಾನ ಆಗಬೇಕು. ಆಗ ಮಾತ್ರ ಕನ್ನಡದ ಅನುಷ್ಠಾನ ಇನ್ನೂ ಹೆಚ್ಚು ಪರಿಣಾಮಕಾರಿಯಾಗಲಿದೆ. ಇದಕ್ಕಾಗಿಯೇ ಸಮಗ್ರ ಕನ್ನಡ ಮಸೂದೆ ಜಾರಿಯಾಗಬೇಕೆಂಬುದು ನಮ್ಮ ಒಕ್ಕೊರಲ ಆಗ್ರಹ.

### ಜನಬಳಕೆ ಭಾಷೆಗಳ ರಕ್ಷಣೆಯೂ ಆಗಬೇಕಲ್ಲವೇ?

ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಎಂಬುದರಲ್ಲಿ ಎರಡನೇ ಮಾತಿಲ್ಲ. ಆದರೆ ರಾಜ್ಯದಲ್ಲಿ ತುಳು, ಕೊಂಕಣಿ ಮತ್ತು ಕೊಡವ ಹೀಗೆ ಬೇರೆ–ಬೇರೆ ಭಾಷೆ ಮಾತನಾಡುವ ಜನರಿದ್ದಾರೆ, ಸಮುದಾಯವಿದೆ. ಹಿಂದಿ ಬಲವಂತದ ಹೇರಿಕೆ ಸೂಕ್ತವಲ್ಲ. ರಾಜ್ಯಗಳಿಗೆ ಜನಭಾಷೆಯೇ ಬಹಳ ಮುಖ್ಯ ಮತ್ತು ಅದೇ ಆಡಳಿತ ಭಾಷೆಯಾಗಿರಬೇಕು. ಸಂವಿಧಾನದ 8ನೇ ಪರಿಚ್ಛೇದಕ್ಕೆ 22 ಪ್ರಮುಖ ಭಾರತೀಯ ಭಾಷೆಗಳನ್ನು ಸೇರಿಸುವ ಕೆಲಸವೂ ಬಹಳ ಮುಖ್ಯವಾಗಿ ಆಗಬೇಕಿದೆ. ನಮ್ಮ ಸಂಸದರು ಮನಸ್ಸು ಮಾಡಿದರೆ ಒಂದೇ ದಿನದಲ್ಲಿ ಈ ಕೆಲಸವನ್ನು ಸಂಸತ್ತಿನಲ್ಲಿ ಮಾಡಿ ಮುಗಿಸಬಹುದು. ಭಾರತೀಯ ಭಾಷೆಗಳಿಗೂ ಗೌರವ, ಮಾನ್ಯತೆ ಸಿಗಬೇಕು. ಈ ನಿಟ್ಟಿನಲ್ಲಿ ದೇಶದಲ್ಲಿ ದೊಡ್ಡ ಭಾಷಾ ಕ್ರಾಂತಿಯಾಗಬೇಕು.



### ಕನ್ನಡ ಶಾಸ್ತ್ರೀಯ ಭಾಷೆ ಸವಲತ್ತು, ಅನುದಾನ ಪಡೆಯುವ ನಿಟ್ಟಿನಲ್ಲಿ ಆಗಬೇಕಿರುವ ಕೆಲಸಗಳೇನು?

ನಾಡಿನ ಅನೇಕ ಸಾಹಿತಿಗಳು, ಸರ್ಕಾರದ ಪ್ರಯತ್ನ ಮತ್ತು ಕನ್ನಡಪರ ಹೋರಾಟಗಾರರ ಫಲವಾಗಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನ–ಮಾನ ಲಭಿಸಿದೆ. ಈ ನಿಟ್ಟಿನಲ್ಲಿ ಬಹಳಷ್ಟು ಕೆಲಸ ಕಾರ್ಯಗಳು ಮುಂದೆ ಆಗಬೇಕಿದೆ. ಇದುವರೆಗೆ ಕಚೇರಿ ಎಲ್ಲಿ ತಲೆಯೆತ್ತಬೇಕು ಎಂಬುದರ ಬಗ್ಗೆ ವಾದ–ವಿವಾದ ನಡೆಯುತ್ತಿತ್ತು. ಸದ್ಯ ಮೈಸೂರಿನಲ್ಲಿ 4 ಎಕರೆ 20 ಗುಂಟೆ ಜಮೀನು ಲಭ್ಯವಾಗಿದೆ. ಈ ಕುರಿತು ಮೈಸೂರಿನ ಕೇಂದ್ರೀಯ ಭಾರತೀಯ ಭಾಷಾ ಸಂಸ್ಥಾನ ಮತ್ತು ಮೈಸೂರು ವಿಶ್ವವಿದ್ಯಾಲಯ ನಡುವೆ ಈಗಾಗಲೇ ಒಡಂಬಡಿಕೆಯಾಗಿದೆ. ಸದ್ಯ ಜಾಗದ ಸಮಸ್ಯೆ ಒಂದು ಹಂತಕ್ಕೆ ಬಗೆಹರಿದಿದ್ದು ಮುಂದಿನ ಕೆಲಸ ಕಾರ್ಯಗಳು ಅಷ್ಟೇ ವೇಗದಲ್ಲಿ ಆಗಬೇಕಿದೆ. ಕಟ್ಟಡ ಪೂರ್ಣಗೊಂಡ ನಂತರ ಸಂಶೋಧನಾ ಕೃತಿಗಳನ್ನು ಹೊರತರುವ ಕೆಲಸ ಪ್ರಾರಂಭವಾಗಲಿದೆ. ಇದರಿಂದ ಮುಂದೆ ಕೇಂದ್ರದಿಂದ ಭಾಷೆ ಬೆಳವಣಿಗೆಗೆ ದೊಡ್ಡ ಮಟ್ಟದ ಅನುದಾನ ದೊರಕಲಿದೆ. ಜೊತೆಗೆ ಜಗತ್ತಿನ ಬೇರೆ–ಬೇರೆ ಭಾಷೆಗಳ ಶ್ರೇಷ್ಠ ಕೃತಿಗಳನ್ನೂ ಕನ್ನಡಕ್ಕೆ ಭಾಷಾಂತರ ಮಾಡುವುದಕ್ಕೂ ಚಾಲನೆ ದೊರಕಲಿದೆ. ಈ ಮೂಲಕ ಕನ್ನಡದ ಗೌರವ, ಶ್ರೀಮಂತಿಕೆ ಮತ್ತಷ್ಟು ಹೆಚ್ಚಲಿದೆ. ಕೊರೊನ ಕಾರಣದಿಂದ ಕಚೇರಿ ನಿರ್ಮಾಣ ಕಾರ್ಯ ವಿಳಂಬವಾಗಿದ್ದು, ಮುಂದಿನ ದಿನಗಳಲ್ಲಿ ಇದರ ಬಗ್ಗೆ ಹೆಚ್ಚಿನ ಕಾಳಜಿ ತೋರುವಂತೆ ಪ್ರಾಧಿಕಾರ ಸರ್ಕಾರದ ಮೇಲೆ ಹಕ್ಕೊತ್ತಾಯ ಮಾಡಲಿದೆ.

### ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ನಿಮ್ಮ ಅಭಿಪ್ರಾಯ

ಮಗುವಿನ ಶಿಕ್ಷಣ ಮಾತೃಭಾಷೆಯಲ್ಲೇ ಆಗಬೇಕೆಂದು ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಪ್ರತಿಪಾದನೆ ಮಾಡಿರುವುದು, ಭಾಷಾ ಬೆಳವಣಿಗೆಯ ದೃಷ್ಟಿಯಿಂದ ಐತಿಹಾಸಿಕ ತೀರ್ಮಾನ. ಶಿಕ್ಷಣ ಆಯಾಯ ರಾಜ್ಯಗಳ ಆಡಳಿತ ಭಾಷೆಯಲ್ಲೇ ಆಗಬೇಕೆಂಬ ಜಗತ್ತಿನ ಭಾಷಾ ತಜ್ಞರು ಮತ್ತು ನಾಡಿನ ಉದ್ದಾಮ ಸಾಹಿತಿಗಳ ಬಹು ದಶಕಗಳ ಆಶೋತ್ತರಗಳನ್ನು ಹೊಸ ಶಿಕ್ಷಣ ನೀತಿ ಅನಾವರಣಗೊಳಿಸಿರುವುದು ಕನ್ನಡ ಸಾಹಿತ್ಯ ವಲಯಕ್ಕೆ ಸಂದ ದೊಡ್ಡ ಗೌರವ ಎಂದರೂ ಅತಿಶಯೋಕ್ತಿಯಾಗಲಾರದು.

### ಕೊನೆಯದಾಗಿ ರಂಗಭೂಮಿ, ಸಿನಿಮಾದ ಬಗ್ಗೆ ಒಂದೆರಡು ಮಾತು

ಭಾಷಾ ಶ್ರೀಮಂತಿಕೆಯನ್ನು ಮತ್ತಷ್ಟು ಉಜ್ವಲಗೊಳಿಸುವಲ್ಲಿ, ಜನರ ಹೃದಯದ ಹತ್ತಿರಕ್ಕೆ ಎಳೆದು ತರುವವಲ್ಲಿ ರಂಗಭೂಮಿ ಮತ್ತು ಸಿನಿಮಾ ಕೊಡುಗೆ ಅಪಾರ. ರಂಗಭೂಮಿ ಮತ್ತು ಸಿನಿಮಾ ಜಗತ್ತಿನ ನಂಟಿನೊಂದಿಗೆ ಜೊತೆಜೊತೆಯಾಗಿ ಬೆಳೆದವನು ನಾನು. ಬಿ.ವಿ.ಕಾರಂತ ರಂಗಭೂಮಿ ಗುರುಗಳಾದರೆ, ಗಿರೀಶ್ ಕಾರ್ನಾಡ್ ಸಿನಿಮಾರಂಗದ ಗುರುಗಳು. ನನ್ನ ವ್ಯಕ್ತಿತ್ವದ ಹಿಂದೆ ಈ ಎರಡು ಅಮೂಲ್ಯ ಆಭರಣಗಳ ಪರಿಶ್ರಮವಿದೆ, ಮಾರ್ಗದರ್ಶನವಿದೆ, ಹಾರೈಕೆಯಿದೆ. ■



Downloaded From: www.kpscvaani.com

# ಅಪ್ಪಟ ಕನ್ನಡದ ಅಭಿಮಾನಿ:
# ಬಶೀರ ಅಹ್ಮದ ಹೊಸಮನಿ

ಈರಣ್ಣ ಬೆಂಗಾಲಿ

**ಹುಟ್ಟು ಭಾಷೆ ಅನ್ಯ ಭಾಷೆಯಾದರೂ ಕೂಡ ಕನ್ನಡ ಭಾಷೆಯ ಉಳಿವಿಗಾಗಿ ವಿವಿಧ ಕನ್ನಡ ಚಟುವಟಿಕೆಯನ್ನು ನಡೆಸುತ್ತಾ, ಅನೇಕ ಕನ್ನಡ ಹೋರಾಟಗಳಲ್ಲಿ ಭಾಗವಿಸುತ್ತಾ, ಅಪ್ಪಟ ಕನ್ನಡ ಅಭಿಮಾನಿಯಾಗಿದ್ದಾರೆ ರಾಯಚೂರಿನ ಬಶೀರ ಅಹ್ಮದ ಹೊಸಮನಿ ಅವರು.**

ಕನ್ನಡ ಎಂಬುದು ನಮ್ಮ ನುಡಿಯಷ್ಟೇ ಅಗಿರದೇ ಅದು ನಮ್ಮ ಜೀವ, ಜೀವನವಾಗಿದೆ. ಕನ್ನಡ ನಾಡಲ್ಲಿ ಹುಟ್ಟುವುದೇ ಸೌಭಾಗ್ಯ. ಇಲ್ಲಿನ ನೆಲ-ಜಲ, ಭಾಷೆ-ಲಿಪಿ, ಸಂಸ್ಕೃತಿ-ಪರಂಪರೆ, ಪರಿಸರ, ಐತಿಹಾಸಿಕ ಕುರುಹುಗಳು ನಮ್ಮನ್ನು ಮಂತ್ರಮುಗ್ಧರನ್ನಾಗಿಸುತ್ತವೆ. ಈ ಕಾರಣದಿಂದಾಗಿಯೇ ಅನೇಕ ಸಾಹಿತಿ, ಕಲಾವಿದರು ಕನ್ನಡ ನಾಡನ್ನು ತಮ್ಮ ಲೇಖನಿಯಲ್ಲಿ, ಕುಂಚದಲ್ಲಿ ಸೊಗಸಾಗಿ ಬರೆದಿದ್ದಾರೆ, ಚಿತ್ರಿಸಿದ್ದಾರೆ. ಹಲವು ಹಾಡುಗಳಲ್ಲಿ ಸುಮಧುರವಾಗಿ ಕನ್ನಡ ನಾಡನ್ನು ವರ್ಣಿಸಿದ್ದಾರೆ. ಕನ್ನಡ ಭಾಷೆಯನ್ನು ಉಳಿಸಿ, ಬೆಳೆಸುವ ಕೂಗು ಬಹಳ ದಟ್ಟವಾಗಿ ಕೇಳಿಬರುತ್ತಿದೆ.

ಅನ್ಯಭಾಷೆಗಳ ಹಾವಳಿ, ಮೋಹದಿಂದ ಕನ್ನಡದ ತಾಯಿ ಸೊರಗುತ್ತಿದ್ದಾಳೆ ಎಂಬುದು ಭಾಷಾತಜ್ಞರ ಅಭಿಪ್ರಾಯವಾಗಿದ್ದರೆ, ಇದು ವಿಪರ್ಯಾಸದ ಸಂಗತಿ ಎಂದು ಅನೇಕ ಕನ್ನಡಿಗರು ನೊಂದಿದ್ದಾರೆ. ಕನ್ನಡದ ಅಳಿವು, ಉಳಿವಿನ ಮಧ್ಯೆಯೇ ಕನ್ನಡ ನಾಡು-ನುಡಿಯ ಬಗ್ಗೆ ಈಗಲೂ ಅನೇಕರಿಗೆ ವಿಶೇಷ ಒಲವಿದೆ. ಕನ್ನಡ ಮರೆಯದ ಅನೇಕ ಭಾಷಾಭಿಮಾನಿಗಳು ನಮ್ಮ ನಡುವೆಯೇ ಇದ್ದಾರೆ. ರಾಯಚೂರಿನ ಬಶೀರ ಅಹ್ಮದ ಹೊಸಮನಿ ಅವರು ಕನ್ನಡದ ಅಭಿಮಾನಿಯಾಗಿ, ವಿವಿಧ ಕನ್ನಡದ ಚಟುವಟಿಕೆಗಳಿಂದ, ಕನ್ನಡದ ಸೇವೆಗಳಿಂದ, ಕನ್ನಡಕ್ಕಾಗಿ ಅನೇಕ ಹೋರಾಟಗಳನ್ನು ಮಾಡಿ ಗಮನ ಸೆಳೆದಿದ್ದಾರೆ.

ಕನ್ನಡ ಪ್ರೇಮಿ, ಸಾಮಾಜಿಕ ಚಿಂತನೆಯ ಬಶೀರ ಅಹ್ಮದ ಹೊಸಮನಿ ರಾಯಚೂರಿನ ಮಾನವಿ ತಾಲೂಕಿನವರಾಗಿದ್ದು, ವೃತ್ತಿಯಲ್ಲಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಲ್ಲಿ ನೌಕರರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಕನ್ನಡದ ಹಲವು ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಕನ್ನಡ ಪರ ಹೋರಾಟಗಾರರಾಗಿ, ಬರಹಗಾರರಾಗಿ, ರಂಗಭೂಮಿಯ ನಟರಾಗಿಯೂ ಸಕ್ರಿಯರಾಗಿದ್ದಾರೆ. ಆರಂಭದಲ್ಲಿ ತಮ್ಮ ಹುಟ್ಟೂರಿನಲ್ಲಿ ಮಹಾತ್ಮ ಗಾಂಧೀಜಿ ಯುವಕ ಸಂಘ ಸ್ಥಾಪನೆ ಮಾಡಿ, ಅದರಡಿ ಗ್ರಾಮದಲ್ಲಿ ಕನ್ನಡಕ್ಕೆ ಸಂಬಂಧಪಟ್ಟ ಹಾಗೆ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮತ್ತು ವಿವಿಧ ಸ್ವಚ್ಛತಾ ಕಾರ್ಯಗಳನ್ನು ಹಮ್ಮಿಕೊಂಡಿದ್ದರು.














Downloaded From: www.kpscvaani.com

ಕ್ರಿಯಾಶೀಲ ಸಂಘಟನಾಕಾರರಾದ ಇವರು ಶಕ್ತಿನಗರದಲ್ಲಿ ಸೇವೆ ಸಲ್ಲಿಸುವಾಗ ಜಿಲ್ಲಾ ಕನ್ನಡ ಕ್ರಿಯಾ ಸಮಿತಿಯ ಸ್ಥಾಪಕ ಸದಸ್ಯರಾಗಿ, ಕಾರ್ಯದರ್ಶಿಯಾಗಿದ್ದರು. ಸಂಗೀತದ ಅಭಿರುಚಿಯನ್ನು ಹೊಂದಿ ಶಕ್ತಿನಗರದಲ್ಲಿ ಸಂಗೀತ ಗುರುಗಳನ್ನು ಕರೆತಂದು, ಸಂಗೀತ ಶಾಲೆಯೊಂದನ್ನು ಆರಂಭಿಸುವಲ್ಲಿ ಇವರು ಪ್ರಮುಖ ಪಾತ್ರವಹಿಸಿದ್ದಾರೆ. ಇದೇ ಶಕ್ತಿನಗರದಲ್ಲಿ ಐತಿಹಾಸಿಕ ಸಂಗೊಳ್ಳಿ ರಾಯಣ್ಣ ನಾಟಕ ಆಯೋಜನೆ ಮಾಡಿದ್ದರು, ನೃಪತುಂಗ ನಾಟ್ಯ ಕಲಾರಂಗವನ್ನು ಶಕ್ತಿನಗರದಲ್ಲಿ ಸ್ಥಾಪಿಸಿದರು. ಕಲಾರಂಗದ ಅಡಿಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ನಾಟಕಗಳ ಮೂಲಕ ಜನರಿಗೆ ಮನರಂಜನೆ ನೀಡಿದರು. ಗಡಿನಾಡಿನಲ್ಲೂ ವಿವಿಧ ನಾಟಕಗಳನ್ನು ಹಮ್ಮಿಕೊಂಡು ಅಲ್ಲಿಯೂ ಕನ್ನಡದ ಕಂಪನ್ನು ಪಸರಿಸಿದ ಕೀರ್ತಿ ಬಶೀರ್ ಅಹ್ಮದ ಅವರಿಗೆ ಸಲ್ಲುತ್ತದೆ.

ಕನ್ನಡ ಎಂದರೆ ಸಾಕು ಕುಣಿದಾಡುವ, ಕನ್ನಡ ಎಂದರೆ ಸಾಕು ಎದೆಯುಬ್ಬಿಸಿ ಅಭಿಮಾನ ಪಡುವ ಇವರು ಡಾ.ರಾಜಕುಮಾರ್ ಅಭಿಮಾನಿಗಳ ಸಂಘದ ಜಿಲ್ಲಾಧ್ಯಕ್ಷರಾಗಿದ್ದಾಗ ರಾಯಚೂರಿನ ಹೃದಯ ಭಾಗವಾದ ಅಂಬೇಡ್ಕರ್ ವೃತ್ತದ ಎದುರುಗಡೆ ಇರುವ ಕೋಟೆಯ ಮುಂಭಾಗದಲ್ಲಿ ಕನ್ನಡ ಧ್ವಜಸ್ತಂಭ ಸ್ಥಾಪಿಸಲು ಹೋರಾಡಿ ಯಶಸ್ವಿಯಾದದ್ದು ಶ್ಲಾಘನೀಯ.

ಕನ್ನಡ ಸಾಹಿತ್ಯ ಪರಿಷತ್ತಿನ ಕೆಲಸಗಳಿಗೆ ಬೆನ್ನೆಲುಬಾಗಿದ್ದ ಇವರು ನೃಪತುಂಗ ನಾಟ್ಯ ಕಲಾರಂಗ ಸ್ಥಾಪಿಸಿ ಪ್ರಧಾನ ಕಾರ್ಯದರ್ಶಿಯಾಗಿ ಸುಮಾರು ನಾಟಕಗಳನ್ನು ನಿರ್ದೇಶಿಸಿದಲ್ಲದೆ ಸ್ವತಃ ತಾವು ಕೂಡ ಅನೇಕ ಪಾತ್ರಗಳಿಗೆ ಜೀವತುಂಬಿದ್ದಾರೆ. ಉತ್ತಮ ಬರಹಗಾರರಾಗಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಇತಿಹಾಸ ಮತ್ತು ಪಂಚಾಯಿತಿ–ನಾಟಕ, ನಮ್ಮೂರ ಓಣಿಯ ಹೃದಯದ ಸದ್ದುಗಳು–ಕಾದಂಬರಿ, ಗಾಂಧೆಪ್ಪ, ಮುಳ್ಳು ಮತ್ತು ಇತರ ಕಥೆಗಳು–ಕಥಾ ಸಂಕಲನ, ಭಾಗ್ಯದ ಬಳೆಗಾರ ಹೋಗಿ ಬಾ ತವರಿಗೆ–ನಾಟಕ ಮತ್ತು ಗಿಂಡಿ– ಕಥಾ ಸಂಕಲನ ಪುಸ್ತಕಗಳನ್ನು ರಚಿಸಿದ್ದಾರೆ.

ಕನ್ನಡದ ಭಾಷಾಭಿಮಾನಿಯಾಗಿ ಇವರು 1994ರಲ್ಲಿ ಕನ್ನಡ ಕ್ರಿಯಾ ಸಮಿತಿಯೊಂದನ್ನು ರಚನೆ ಮಾಡಿ, ಇದರ

> **“ಕನ್ನಡದ ಅಳಿವು, ಉಳಿವಿನ ಮಧ್ಯೆಯೇ ಕನ್ನಡ ನಾಡು–ನುಡಿಯ ಬಗ್ಗೆ ಈಗಲೂ ಅನೇಕರಿಗೆ ವಿಶೇಷ ಒಲವಿದೆ. ಕನ್ನಡ ಮರೆಯದ ಅನೇಕ ಭಾಷಾಭಿಮಾನಿಗಳು ನಮ್ಮ ನಡುವೆಯೇ ಇದ್ದಾರೆ. ರಾಯಚೂರಿನ ಬಶೀರ ಅಹ್ಮದ ಹೊಸಮನಿ ಅವರು ಕನ್ನಡದ ಅಭಿಮಾನಿಯಾಗಿ, ವಿವಿಧ ಕನ್ನಡದ ಚಟುವಟಿಕೆಗಳಿಂದ, ಕನ್ನಡದ ಸೇವೆಗಳಿಂದ, ಕನ್ನಡಕ್ಕಾಗಿ ಅನೇಕ ಹೋರಾಟಗಳನ್ನು ಮಾಡಿ ಗಮನ ಸೆಳೆದಿದ್ದಾರೆ.”**

ಮೂಲಕ ಕನ್ನಡ ಉಳಿಸುವ ಹಲವು ಹೋರಾಟಗಳನ್ನು ಮಾಡಿದ್ದಾರೆ. ಕನ್ನಡ ನಾಮ ಫಲಕ ಇರದ ಆಂಗ್ಲ ಭಾಷೆಯ ಅಥವಾ ಕನ್ನಡೇತರ ಭಾಷೆಯ ನಾಮಫಲಕಗಳಿಗೆ ಮಸಿಯನ್ನು ಬಳಿದು, ಧಿಕ್ಕಾರ ಕೂಗಿದ್ದಾರೆ. ಕನ್ನಡವಲ್ಲದ ಬ್ಯಾನರ್‌ಗಳನ್ನು ತೆರವುಗೊಳಿಸಿದ್ದಾರೆ. ಕನ್ನಡಕ್ಕಾಗಿ ಪಾದಯಾತ್ರೆ ಮಾಡಿ, ಕನ್ನಡ ನಾಮಫಲಕ ಹಾಕುವಂತೆ ಅರಿವು, ಜಾಗೃತಿಯನ್ನು ಮೂಡಿಸಿದ್ದಾರೆ. ಕನ್ನಡಕ್ಕಾಗಿ, ಕನ್ನಡದ ಉಳಿವಿಗಾಗಿ ಧರಣಿ, ಉಪವಾಸ ಸತ್ಯಾಗ್ರಹವನ್ನು ಮಾಡಿದ್ದಾರೆ. ಕನ್ನಡದ ನೆಲ, ಜಲ, ನುಡಿಯ ವಿಷಯಕ್ಕೆ ಧಕ್ಕೆ ಬಂದಾಗ ಧ್ವನಿ ಎತ್ತಿದ್ದಾರೆ.

2000 ಇಸವಿಯಲ್ಲಿ ಶಿವಮೊಗ್ಗದ ಸಾಗರ ತಾಲೂಕಿನ ಕಾರ್ಗಲ್‌ಗೆ ವರ್ಗವಾಗಿ ಹೋದಾಗ ಅಲ್ಲೂ ಕನ್ನಡಪರ ಹೋರಾಟಗಳನ್ನು, ಕಾರ್ಯಕ್ರಮಗಳನ್ನು ಮುಂದುವರೆಸಿದ್ದರು. ನಂತರ 2006ರಲ್ಲಿ ಆಲಮಟ್ಟಿಗೆ ವರ್ಗವಾದಾಗಲೂ ಕನ್ನಡದ ಚಟುವಟಿಕೆಗಳನ್ನು ನಿಲ್ಲಿಸಲಿಲ್ಲ. ಕಳೆದ ವರ್ಷ 2019ರಲ್ಲಿ ಕನ್ನಡ ಅಂಕಿಗಳ ಗೋಡೆ ಗಡಿಯಾರ ಮಾಡಿಸಿ ತಮ್ಮ ಕನ್ನಡದ ಅಭಿಮಾನವನ್ನು ತೋರ್ಪಡಿಸಿದ್ದರು. ಈ ಬಾರಿ ಅಂದರೆ 2021ರ ಕನ್ನಡದ ಅಂಕಿಗಳ 'ಕನ್ನಡ ದರ್ಪಣ' ಎಂಬ ವಿಶಿಷ್ಟವಾದ ಕ್ಯಾಲೆಂಡರ್ ಮಾಡಿಸಿದ್ದಾರೆ. ರಾಯಚೂರಿನ ಸಾಹಿತಿ, ಕಲಾವಿದರಿಂದ ಅದನ್ನು ಲೋಕಾರ್ಪಣೆಗೊಳಿಸಿದ್ದಾರೆ.

ಈ ಹಿಂದೆ ಕರ್ನಾಟಕ ರಾಜ್ಯ ವಿದ್ಯುತ್ ನಿಗಮವು ಆಯೋಜಿಸಿದ್ದ ರಾಜ್ಯಮಟ್ಟದ ಅಂತರ ಕೆ.ಪಿ.ಸಿ, ನಾಟಕ ಸ್ಪರ್ಧೆಯಲ್ಲಿ "ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ" ನಾಟಕದ ಅಭಿನಯಕ್ಕೆ ರಾಜ್ಯ ಮಟ್ಟದ ಅತ್ಯುತ್ತಮ ಪೋಷಕ ನಟ ಪ್ರಶಸ್ತಿ, ಕನ್ನಡ ಯುವಕ ಸಂಘ, ಬೆಂಗಳೂರು ಇದರ ಬೆಳ್ಳಿ ಹಬ್ಬದ ಅಂಗವಾಗಿ ರಾಜ್ಯಮಟ್ಟದ ನಾಟಕ ಸ್ಪರ್ಧೆಯಲ್ಲಿ "ದಾರಿ ಯಾವುದಯ್ಯ ಮುಂದೆ? "ನಾಟಕದ ಅಭಿನಯಕ್ಕೆ ರಾಜ್ಯಮಟ್ಟದ ಅತ್ಯುತ್ತಮ ಪೋಷಕ ನಟ ಪ್ರಶಸ್ತಿ ಸಂದಿದ್ದು ಇವರ ಕೃತಿಗಳಾದ ಇತಿಹಾಸ ಮತ್ತು ಪಂಚಾಯಿತಿ–ನಾಟಕಕ್ಕೆ ಅತ್ತಿಮಬ್ಬೆ ಸಾಹಿತ್ಯ ಪ್ರಶಸ್ತಿ, ನಮ್ಮೂರ ಓಣಿಯ ಹೃದಯದ ಸದ್ದುಗಳು–ಕಾದಂಬರಿಗೆ ರಾಜ್ಯ ಕನ್ನಡ ಸಾಹಿತ್ಯ ಪರಿಷತ್‌ನಿಂದ ವಸುದೇವ ಭೂಪಾಲಂ ದತ್ತಿ ಪ್ರಶಸ್ತಿ ದೊರೆತಿದ್ದು ದಿ.ಬುದ್ದಿಷ್ಟ್ ಸೊಸೈಟಿ ಆಫ್ ಇಂಡಿಯಾ ಹುಬ್ಬಳ್ಳಿ ಇವರಿಂದ ಡಾ.ಬಿ.ಆರ್.ಅಂಬೇಡ್ಕರ್ ರತ್ನ ಪ್ರಶಸ್ತಿಯೂ ಒಳಗೊಂಡಂತೆ ಅನೇಕ ಪ್ರಶಸ್ತಿ, ಪುರಸ್ಕಾರ, ಆತ್ಮೀಯ ಸನ್ಮಾನಗಳನ್ನು ಪಡೆದಿದ್ದಾರೆ.

ಇದೇ ವರ್ಷದ ಆಗಸ್ಟ್‌ನಲ್ಲಿ ದೈಹಿಕ ಅನಾರೋಗ್ಯದ ಕಾರಣದಿಂದ ಸ್ವಯಂ ನಿವೃತ್ತಿಯನ್ನು ಪಡೆದು ರಾಯಚೂರಿನ ಆಸ್ಕಿಹಾಳದಲ್ಲಿ ವಾಸವಾಗಿದ್ದಾರೆ. ತಮ್ಮ ಮನೆಗೆ 'ಕನ್ನಡ ಡಿಂಡಿಮ' ಎಂದು ಹೆಸರಿಟ್ಟು ಮತ್ತೊಮ್ಮೆ ತಮ್ಮ ಕನ್ನಡದ ಅಭಿಮಾನವನ್ನು ಜಗತ್ತಿಗೆ ಕಾಣುವಂತೆ ಮಾಡಿದ್ದಾರೆ. ಸ್ವಜಿಲ್ಲೆ ರಾಯಚೂರಿಗೆ ಬಂದ ನಂತರ ಕನ್ನಡದ ಚಟುವಟಿಕೆಗಳನ್ನು ಮತ್ತಷ್ಟು ಹುರುಪಿನಿಂದ ಮಾಡಲು ಮುಂದಾಗಿದ್ದು, ಕನ್ನಡ ವಿಷಯಕ್ಕೆ ಸಂಬಂಧಿಸಿದಂತೆ ಅನೇಕ ರೂಪುರೇಷೆಗಳನ್ನು ಹಾಕಿಕೊಂಡು, ಕನ್ನಡಕ್ಕಾಗಿಯೆ ತಮ್ಮ ಜೀವನವನ್ನು ಮುಡುಪಾಗಿಟ್ಟಿದ್ದಾರೆ. ಅಲ್ಲದೆ ಕನ್ನಡ ಸಾಹಿತ್ಯ ರಚನೆಯ ಕಾರ್ಯದಲ್ಲಿ ಮಗ್ನರಾಗಿದ್ದಾರೆ. ಕಥೆ, ಕವನಗಳನ್ನು ಬರೆಯುತ್ತಿದ್ದಾರೆ.

'ಕನ್ನಡ ನಾಡು, ನುಡಿಯನ್ನು ನಮ್ಮ ಹೆತ್ತ ತಾಯಿಯಂತೆ ನೋಡಿಕೊಳ್ಳಬೇಕು. ಕನ್ನಡ ಭಾಷೆಯನ್ನು ಯಾರಾದರೂ ಹೀಯ್ಯಾಳಿಸಿದಾಗ, ಭಾಷೆಯಡಿ ಕನ್ನಡಿಗರನ್ನು ಅವಮಾನಿಸಿದಾಗ ಅಥವಾ ಕನ್ನಡಕ್ಕೆ ಮತ್ತು ಕನ್ನಡಿಗರಿಗೆ ದೊರಕಬೇಕಾದ ಸೌಲಭ್ಯಗಳು ದೊರೆಯದೇ ಇದ್ದಾಗ ಪ್ರತಿಯೊಬ್ಬ ಕನ್ನಡಿಗ ಸಿಡಿದೇಳಬೇಕು. ಎಂದು ಖಾರವಾಗಿಯೇ ಹೇಳುತ್ತಾರೆ.



Downloaded From: www.kpscvaani.com

ಸಾರ್ವಜನಿಕ ಸೇವೆಗೆ ಅನಾವರಣಗೊಂಡ

# ಮೊದಲ ವಿದ್ಯುತ್ ಚಾಲಿತ ಬಸ್



ರೇಖಾಚವ್ಹಾಣ್ ಆರ್.ಇ

**ಏರುತ್ತಿರುವ ಜನಸಂಖ್ಯೆ ಮತ್ತು ವಾಹನದಟ್ಟಣೆಯಿಂದಾಗಿ ಬೆಂಗಳೂರು ನಗರವು ಪರಿಸರ ಮಾಲಿನ್ಯಕ್ಕೆ ಒಳಗಾಗುತ್ತಿರುವುದನ್ನು ಮನಗಂಡ ಸರ್ಕಾರವು, ಪರಿಸರ ಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ಪರಿಸರ ಸ್ನೇಹಿಯಾದ ವಿದ್ಯುತ್ ಚಾಲಿತ ಬಸ್‌ಗಳನ್ನು ಸಾರ್ವಜನಿಕ ಸೇವೆಗೆ ಬಳಸಲು ಕ್ರಮ ಕೈಗೊಳ್ಳುತ್ತಿದೆ.**

ಆರೋಗ್ಯವಂತ ಜೀವನ ನಡೆಸಬೇಕೆಂದರೆ ಉಸಿರಾಡಲು ಒಳ್ಳೆಯ ಗಾಳಿ ಅಗತ್ಯ. ಹಾಗಾಗಿ ಪರಿಸರ ಮಾಲಿನ್ಯವಾಗದಂತೆ ಪರಿಸರ ಸಂರಕ್ಷಣೆ ಮಾಡಿಕೊಳ್ಳುವ ಹೊಣೆಗಾರಿಕೆ ನಮ್ಮ ಮೇಲಿದೆ. ಈ ನಿಟ್ಟಿನಲ್ಲಿ ಹೊಸ ಹೊಸ ಆವಿಷ್ಕಾರಗಳನ್ನು 1984 ರಿಂದೀಚೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಮಾಡುತ್ತಿವೆ.

ಬೆಂಗಳೂರು ನಗರದ ಪರಿಸರ ಮಾಲಿನ್ಯ, ಶಬ್ದ ಮಾಲಿನ್ಯ ಎರಡನ್ನು ತಡೆಗಟ್ಟಲು ಮತ್ತು ಸಂಚಾರ ವ್ಯವಸ್ಥೆಯನ್ನು ಸುಗಮಗೊಳಿಸಲು ಬಿ.ಎಂ.ಟಿ.ಸಿ 'ಗ್ರ್ಯಾಂಡ್ ಚಾಲೆಂಜ್' (ದೊಡ್ಡ ಸವಾಲು) ಯೋಜನೆಯಡಿ ಕನ್ನಡ ರಾಜ್ಯೋತ್ಸವದಿಂದ ಇ-ಕಲ್ಚರ್ ಪರಿಕಲ್ಪನೆಗೆ ಪ್ರೋತ್ಸಾಹಿಸಲು ಇ-ಬಸ್ ಅಥವಾ ವಿದ್ಯುತ್ ಚಾಲಿತ ಮಿನಿ ಬಸ್ಸುಗಳು ಮೆಟ್ರೋ ಫೀಡರ್‌ಗಳಂತೆ ಕಾರ್ಯನಿರ್ವಹಿಸಲು ಸಿದ್ಧವಾಗಿವೆ.

ಉತ್ತರ ಪ್ರದೇಶದ ಕಂಪನಿಯೊಂದರಿಂದ ಖರೀದಿಸಲಾಗಿರುವ ಮೊದಲ ವಿದ್ಯುತ್ ಚಾಲಿತ ಬಸ್ ಅನ್ನು ಕೆಂಗೇರಿ ಘಟಕ-37ರ ಆವರಣದಲ್ಲಿ ಇತ್ತೀಚೆಗೆ ಅನಾವರಣ ಮಾಡಿದ ಸಚಿವರು, ಅಧಿಕಾರಿಗಳ ತಂಡದೊಂದಿಗೆ ಪರೀಕ್ಷಾರ್ಥ ಸಂಚಾರ ನಡೆಸಿ ವಾಹನದ ಸಾಧಕ-ಬಾಧಕಗಳನ್ನು ಹಂಚಿಕೊಂಡರು.

ಕೇಂದ್ರದ 'ಸ್ಮಾರ್ಟ್‌ಸಿಟಿ' ಯೋಜನೆ ಅಡಿಯಲ್ಲಿ ಇದಕ್ಕಾಗಿ 50 ಕೋಟಿರೂಗಳ ಅನುದಾನವನ್ನು ಪಡೆಯಲಾಗಿದ್ದು, 90 ಬಸ್ಸುಗಳಿಗೆ 45 ಕೋಟಿ ರೂ. ವೆಚ್ಚವಾಗಲಿದ್ದು, ಐದು ಕೋಟಿ ರೂ.ಗಳನ್ನು ವಿದ್ಯುತ್ ಘಟಕಗಳ ಸ್ಥಾಪನೆಗೆ ಬಳಸಿಕೊಳ್ಳಲಾಗಿದೆ. ಆರಂಭಿಕವಾಗಿ 10 ಬಸ್ಸುಗಳನ್ನು ಸೇವೆಗೆ ಮುಕ್ತಗೊಳಿಸಲಾಗುತ್ತಿದ್ದು, ಡಿಸೆಂಬರ್ ಅಂತ್ಯದೊಳಗೆ ಹಂತ ಹಂತವಾಗಿ 90 ಮಿನಿ ವಿದ್ಯುತ್ ಬಸ್ಸುಗಳು ಸೇವೆಗೆ ಸೇರ್ಪಡೆಯಾಗಲಿವೆ.

ಗಂಟೆಗೆ 120 ಕಿ.ಮಿ. ವೇಗದಲ್ಲಿ ಸಂಚರಿಸುವ ಸಾಮರ್ಥ್ಯವನ್ನು ಹೊಂದಿದ್ದರೂ ಕೂಡ ನಿಯಮಾನುಸಾರದಂತೆ ಈ ಬಸ್ಸಿಗೂ 75 ಕಿ.ಮಿ. ವೇಗವನ್ನು ಮಿತಿಗೊಳಿಸಲಾಗಿದೆ. ಪ್ರಯಾಣಿಕರ ಸುರಕ್ಷತೆಯನ್ನು ಗಮನದಲ್ಲಿರಿಸಿಕೊಂಡು ಬಸ್ಸಿನ ಒಳ ಭಾಗದಲ್ಲಿ ಎರಡು ಮತ್ತು ಬಸ್ಸಿನ ಹಿಂಭಾಗದಲ್ಲಿ ಒಂದು ಸಿ.ಸಿ.ಟಿ.ವಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ.




ಸಾರ್ವಜನಿಕರ ಆರೋಗ್ಯ ದೃಷ್ಟಿಯಿಂದ ಕೇಂದ್ರ ಸರ್ಕಾರದ ಮೇಲೆ ರಾಜ್ಯದ ಎಲ್ಲಾ ಸಂಸದರು ಒತ್ತಡ ತಂದು ಯೋಜನೆಯನ್ನು ಫಲಪ್ರದವಾಗಿಸಿದ್ದಾರೆ. ಬೆಂಗಳೂರಿಗೆ ಮೊದಲ ಹಂತದಲ್ಲಿ 9 ಮೀಟರ್‌ನ ಅಳತೆಯುಳ್ಳ 90 ಮಿನಿ ಬಸ್ಸುಗಳನ್ನು, ಎರಡನೇ ಹಂತದಲ್ಲಿ 12 ಮೀಟರ್‌ನ 300 ಬಸ್ಸು ಮತ್ತು 6 ಡೀಸಲ್ ಬಸ್ಸುಗಳ ಖರೀದಿಗೆ ಸರ್ಕಾರ ಸಿದ್ಧತೆ ಮಾಡಿಕೊಂಡಿದೆ.

ದೇಶದ 9 ಮಹಾನಗರಗಳಿಗೆ ಎಲೆಕ್ಟ್ರಿಕ್ ಬಸ್ಸುಗಳನ್ನು ನೀಡಲು ಕೇಂದ್ರ ಸರ್ಕಾರ ಮುಂದಾಗಿದೆ. ಬೆಂಗಳೂರಿಗೆ ಎಷ್ಟು ಬಸ್ಸುಗಳ ಅಗತ್ಯವಿದೆ ಎಂಬ ಪಟ್ಟಿಯನ್ನು ಕೇಂದ್ರಕ್ಕೆ ಸದ್ಯದಲ್ಲೇ ಒದಗಿಸಲಾಗುವುದು. ಹಾಗಾಗಿ ಮುಂದಿನ ಮೂರು ವರ್ಷಗಳಲ್ಲಿ 1500 ಎಲೆಕ್ಟ್ರಿಕ್ ಬಸ್ಸುಗಳು ಬಿ.ಎಂ.ಟಿ.ಸಿ.ಗೆ ಸೇರ್ಪಡೆಯಾಗುವ ಸಾಧ್ಯತೆ ಇದೆ ಎಂದು ಬಿ.ಎಂ.ಟಿ.ಸಿ. ವ್ಯವಸ್ಥಾಪಕ ನಿರ್ದೇಶಕರಾದ ವಿ. ಅನ್ಬುಕುಮಾರ್ ತಿಳಿಸಿದ್ದಾರೆ.

ಡೀಸೆಲ್ ಬಸ್ಸುಗಳ ದರ 30 ಲಕ್ಷವಾಗಿದ್ದರೆ, ಎಲೆಕ್ಟ್ರಿಕ್ ಬಸ್ಸುಗಳ ದರ ಬರೋಬ್ಬರಿ 1 ಕೋಟಿ ಆಗಿದೆ. ಸದ್ಯಕ್ಕೆ ಬೆಂಗಳೂರು ಮತ್ತು ಪಾರಂಪರಿಕ ನಗರ ಮೈಸೂರಿನಲ್ಲಿ ಇ-ಬಸ್ ಸಂಚಾರಕ್ಕೆ ಯೋಜನೆಯನ್ನು ರೂಪಿಸಲಾಗಿದೆ. ಇದು ಮುಂದಿನ ದಿನಗಳಲ್ಲಿ ಪರಿಸರ ಮಾಲಿನ್ಯ ತಡೆಗಟ್ಟುವಲ್ಲಿ ಪ್ರಮುಖ ಪಾತ್ರವಹಿಸಲಿದೆ.



Downloaded From: www.kpscvaani.com



# ಧಾರವಾಡ ಪೇಡಾ!

## ಒಮ್ಮೆ ತಿಂದು ನೋಡಾ !

● ಡಿ. ಪಿ. ಮುರಳೀಧರ್

**ಸಿಹಿ ಎಂಬ ಎರಡಕ್ಷರದ ಪದವೇ ಅತ್ಯಂತ ಸಿಹಿಯಾದುದು. ಕೇವಲ ಕರಕುಶಲ ವಸ್ತುಗಳ ತಯಾರಿಕೆ ಹಾಗೂ ಕೃಷಿ ಉತ್ಪನ್ನಗಳಿಗೆ ಮೀಸಲಾಗಿದ್ದ ಭೌಗೋಳಿಕ ಸೂಚಿ ಮಾನ್ಯತೆ, ಕರ್ನಾಟಕದ ಜನಪ್ರಿಯ ಸಿಹಿ ತಿನಿಸು ಧಾರವಾಡ ಪೇಡಾಕ್ಕೂ ಲಭಿಸಿದೆ. ಇದು ಸಿಹಿ ಜಗತ್ತಿನಲ್ಲಿ ಧಾರವಾಡ ಪೇಡಾಕ್ಕೆ ಸಂದ ವಿಶೇಷ ಗೌರವ ಎಂದೇ ಭಾವಿಸಬಹುದಾಗಿದೆ. ಕೆಲವು ಪ್ರಮುಖ ಸಿಹಿ ತಿನಿಸುಗಳು ಹಾಗೂ ಭೌಗೋಳಿಕ ಸೂಚಿ ವಿಚಾರಗಳು ಈ ಲೇಖನದಲ್ಲಿದೆ.**

ಹಬ್ಬಗಳನ್ನು ಆಚರಿಸುವಾಗ ಹಾಗೂ ಸಂತಸವನ್ನು ಹಂಚಿಕೊಳ್ಳುವಾಗ ನಮಗೆ ಸಿಹಿ ತಿನಿಸುಗಳು ಅನಿವಾರ್ಯ. ವಿದೇಶಗಳಲ್ಲಿ ಪೆಪ್ಪರ್‌ಮೆಂಟ್, ಚಾಕೋಲೇಟ್ ಹಾಗೂ ಕೇಕ್‌ಗಳು ಸಿಹಿ ತಿನಿಸುಗಳೆನಿಸಿವೆ. ಆದರೆ, ಭಾರತ ಹಾಗಲ್ಲ. ಭಾರತದಲ್ಲಿ ಸಿಹಿ ಜಗತ್ತೇ ಇದೆ ! ಒಂದೊಂದು ರಾಜ್ಯದಲ್ಲೂ ಒಂದೊಂದು ವಿಶೇಷತೆ ಇದೆ !

ಸಿಹಿ ಲೋಕದಲ್ಲೊಮ್ಮೆ ಪಯಣಿಸಿದರೆ ಏಕಕಾಲಕ್ಕೆ ಅಚ್ಚರಿ ಮತ್ತು ಆನಂದ ಉಂಟಾಗುತ್ತವೆ. ಚಾಲುಕ್ಯರ ಮೂರನೇ ಸೋಮೇಶ್ವರ " ಮಾನಸೋಲ್ಲಾಸ " ಎಂಬ ತನ್ನ ಕೃತಿಯಲ್ಲಿ ವಿವಿಧ ಬಗೆಯ ಸಿಹಿ ತಿನಿಸುಗಳ ಬಗ್ಗೆ ಉಲ್ಲೇಖಿಸಿರುವುದರ ಜೊತೆಗೆ ಆ ಸಿಹಿ ತಿನಿಸುಗಳನ್ನು ತಯಾರಿಸುವುದು ಹೇಗೆ ? ಎಂಬುದನ್ನೂ ವರ್ಣಿಸಿದ್ದಾನೆ.

ಕಡಲೆಹಿಟ್ಟು, ತುಪ್ಪ, ಕಲ್ಲು ಸಕ್ಕರೆ, ದ್ರಾಕ್ಷಿ, ಗೋಡಂಬಿ ಮತ್ತು ಏಲಕ್ಕಿಯ ಸಮ್ಮಿಶ್ರಣದೊಂದಿಗೆ ರಾಜಾಸ್ಥಾನದಲ್ಲಿ ಕ್ರಿಸ್ತ ಪೂರ್ವ 2600 ರಲ್ಲಿ ತಯಾರಾದ ಲಡ್ಡೂ ಅಥವಾ ಲಾಡೂ ಗೆ 4621 ವರ್ಷಗಳ ಇತಿಹಾಸವಿದೆ ಎಂಬುದು ರೋಚಕ ಎನಿಸುತ್ತದೆ.

ಕಜ್ಜಾಯದ ಉಲ್ಲೇಖ ಋಗ್ವೇದದಲ್ಲಿದೆ ಎಂಬುದು ಕುತೂಹಲವನ್ನು ಮೂಡಿಸುತ್ತದೆ. ಸಜ್ಜಪ್ಪ, ಎರಿಯಪ್ಪ ಹಾಗೂ ಸುಕ್ಕಿನುಂಡೆಯನ್ನು ಮಾಲ್‌ಪೂವಾ ಎಂದು ಕರೆಯಲಾಗುವ ಕಜ್ಜಾಯದ ಸಮ ಸಂತತಿ ಎನ್ನಬಹುದು.

**ಪಾಯಸ ಪ್ರಪಂಚ !**

ಪಾಯಸ ಎಂಬ ಪೇಯ ಕೂಡಾ ಸಿಹಿ ಲೋಕದಲ್ಲಿ ತನ್ನದೇ ಅಸ್ಮಿತೆಯನ್ನು ಉಳಿಸಿಕೊಂಡಿದೆ. ಶ್ಯಾವಿಗೆ ಪಾಯಸ ಅಥವಾ ಶ್ಯಾವಿಗೆ ಖೀರು, ಗಸಗಸೆ ಪಾಯಸ, ಕಡಲೇ ಬೇಳೆ ಪಾಯಸ, ಸಬ್ಬಕ್ಕಿ ಪಾಯಸಗಳ ಲೋಕಕ್ಕೆ ಗೋಧಿ ಪಾಯಸ ಮತ್ತು ಹಲಸು ಪಾಯಸ ಕೂಡಾ ಸೇರ್ಪಡೆಯಾಗಿವೆ. ಒತ್ತು ಶ್ಯಾವಿಗೆಯ ಜೊತೆಗೆ ಗಸಗಸೆ ಪಾಯಸವು ಸ್ವಾದ ಲೋಕದಲ್ಲಿ ಒಂದು ರೀತಿಯ ಅದ್ಭುತವನ್ನೇ ಸೃಷ್ಟಿಸುತ್ತದೆ.

ಅತ್ತ ಪೇಯ ಎಂದೂ ಬಣ್ಣಿಸಲಾಗುವುದಿಲ್ಲ ! ಇತ್ತ ಖಾದ್ಯ ಎಂದೂ ಪರಿಗಣಿಸಲಾಗುವುದಿಲ್ಲ ! ಅದುವೇ ಹಾಲ್‌ಬಾಯ್ ಎಂಬ ಮಲೆನಾಡ ವಿಶೇಷ ಸಿಹಿ ತಿನಿಸು. ಇದೂ ಕೂಡಾ ಸ್ವಾದಿಷ್ಟದ ಪರಾಕಾಷ್ಠೆ.





Downloaded From: www.kpscvaani.com

**ಮೊಘಲರ ಸಿಹಿ ತಿನಸುಗಳು**

ಅಂಡಾಕಾರದಲ್ಲಿ ಹಾಗೂ ಗೋಲಾಕಾರದಲ್ಲಿ ಸಕ್ಕರೆಯ ಬಿಸಿ ಪಾಕದಲ್ಲಿ ತೇಲುವ ಅತ್ಯಂತ ಜನಪ್ರಿಯ ಸಿಹಿ ತಿನಿಸು ಗುಲಾಬ್ ಜಾಮೂನ್‌ನ ತವರು ಇರಾನ್ ದೇಶ.

ಕಡಲೆ ಹಿಟ್ಟು ಮತ್ತು ಮೈದಾ ಹಿಟ್ಟಿನಿಂದ ಮೈದೇಳಿ ಸುರುಳಿ ರೂಪ ಧರಿಸಿ ಸಕ್ಕರೆ ಪಾಕದಲ್ಲೇ ಮುಳುಗಿ ಎದ್ದ ಜಿಲೇಬಿ ಮೊದಲು ಹುಟ್ಟಿದ್ದು ಟರ್ಕಿ ದೇಶದಲ್ಲಿ. ಆ ದೇಶದಲ್ಲಿ ಜುಲ್‌ಬಿಯಾ ಎಂದು ಕರೆಯಲಾಗುತ್ತಿದ್ದ ಈ ಸಿಹಿ ತಿನಿಸು ಭಾರತಕ್ಕೆ ಮೊದಲು ಬಂದಾಗ ಜಲ ವಲ್ಲಿಕಾ ಎಂದು ಕರೆಯಲಾಗುತ್ತಿತ್ತು. ನಂತರ, ಅದರ ಹೆಸರು ಜಿಲೇಬಿ ಎಂದೇ ಜನಜನಿತವಾಯಿತು.

ಭಾರತದಲ್ಲಿ ಅಕ್ಬರ್ ಚಕ್ರವರ್ತಿಯ ಮಗ ರಾಜಕುಮಾರ ನೂರ್ ಅಲ್ ದೀನ್ ಮೊಹಮದ್ ಸಲೀಂ ಗೆ ಸಿಹಿ ಎಂದರೆ ಪಂಚ ಪ್ರಾಣ. ಸಣ್ಣ ಹುಡುಗನಾಗಿದ್ದ ರಾಜಕುಮಾರನ ಮನ ಒಲಿಸಲು ಅಡುಗೆ ಭಟ್ಟರು ಸದಾ ಹಾತೊರೆಯುತ್ತಿದ್ದರು.

ರಾಜಕುಮಾರ ಒಮ್ಮೆ ನೇರವಾಗಿ ಅಡುಗೆ ಮನೆಗೆ ಬರುತ್ತಾನೆ. ಏನಾದರೂ ಸಿಹಿ ತಿನಿಸು ಇದ್ದರೆ ಕೊಡು ಎಂದು ಅಡುಗೆ ಭಟ್ಟನನ್ನು ಕೇಳುತ್ತಾನೆ. ಚಕ್ರವರ್ತಿಯ ಮಗನನ್ನು ಸಂತಸಪಡಿಸದೇ ಕಳುಹಿಸಲಾದೀತೇ ? ಕೂಡಲೇ ಆ ಅಡುಗೆಭಟ್ಟ ಜಿಲೇಬಿಯನ್ನು ತಯಾರಿಸಿ ಕೊಡಲು ನಿರ್ಧರಿಸುತ್ತಾನೆ.

ಆದರೆ, ಉಗ್ರಾಣದಲ್ಲಿ ಕಡಲೆ ಹಿಟ್ಟು ಮತ್ತು ಮೈದಾ ಹಿಟ್ಟು ಇರುವುದಿಲ್ಲ. ಅದನ್ನು ಕಂಡ ಅಡುಗೆಭಟ್ಟ ಒಂದು ಕ್ಷಣ ವಿಚಲಿತನಾಗುತ್ತಾನೆ. ಅಲ್ಲೇ ಲಭ್ಯವಿರುವ ಅಕ್ಕಿ ಹಿಟ್ಟು ಮತ್ತು ಉದ್ದಿನ ಬೇಳೆಯ ಹಿಟ್ಟು ಬಳಸಿ ಸುರುಳಿ ಸುತ್ತಿ ಸಕ್ಕರೆ ಪಾಕದಲ್ಲಿ ಮುಳುಗಿಸಿ ರಾಜಕುಮಾರನನಿಗೆ ಕೊಡುತ್ತಾನೆ.

ಆ ಖಾದ್ಯವನ್ನು ಸೇವಿಸಿದ ರಾಜಕುಮಾರ ಅದರ ಸ್ವಾದಕ್ಕೆ ಮನಸೋಲುತ್ತಾನೆ. ಆ ಖಾದ್ಯವೇ ಜಹಂಗೀರ್ ಅಥವಾ ಜಾಂಗೀರ್ ! ಈ ಖಾದ್ಯವನ್ನು ಜಿಲೇಬಿಯ ಸೋದರ ಎಂದು ಬಣ್ಣಿಸಬಹುದು !

ಜಿಲೇಬಿ ಮತ್ತು ಜಾಂಗೀರನ ಮನೆತನದ ಮಿಶ್ರ ತಳಿ ಖಾದ್ಯ ವಿಮೂರ್ತಿ! ಗಾತ್ರದಲ್ಲಿ ಆಂಗ್ಲ ಭಾಷಾ ವರ್ಣಮಾಲೆಯ ಇಪ್ಪತ್ತೆರಡನೇ ಅಕ್ಷರ ವಿ ಆಕಾರದಲ್ಲಿ ಕಾಣುವ ಈ ಖಾದ್ಯ ಕರ್ನಾಟಕ ಮತ್ತು ತಮಿಳು ನಾಡಿನ ಕೆಲವೆಡೆಗಳಲ್ಲಿ ಮಾತ್ರ ಲಭಿಸುತ್ತವೆ.

ಹಲ್ವ ಎಂದು ಕರೆಯಲ್ಪಡುವ ಬಹುತೇಕ ಸಿಹಿ ಖಾದ್ಯಗಳು ಅರೇಬಿಯಾದ ಮೂಲದ್ದಾಗಿದೆ. ಕ್ಯಾರೆಟ್ ಅಥವಾ ಗಾಜರ್ ಹಲ್ವ ಹಾಗೂ ಪಪಾಯ ಅಥವಾ ಪರಂಗಿ ಹಲ್ವ ಮಾತ್ರವಲ್ಲದೆ, ಬೂದು ಕುಂಬಕಾಯಿ ತುರಿದು ಅದರ ಜೊತೆಗೆ ಸಕ್ಕರೆ, ತುಪ್ಪ, ದ್ರಾಕ್ಷಿ, ಗೋಡಂಬಿ ಮತ್ತು ಏಲಕ್ಕಿಯ ಮಿಶ್ರಣವನ್ನು ಪಾತ್ರೆಯಲ್ಲಿರಿಸಿ, ಪಾತ್ರೆಯ ಮೇಲೆ ಮತ್ತು ಪಾತ್ರೆಯ ಕೆಳಗೆ ಕೆಂಡವನ್ನು ಇಟ್ಟು, ಕುದಿಸುವ ದಂರೋಟ್ ಕೂಡಾ ಮೊಘಲರ ವಿಶೇಷ ಸಿಹಿ ತಿನಿಸಾಗಿದೆ.

**ಸಿಹಿ ಪ್ರಪಂಚಕ್ಕೆ ಕರ್ನಾಟಕದ ಕೊಡುಗೆ !**

ಶಾಲ್ಯಾನ್ನ ಕರ್ನಾಟಕದ ಅಪ್ಪಟ ಸಿಹಿ ತಿನಿಸು. ಸಜ್ಜಿಗೆ, ಕೇಸರಿ ಬಾತ್, ಸಿರಾ ಹಾಗೂ ಸೂಜಿ ಹಲ್ವ ಕೂಡಾ ಕರ್ನಾಟಕದ್ದೇ. ಹಾಲಿನೊಡನೆ ಸೇವಿಸುವ ಚಿರೋಟಿ, ಪೇಣಿ ಮತ್ತು ಮಂಡಿಗೆಗಳು ಕರ್ನಾಟಕದ ಖಾದ್ಯ ವಿಶೇಷಗಳಾಗಿವೆ. ಸಕ್ಕರೆಯಲ್ಲಿ ಹಾಗೂ ಬೆಲ್ಲದಲ್ಲಿ ತಯಾರಿಸಿದ ಕೊಬ್ಬರಿ ಮಿಠಾಯಿ ಕೂಡಾ ಜನಿಸಿದ್ದು ನಮ್ಮ ಕರ್ನಾಟಕದಲ್ಲಿ. ಆದರೆ, ಕಡಲೇ ಕಾಯಿ ಬೀಜ ಬಳಸಿ ತಯಾರಿಸಿದ ಚಿಕ್ಕಿ ಮೊದಲು ಜನಿಸಿದ್ದು ಮುಂಬೈನಲ್ಲಿ. ಇದೀಗ ತಮಿಳು ನಾಡು ವ್ಯಾಪಿಸಿರುವ ಈ ಖಾದ್ಯವನ್ನು ಕರಾವಳಿ ಕರ್ನಾಟಕದಲ್ಲಿ ಕಡಲೇಕಾಯಿ ಬೀಜದ ಬದಲು ಗೋಡಂಬಿ ಮತ್ತು ಬಾದಾಮಿಯ ಬಳಸಿ ತಯಾರಿಸುತ್ತಿದ್ದಾರೆ ಎಂಬುದು ಗಮನಾರ್ಹ.

ಒಬ್ಬಟ್ಟು ಎಂದೇ ಕರೆಯಲ್ಪಡುವ ಕರ್ನಾಟಕದ ಹೋಳಿಗೆ ಅಥವಾ ತಮಿಳುನಾಡಿನ ಪೋಳಿ ಸ್ವಲ್ಪ ಬದಲಾವಣೆಗೊಂಡು ಆಂಧ್ರ ಪ್ರದೇಶ ಮತ್ತು ತೆಲಂಗಾಣದಲ್ಲಿ ಪೋತರೇಕಲು ಎಂಬ ಹೊಸ ರೂಪ ತಾಳಿದೆ ಎಂಬುದು ಸ್ವಾರಸ್ಯಕರ ಸಂಗತಿಯಾಗಿದೆ.

**ಮೈಸೂರು ಪಾಕ್ ಹುಟ್ಟಿದ್ದು ಹೇಗೆ ?**

ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಅಂಬಾ ವಿಲಾಸ ಅರಮನೆಯಲ್ಲಿನ ಪಾಕಶಾಲೆಯಲ್ಲಿ ದೇವಾಲಯದ ಪ್ರಸಾದದಿಂದ ಹಿಡಿದು ಐರೋಪ್ಯ ಶೈಲಿಯ ತಿನಿಸುಗಳು ತಯಾರಾಗುತ್ತಿದ್ದವು.

ಒಮ್ಮೆ ಮಹಾರಾಜರು ಬದಲಾವಣೆ ಬಯಸಿ, ತನ್ನ ಅತಿಥಿಗಳಿಗೆ ವಿಭಿನ್ನ ಶೈಲಿಯ ಸಿಹಿ ತಿನಿಸನ್ನು ತಯಾರಿಸಲು ತಮ್ಮ ಅಡುಗೆ ಭಟ್ಟ ಕಾಕಾಸುರ ಮಾದಪ್ಪ ಅವರಿಗೆ ಸೂಚಿಸುತ್ತಾರೆ. ಒಂದೆಡೆ ಮಹಾರಾಜರ ಆಜ್ಞೆ ಪಾಲಿಸಬೇಕು. ಮತ್ತೊಂದೆಡೆ ಹೊಸ ರುಚಿಯ ಬಗ್ಗೆ ಏನೂ ತೋಚದ ಸ್ಥಿತಿಯಲ್ಲಿ ಪಾಕಶಾಲೆ ಪ್ರವೇಶಿಸುವ ಮಾದಪ್ಪ ಅವರು ಕಡಲೇ ಹಿಟ್ಟು, ಸಕ್ಕರೆ ಮತ್ತು ತುಪ್ಪ ಸುರಿದು ಬಾಂಡಲಿಯಲ್ಲಿ ಹುರಿಯಲಾರಂಭಿಸುತ್ತಾರೆ. ಅದು ಪಾಕ ಆದಾಗ ತಟ್ಟೆಗೆ ಸುರಿದು ಸುಮ್ಮನಾಗುತ್ತಾರೆ. ಕೆಲ ಹೊತ್ತಿನ ನಂತರ, ಬಿಸಿ ಆರಿದಾಗ ಹದವಾದ ಪಾಕವನ್ನು ತಟ್ಟೆಗೆ ಸುರಿದು ಚೌಕಾಕಾದಲ್ಲಿ ಕತ್ತರಿಸುತ್ತಾರೆ.

ಆ ವೇಳೆಗಾಗಲೇ ಮಹಾರಾಜರ ಭೋಜನದ ಸಮಯವಾಗುತ್ತದೆ. ತಾವು ತಯಾರಿಸಿದ ಸಿಹಿಯನ್ನು ಮಾದಪ್ಪ ಅವರು ಭಯದಿಂದಲೇ ಮಹಾರಾಜರ ಊಟದ ತಟ್ಟೆಗೆ ಬಡಿಸುತ್ತಾರೆ.

ಆ ಸಿಹಿಯನ್ನು ಬಾಯಲ್ಲಿ ಇಟ್ಟು ಕೊಂಡೊಡನೆಯೇ ಮಹಾರಾಜರ ಮನಸ್ಸು ಮುದಗೊಳ್ಳುತ್ತದೆ. ಈ ಸಿಹಿ ತಿನಿಸಿನ ಹೆಸರೇನು ? ಎಂದು ಕೇಳುತ್ತಾರೆ. ಅರಮನೆಯ ಪಾಕಶಾಲೆಯಲ್ಲಿ ತನಗೆ ತಿಳಿಯದೇ ಹೊಸ ಖಾದ್ಯವನ್ನು ಅನ್ವೇಷಣೆ ಮಾಡಿದ್ದ ಮಾದಪ್ಪ ಅವರು ದಿಕ್ಕು ತೋಚದೆ ಪಾಕ ಎಂದು ಹೇಳುತ್ತಾರೆ. ಮಹಾರಾಜರು " ಹ್ಞಾಂ ! " ಎಂದು ಮತ್ತೊಮ್ಮೆ ಕೇಳಿದಾಗ ಮಾದಪ್ಪ ಅವರು " ಮೈಸೂರು ಪಾಕ್ " ಎಂದು ಹೇಳುತ್ತಾರೆ.

ತನಗೆ ಇಷ್ಟವಾದ ಈ ಸಿಹಿ ಖಾದ್ಯ ತನ್ನ ಪ್ರಜೆಗಳಿಗೂ ದೊರೆಯಬೇಕು ಎಂಬ ಸದಾಶಯದೊಂದಿಗೆ ಅರಮನೆಯ ಆವರಣದ ಹೊರಗೆ ಸಿಹಿ ಮಳಿಗೆಯೊಂದನ್ನು ತೆರೆಯುವಂತೆ ಮಹಾರಾಜರು ಮಾದಪ್ಪ ಅವರಿಗೆ ತಾಕೀತು ಮಾಡುತ್ತಾರೆ. ಮಹಾರಾಜರ ಆದೇಶ ಮೈಸೂರಿನ ಇಂದಿನ ದೇವರಾಜ ಮಾರುಕಟ್ಟೆಯ ಮೂಲೆಯಲ್ಲಿರುವ ಗುರು ಸ್ವೀಟ್ಸ್ ಪ್ರಾರಂಭಕ್ಕೆ ಕಾರಣವಾಗುತ್ತದೆ.

**ಕುಂದಾ ಜನ್ಮ ತಾಳಿದ್ದು ಹೀಗೆ !**

ಬೆಳಗಾವಿಯಲ್ಲಿ ಗಜಾನನ ಮಿಠಾಯಿ ವಾಲಾ ಎಂಬ ಸಿಹಿ ಅಂಗಡಿ. ಜಕ್ಕೂ ಎಂಬ ಅಲ್ಲಿನ ಕೆಲಸಗಾರನೊಬ್ಬ ಸೌದೆ



Downloaded From: www.kpscvaani.com

**ಜಿ ಐ ಟ್ಯಾಗ್ ಎಂದರೇನು ?**

ವ್ಯಾವಹರಿಕ ಸಂಬಂಧೀ ಭೌದ್ಧಿಕ ಹಕ್ಕು ರಕ್ಷಣೆಗೆ ಪೂರಕವಾಗಿರುವ ಜನರಲ್ ಅಗ್ರಿಮೆಂಟ್ ಆನ್ ಟ್ರೇಡ್ ಅಂಡ್ ಟ್ಯಾರಿಫ್ ವ್ಯಾಪ್ತಿಯಲ್ಲಿ ಒಂದು ಪ್ರದೇಶ, ಒಂದು ನಗರ ಅಥವಾ ಒಂದು ದೇಶದಲ್ಲಿ ಶತಮಾನಗಳ ಇತಿಹಾಸವಿರುವ ವಿಶಿಷ್ಠ ಉತ್ಪನ್ನಗಳಿಗೆ ನೀಡುವ ಚಿಹ್ನೆಯೇ ಭೌಗೋಳಿಕ ಸೂಚಿ ಸಂಕೇತ ( ಜಿಯೋಗ್ರಾಫಿಕಲ್ ಇಂಡಿಕೇಷನ್ ಟ್ಯಾಗ್ ).

ಉತ್ಪನ್ನದ ಅಧಿಕೃತತೆಯನ್ನು ಖಾತರಿ ಪಡಿಸುವ ಜಿ ಐ ಟ್ಯಾಗ್ ಜಿಯೋಗ್ರಾಫಿಕಲ್ ಇಂಡಿಕೇಷನ್ಸ್ ಆಫ್ ಗೂಡ್ಸ್ (ರಿಜಿಸ್ಟ್ರೇಷನ್ ಅಂಡ್ ಪ್ರೊಟೆಕ್ಷನ್) ಆಕ್ಟ್ 1999 ರ ನಿಯಮಾವಳಿಗಳ ಚೌಕಟ್ಟಿನಲ್ಲಿ ಉತ್ಪನ್ನಗಳಿಗೆ ಕಾನೂನು ರಕ್ಷಣೆ ಒದಗಿಸುತ್ತದೆಯಲ್ಲದೆ, ಒಂದು ಭೌಗೋಳಿಕ ಪ್ರದೇಶದ ಉತ್ಪನ್ನಕ್ಕೆ ಆರ್ಥಿಕ ಸಮೃದ್ಧತೆ ದೊರಕಿಸಿಕೊಡಲು ಉತ್ತೇಜಿಸುತ್ತದೆ. ಜಿ ಐ ಟ್ಯಾಗ್ ಗೆ ಇತರೆ ದೇಶಗಳೂ ಮನ್ನಣೆ ನೀಡುವ ಹಿನ್ನೆಲೆಯಲ್ಲಿ ರಫ್ತಿಗೂ ಕೂಡಾ ಇದು ಸಹಕಾರಿಯಾಗುತ್ತದೆ.

ಭಾರತದಲ್ಲಿ ಅತೀ ಹೆಚ್ಚು ಜಿ ಐ ಟ್ಯಾಗ್ ಪಡೆದ ಕೀರ್ತಿ ನಮ್ಮ ಕರ್ನಾಟಕದ್ದಾಗಿದೆ.

ಹೌದು ! ಭಾರತದ 346 ವಸ್ತು ಮತ್ತು ಉತ್ಪನ್ನಗಳಿಗೆ ಜಿ ಐ ಟ್ಯಾಗ್‌ನ ಮಾನ್ಯತೆ ದೊರೆತಿದೆ. ಅದರಲ್ಲಿ ಸಿಂಹಪಾಲು ಅಂದರೆ 46 ವಸ್ತು ಮತ್ತು ಉತ್ಪನ್ನಗಳು ಕರ್ನಾಟಕದ್ದಾಗಿದೆ.

**ಜಿ ಐ ಟ್ಯಾಗ್ ಪಡೆದ ಕರ್ನಾಟಕದ ವಸ್ತು ಮತ್ತು ಉತ್ಪನ್ನಗಳು :**

**ಕರಕುಶಲ**

- ಮೈಸೂರು ರೇಷ್ಮೆ
- ಬಿದಿರಿನ ಕಲಾಕೃತಿಗಳು
- ಚನ್ನಪಟ್ಟಣದ ಬೊಂಬೆಗಳು
- ಮೈಸೂರಿನ ಬೀಟೆಮರದ ಕೆತ್ತನೆಗಳು
- ಕಸೂತಿ (ಎಂಬ್ರಾಯಡರಿ)
- ಮೈಸೂರು ಪಾರಂಪರಿಕ ಚಿತ್ರಕಲೆ
- ಮೈಸೂರು ಗಾಂಜೀಫಾ ಕ್ರೀಡಾ ಪತ್ರಗಳು
- ನಲವಗುಂದದ ಜಮಖಾನೆ (ರತ್ನಗಂಬಳಿ)
- ಕರ್ನಾಟಕದ ಹಿತ್ತಾಳೆ ಪಾತ್ರೆಗಳು
- ಇಳಕಲ್ ಸೀರೆಗಳು
- ಮೊಳಕಾಲ್ಮೋರು ಸೀರೆಗಳು
- ಸಂಡೂರು ಲಂಬಾಣಿ ಕಸೂತಿ
- ಕೊಲ್ಹಾಪುರಿ ಶೈಲಿಯ ಚಪ್ಪಲಿ
- ಗುಳೇದಗುಡ್ಡ ಖಾನಾ
- ಕಿನ್ನಾಳದ ಗೊಂಬೆಗಳು
- ಉಡುಪಿ ಸೀರೆಗಳು
- ಕರ್ನಾಟಕ ಕಂಚಿನ ಕಲಾಕೃತಿಗಳು (ಲಾಂಛನ)
- ಮೈಸೂರು ಗಾಂಜೀಫಾ ಕ್ರೀಡಾ ಪತ್ರಗಳು (ಲಾಂಛನ)
- ನವಲಗುಂದದ ನೆಲಹಾಸು (ಲಾಂಛನ)
- ಮೈಸೂರು ರೇಷ್ಮೆ (ಲಾಂಛನ)

**ಉತ್ಪನ್ನ**

- ಮೈಸೂರು ಅಗರಬತ್ತಿ
- ಮೈಸೂರು ಶ್ರೀಗಂಧದ ಎಣ್ಣೆ
- ಮೈಸೂರು ಶ್ರೀಗಂಧದ ಸಾಬೂನ

**ಕೃಷಿ**

- ಕೊಡಗು ಕಿತ್ತಳೆ
- ಮೈಸೂರು ವೀಳ್ಯದೆಲೆ
- ನಂಜನಗೂಡು ರಸಬಾಳೆ
- ಮಲೆನಾಡು ಕರಿಮೆಣಸು
- ಮೈಸೂರು ಮಲ್ಲಿಗೆ
- ಉಡುಪಿ ಮಲ್ಲಿಗೆ
- ಹಡಗಲಿ ಮಲ್ಲಿಗೆ
- ಕೊಡಗು ಹಸಿರು ಏಲಕ್ಕಿ
- ಮಲೆನಾಡು ಅರೇಬಿಕಾ ಕಾಫಿ
- ಮಲೆನಾಡು ರೋಬಸ್ಟಾ ಕಾಫಿ
- ಮೆಣಸಿನ ಕಾಳು
- ದೇವನಹಳ್ಳಿ ಚಕ್ಕೋತ
- ಅಪ್ಪೇ ಮಿಡಿ ಮಾವಿನಕಾಯಿ
- ಕಮಲಾಪುರ ಕೆಂಪು ಬಾಳೆ
- ಉಡುಪಿ ಮಟ್ಟು ಗುಳ್ಳಾ ಬದನೇಕಾಯಿ
- ಬೆಂಗಳೂರು ನೀಲಿ ದ್ರಾಕ್ಷಿ
- ಬೆಂಗಳೂರು ಗುಲಾಬಿ ಈರುಳ್ಳಿ
- ಕೊಡಗು ಅರೇಬಿಕಾ ಕಾಫಿ
- ಚಿಕ್ಕಮಗಳೂರು ಅರೇಬಿಕಾ ಕಾಫಿ
- ಬಾಬಾಬುಡನ್‌ಗಿರಿ ಅರೇಬಿಕಾ ಕಾಫಿ
- ಕಲಬುರಗಿಯ ತೊಗರಿಬೇಳೆ

**ತಿನಿಸು**

- ಧಾರವಾಡ ಪೇಡಾ

ಒಲೆಯ ಮೇಲೆ ಬೃಹತ್ ಪಾತ್ರೆಯಲ್ಲಿ ಹಾಲು ಕಾಯಿಸಲು ಇಟ್ಟು ಹೊರ ಹೋಗುತ್ತಾನೆ. ಆತನಿಗೆ ದಾರಿಯಲ್ಲಿ ಗೆಳೆಯನೊಬ್ಬ ಎದುರಾಗುತ್ತಾನೆ. ಮಾತಿನ ಭರದಲ್ಲಿ ಒಲೆಯ ಮೇಲೆ ಹಾಲು ಇಟ್ಟದ್ದನ್ನು ಆತ ಮರೆತೇ ಬಿಡುತ್ತಾನೆ. ಕೆಲವು ಗಂಟೆಗಳ ನಂತರ ಹಿಂದಿರುಗಿ ಬಂದಾಗ ಹಾಲು ತನ್ನ ದ್ರವ ರೂಪವನ್ನು ಕಳೆದು ಕೊಂಡು, ಘನ ರೂಪ ತಾಳಿರುವುದರ ಜೊತೆಗೆ ಬಿಳಿಯಿಂದ ತನ್ನ ಬಣ್ಣವನ್ನೂ ಕಂದು ಬಣ್ಣಕ್ಕೆ ಪರಿವರ್ತಿಸಿಕೊಂಡಿರುತ್ತದೆ. ಯಜಮಾನನ ಬೈಗುಳಕ್ಕೆ ಬೆದರಿದ ಆತ ಅದಕ್ಕೇ ಒಂದಷ್ಟು ಸಕ್ಕರೆ ಸುರಿದು ಮಾರಾಟ ಮಾಡಲು ಮುಂದಾಗುತ್ತಾನೆ.

ಸ್ವಲ್ಪ ಹೊತ್ತಿನ ನಂತರ ತನ್ನತ್ತ ಬಂದ ಓರ್ವ ಗ್ರಾಹಕ ಆ ಸಿಹಿಯ ಹೆಸರು ಕೇಳಿದಾಗ ತನ್ನ ಮಗಳ ಹೆಸರನ್ನೇ ಹೇಳುತ್ತಾನೆ. ಆತನ ಮಗಳ ಹೆಸರೇ " ಕುಂದಾ " ! ಇದೀಗ ಈ ಹೆಸರು ಮಾತ್ರವಲ್ಲ, ಈ ತಿನಿಸೂ ಕೂಡಾ ಸಿಹಿ ಲೋಕದಲ್ಲಿ ಅತ್ಯಂತ ಜನಪ್ರಿಯ !

**ಧಾರವಾಡ ಪೇಡಾ !**

ಕೆಲವು ವ್ಯಕ್ತಿಗಳು, ವಸ್ತುಗಳು ಹಾಗೂ ವಿಷಯಗಳೇ ಹಾಗೆ ! ತಮ್ಮಿಂದ ತಮ್ಮ ಊರಿಗೆ ಹೆಸರು ತಂದು ಕೊಡುತ್ತವೆ. ಅದರಲ್ಲಿ ಧಾರವಾಡ ಪೇಡಾ ಕೂಡಾ ಒಂದು.

ಭಾರತದಲ್ಲಿ ಉತ್ತರ ಪ್ರದೇಶದ ಮಥುರಾದಲ್ಲಿ ಮೊದಲು ಪೇಡೆಯ ಚಹರೆ ಕಂಡು ಬರುತ್ತದೆ. ಬೆಂಗಳೂರಿನಲ್ಲಿ ಹಾಲು ಖೋವಾ, ನೆರೆಯ ಆಂಧ್ರ ಪ್ರದೇಶದ ಚಿತ್ತೂರಿನಲ್ಲಿ ಪಾಲಖೋವಾ ಎಂಬ ಸಿಹಿ ಖಾದ್ಯಗಳು ಕೂಡಾ ಶತಮಾನಗಳ ಇತಿಹಾಸವನ್ನು ಹೊಂದಿದೆ.

ಪ್ಲೇಗ್ ಎಂಬ ಭಯಾನಕ ರೋಗ ವ್ಯಾಪಿಸುತ್ತಿದ್ದ ಕಾಲವದು. ಸುಮಾರು







Downloaded From: www.kpscvaani.com






175 ವರ್ಷಗಳಿಗೂ ಮುನ್ನ ಉತ್ತರ ಪ್ರದೇಶದ ಉನ್ನಾವೋ ಎಂಬಲ್ಲಿಂದ ರಾಮ್ ರತನ್ ಸಿಂಗ್ ಎಂಬ ವ್ಯಕ್ತಿ ತನ್ನ ಕುಟುಂಬದೊಡನೆ ಧಾರವಾಡಕ್ಕೆ ವಲಸೆ ಬರುತ್ತಾರೆ. ಸಿಹಿ ತಿನಿಸುಗಳ ವ್ಯಾಪಾರಿಯಾಗಿದ್ದ ಅವರು ಇಲ್ಲಿಯೂ ಅದೇ ವ್ಯಾಪಾರವನ್ನು ಮುಂದುವರೆಸುತ್ತಾರೆ. ಸ್ಥಳೀಯವಾಗಿ ಲಭ್ಯವಿದ್ದ ಧಾರವಾಡದ ಎಮ್ಮೆಯ ವಿಶಿಷ್ಠ ಹಾಲು ಮತ್ತು ಗುಣಮಟ್ಟದ ಸಕ್ಕರೆಯನ್ನು ಮಾತ್ರ ಬಳಸಿ ಹೊಸ ಖಾದ್ಯವನ್ನು ತಯಾರಿಸುತ್ತಾರೆ. ಅದುವೇ ಧಾರವಾಡ ಪೇಡಾ !

ಇಂದಿಗೂ ಯಾಂತ್ರಿಕ ತಂತ್ರಜ್ಞಾನ ಬಳಸದೆಯೇ ಕೈಯ್ಯಿಂದಲೇ ಪೇಡಾ ತಯಾರಿಸುವುದೇ ಧಾರವಾಡ ಪೇಡಾದ ವಿಶೇಷತೆ ಮತ್ತು ವಿಭಿನ್ನತೆ. ಸೌದೆಯ ಒಲೆಯಲ್ಲಿ ಹಾಲು ಕಾಯಿಸಿ ಘನರೂಪಕ್ಕೆ ತಂದು, ಆ ಘನರೂಪಕ್ಕೆ ಸಕ್ಕರೆಯ ಬೆರೆಸಿ ಐದಾರು ಗಂಟೆಗಳ ಕಾಲ ಮತ್ತೆ ಒಲೆಯ ಮೇಲಿಸಿ, ಕಂದು ಬಣ್ಣದ ಹಿಟ್ಟಿನಂತೆ ಕಾಣುವ ಮುದ್ದೆಯನ್ನು ಹೆಬ್ಬೆಟ್ಟಿನ ಆಕಾರದಲ್ಲಿ ಸುತ್ತಿ, ಅದನ್ನು ಮತ್ತೆ ಬೂರಾ ಸಕ್ಕರೆಯ ಮೇಲೆ ಹೊರಳಿಸಿದಾಗ ಹೊರ ಹೊಮ್ಮುವುದೇ ಧಾರವಾಡ ಪೇಡಾ. ಇದು ಸ್ವಾದಿಷ್ಠತೆಗೆ ಮತ್ತೊಂದು ಹೆಸರು.

**ತಯಾರಾದ ಹದಿನೈದು ದಿನಗಳಾದರೂ ಕಾಗದದ ಪೆಟ್ಟಿಗೆಯಲ್ಲಿ ಇಟ್ಟಾಗ ತನ್ನ ರುಚಿ ಮತ್ತು ಸ್ವಾದಿಷ್ಠತೆಯನ್ನು ಕಳೆದು ಕೊಳ್ಳದ ಧಾರವಾಡ ಪೇಡಾ ರೆಫ್ರಿಜಿರೇಟರ್ ಸೇರಿದರೆ ಒಂದೇ ದಿನದಲ್ಲಿ ಕೆಡುತ್ತದೆ.**

ಧಾರವಾಡದ ಲೈನ್ ಬಜಾರ್‌ನಲ್ಲಿ ಠಾಕೂರ್ ವಿಲ್ಲಾ ಎಂಬ ಹೆಸರಿನ ಮನೆಯಲ್ಲಿ ತಯಾರಾಗುತ್ತಿದ್ದ ಧಾರವಾಡ ಪೇಡಾ ನಂತರ ಬಾಬುಸಿಂಗ್ ಠಾಕೂರ್ ಎಂಬ ಹೆಸರಿನಲ್ಲಿ ಸಿಹಿ ತಿನಿಸುಗಳ ಮಳಿಗೆಗಳು ಪ್ರಮುಖ ಪ್ರದೇಶಗಳಲ್ಲಿ ಮೈದೇಳಿವೆ. ಆರು ತಲೆಮಾರುಗಳಿಂದಲೂ ಪೇಡಾ ತಯಾರಿಕೆಯಲ್ಲಿ ಮುಂಚೂಣಿಯಲ್ಲಿರುವುದು ಬಾಬುಸಿಂಗ್ ಠಾಕೂರ್ ಪೇಡಾ ಮಳಿಗೆಯ ಹೆಗ್ಗಳಿಕೆ.

ಅಂತೆಯೇ, 1933 ರಲ್ಲಿ ಲೈನ್ ಬಜಾರ್‌ನಲ್ಲಿ ಪ್ರಾರಂಭವಾದ ಮಿಶ್ರಾ ಪೇಡಾದ ಮಳಿಗೆ ಕೂಡಾ ಹಲವಾರು ಮಳಿಗೆ ಮತ್ತು ಮುಂಗಟ್ಟೆಗಳನ್ನು ತೆರೆದು ಆನ್‌ಲೈನ್ ವಹಿವಾಟು ನಡೆಸುತ್ತಿದೆ.

ಮಗು ಹುಟ್ಟಿದರೂ ಸರಿಯೇ, ಮದುವೆಯಾದರೂ ಸರಿಯೇ, ಶಾಲಾ-ಕಾಲೇಜು ಅಥವಾ ಚುನಾವಣಾ ಫಲಿತಾಂಶಗಳು ಹೊರ ಹೊಮ್ಮಿದರೂ ಸರಿಯೇ, ಮುಂಬಡ್ತಿ ಪದೋನ್ನತಿ ಅಥವಾ ವರ್ಗಾವಣೆ ಏನೇ ಇರಲಿ ಸಂಭ್ರಮ ಮತ್ತು ಸಡಗರದ ಎಲ್ಲಾ ಸಮಾರಂಭಗಳಿಗೆ ಉತ್ತರ ಕರ್ನಾಟಕದ ಭಾಗಗಳಲ್ಲಿ ಧಾರವಾಡ ಪೇಡಾಕ್ಕೆ ಆಧ್ಯತೆಯ ಆಮಂತ್ರಣ ಇದ್ದೇ ಇರುತ್ತದೆ. ಇತ್ತೀಚಿನ ದಿನಗಳಲ್ಲಿ ಕೇವಲ ಕರ್ನಾಟಕದಲ್ಲಿ ಮಾತ್ರವಲ್ಲದೆ, ದೇಶ-ವಿದೇಶಗಳಲ್ಲೂ ಧಾರವಾಡ ಪೇಡಾ ಒಮ್ಮೆ ತಿಂದು ನೋಡಾ ! ಎಂಬ ಅಕ್ಕರೆಯ ಕರೆ ಎಲ್ಲೆಡೆ ಮೊಳಗುತ್ತಿದೆ.

ತಯಾರಾದ ಹದಿನೈದು ದಿನಗಳಾದರೂ ಕಾಗದದ ಪೆಟ್ಟಿಗೆಯಲ್ಲಿ ಇಟ್ಟಾಗ ತನ್ನ ರುಚಿ ಮತ್ತು ಸ್ವಾದಿಷ್ಠತೆಯನ್ನು ಕಳೆದು ಕೊಳ್ಳದ ಧಾರವಾಡ ಪೇಡಾ ತಂಗಳು ಡಬ್ಬಿ (ರೆಫ್ರಿಜಿರೇಟರ್) ಸೇರಿದರೆ ಒಂದೇ ದಿನದಲ್ಲಿ ಕೆಡುತ್ತದೆ.

ಪಾರಂಪರಿಕ ಈ ಸಿಹಿ ಖಾದ್ಯ ಇದೀಗ ಸಾಗರೋತ್ತರ ದೇಶಗಳಲ್ಲಿಯೂ ಜನಪ್ರಿಯತೆ ಗಳಿಸುತ್ತಿರುವುದನ್ನು ಗಮನಿಸಿ, ಭೌಗೋಳಿಕ ಸೂಚಿ ಸಂಕೇತ (ಜಿಯೋಗ್ರಾಫಿಕಲ್ ಇಂಡಿಕೇಷನ್ ಟ್ಯಾಗ್) ದಲ್ಲಿ ಧಾರವಾಡ ಪೇಡಾಕ್ಕೂ ಒಂದು ಸ್ಥಾನ ಕಲ್ಪಿಸಲಾಗಿದೆ.



Downloaded From: www.kpscvaani.com

# ಗಾಂಧಿ ಸೇವಾ ಪ್ರಶಸ್ತಿ ಪುರಸ್ಕೃತರು





**ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿಗೆ ಭಾಜನರಾಗಿರುವ ಗಾಂಧೀವಾದಿ ಮೀರಾತಾಯಿ ಕೊಪ್ಪಿಕರ ಅವರು ಮತ್ತು ಶ್ರೀ ಸಿದ್ಧಗಂಗಾ ಮಠದ ಕುರಿತು ಒಂದು ಕಿರು ಪರಿಚಯವನ್ನು ಈ ಲೇಖನವು ಒಳಗೊಂಡಿದೆ.**

ಮಂಜುನಾಥ ಸುಳ್ಳೊಳ್ಳಿ
ಆರ್. ರೂಪಕಲಾ

ಮಹಾತ್ಮಾ ಗಾಂಧೀಜಿ ಅವರ ತತ್ವ ಆದರ್ಶಗಳಲ್ಲಿ ನಡೆಯುತ್ತಾ ಸಮಾಜದ ಸೇವೆಯಲ್ಲಿ ನಿರತರಾದವರನ್ನು ಗುರುತಿಸಿ ಕರ್ನಾಟಕ ಸರ್ಕಾರವು ಗಾಂಧಿ ಸೇವಾ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತದೆ. ಕೋವಿಡ್ 19 ನಿಂದಾಗಿ ಕಳೆದ ವರ್ಷ ಪ್ರಶಸ್ತಿಯನ್ನು ಪ್ರದಾನ ಮಾಡಲಾಗಿರಲಿಲ್ಲ. ಹಾಗಾಗಿ ಇದೇ ಅಕ್ಟೋಬರ್ 2 ರಂದು 2020 ಮತ್ತು 2021 ನೇ ಸಾಲಿನ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ವಾತ್ಸಲ್ಯ ಧಾಮದಲ್ಲಿ ಗಾಂಧೀಜಿ ಅವರ ಆದರ್ಶವನ್ನು ಪಾಲಿಸುತ್ತಾ ಸ್ವಾವಲಂಬಿ ಜೀವನ ನಡೆಸುತ್ತಿರುವ 95ರ ವಯೋಮಾನದ ಮೀರಾತಾಯಿ ಕೊಪ್ಪಿಕರ ಅವರು 2020 ನೇ ಸಾಲಿಗೆ ಮತ್ತು ಬಹು ವರ್ಷಗಳಿಂದ ನಿರಂತರವಾಗಿ ಗ್ರಾಮೀಣ ಮಕ್ಕಳಿಗೆ ಅಕ್ಷರ ಮತ್ತು ಅನ್ನ ದಾಸೋಹದಲ್ಲಿ ನಿರತವಾಗಿರುವ ತುಮಕೂರಿನ ಶ್ರೀ ಸಿದ್ಧಗಂಗಾ ಮಠವು 2021 ನೇ ಸಾಲಿನ ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಪ್ರತಿ ವರ್ಷ ಗಾಂಧೀಜಿ ಅವರ ತತ್ವ, ಆದರ್ಶಗಳನ್ನು ಪಾಲಿಸುತ್ತಾ, ಸಮಾಜದ ಸೇವೆಯಲ್ಲಿ ನಿರತರಾಗಿರುವ ವ್ಯಕ್ತಿ ಅಥವಾ ಸಂಸ್ಥೆಯನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಇವರ ಸಂಯುಕ್ತ ಆಶ್ರಯದಲ್ಲಿ ಗಾಂಧೀ ಸೇವಾ ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ. ಹಾಗಾಗಿ ವಿಶ್ರಾಂತ ನ್ಯಾಯಮೂರ್ತಿ ಅಶೋಕ ಬಂಗಾರೆಪ್ಪ ಹಿಂಚಿಗೇರಿ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಮಿತಿಯು 2020 ಮತ್ತು 2021 ನೇ ಸಾಲಿನ ಈ ಪ್ರಶಸ್ತಿಗೆ ಅರ್ಹರನ್ನು ಆಯ್ಕೆ ಮಾಡಿತ್ತು.

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ವರ್ಷಾಚರಣೆಯ ಸುಸಂದರ್ಭದಲ್ಲಿ ಅಕ್ಟೋಬರ್ 2 ರ ಗಾಂಧಿ ಜಯಂತಿಯಂದು ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಯಿ ಅವರು ಈ ಪ್ರಶಸ್ತಿಗೆ ಭಾಜನರಾದವರಿಗೆ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದರು. ಶ್ರೀ ಸಿದ್ಧಗಂಗಾ ಮಠದ ಪರವಾಗಿ ಡಾ.ಶಿವಪ್ಪ ಅವರು ಮತ್ತು ಮೀರಾತಾಯಿ ಕೊಪ್ಪಿಕರ್ ಅವರ ಪರವಾಗಿ ಸಚಿವರಾದ ಗೋವಿಂದ ಕಾರಜೋಳ ಅವರು ಪ್ರಶಸ್ತಿಯನ್ನು ಸ್ವೀಕರಿಸಿದರು. ಕಾರ್ಯಕ್ರಮದಲ್ಲಿ ಸಚಿವರಾದ ಹೆಚ್.ಕೆ. ಪಾಟೀಲ, ಹಾಲಪ್ಪ ಆಚಾರ್, ಸಂಸದರಾದ ಶಿವಕುಮಾರ್ ಉದಾಸಿ, ಡಾ.ಎಲ್. ಹನುಮಂತಯ್ಯ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಎನ್. ಮಂಜುನಾಥ ಪ್ರಸಾದ್, ಆಯುಕ್ತರಾದ ಜಿ.ಜಗದೀಶ್, ಕರ್ನಾಟಕ



Downloaded From: www.kpscvaani.com

ಗಾಂಧಿ ಸ್ಮಾರಕ ನಿಧಿಯ ಗೌರವ ಕಾರ್ಯದರ್ಶಿಗಳಾದ ಇಂದಿರಾ ಕೃಷ್ಣಪ್ಪ, ಅಧ್ಯಕ್ಷರಾದ ಡಾ.ವೂಡೇ ಪಿ. ಕೃಷ್ಣ, ಇತರರು ಉಪಸ್ಥಿತರಿದ್ದರು.

**ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿಗೆ ಭಾಜನರಾಗಿರುವ ಮೀರಾತಾಯಿ ಕೊಪ್ಪಿಕರ ಅವರು ಮತ್ತು ತುಮಕೂರಿನ ಶ್ರೀ ಸಿದ್ಧಗಂಗಾ ಮಠದ ಕಿರು ಪರಿಚಯ:**

**ಆಧುನಿಕ ಭಾರತಕ್ಕೆ ಮಾದರಿ ಮೀರಾತಾಯಿ ಕೊಪ್ಪಿಕರ:**

ಮಹಾತ್ಮ ಗಾಂಧಿಯವರ ನಡೆ, ನುಡಿ, ಪ್ರಾಮಾಣಿಕ ನಿಷ್ಠೆ, ಅಹಿಂಸಾವಾದಿ, ಶಾಂತಿ, ನಿಸ್ವಾರ್ಥ ಬದುಕು, ಸ್ವಾವಲಂಬಿ ಜೀವನ ಅವರ ಪ್ರತಿ ತತ್ವಾದರ್ಶಗಳು ಇಂದಿಗೂ ಇಲ್ಲಿ ಜೀವಂತ. ಇಲ್ಲಿ ಕೃಷಿಯೇ ಜೀವನ. ಸಾಂಪ್ರದಾಯಿಕ ಕೃಷಿ ಪದ್ಧತಿ, ಮಿತ ಆಹಾರ ಪದ್ಧತಿ, ಸಾಮೂಹಿಕ ಪ್ರಾರ್ಥನೆ, ಗೂ ಸೇವೆ, ಭೂ ಸೇವೆ ಮಾಡುತ್ತಾ ಬಂದಿರುವ ಆದ್ಯಾತ್ಮಿಗಳ ತಾಣವಿದು.

ನಿರ್ಮಲವಾದ ಪ್ರೀತಿ, ಅಂತಃಕರಣದ ಬುನಾದಿಯ ಮೇಲೆ ನಿಂತಿರುವ ಆಶ್ರಮವಿದು. ಸ್ವತಂತ್ರಕ್ಕಾಗಿ, ಸಮಾಜಕ್ಕಾಗಿ ಶ್ರಮಿಸಿದ ಮಹಾತ್ಮಾ ಗಾಂಧಿಜೀ, ವಿನೋಬಾ ಭಾವೆ ಅವರ ಆದರ್ಶಗಳನ್ನು ಕೊಂಚ ಅಂತರವಿಲ್ಲದಂತೆ ಮಾದರಿಯನ್ನಾಗಿ ತಮ್ಮ ಬದುಕಿನಲ್ಲಿ ಉಸಿರಾಗಿಸಿಕೊಂಡ ಸರಳ ಸಜ್ಜನಿಕೆ ಜೀವಿ ವಾತ್ಸಲ್ಯ ಧಾಮದ ಜೀವನಾಡಿ, ಬಡಜೀವಿಗಳ ಏಳಿಗೆಗಾಗಿ ಸದಾ ಮೀಡಿಯುವ ಹೃದಯವಂತೆ ಮೀರಾತಾಯಿ ಕೊಪ್ಪಿಕರ.

ಹೌದು.. ಈಗ ನಾವು ಹೇಳ ಹೊರಟಿರುವುದು ರನ್ನನಗರಿ, ಸಕ್ಕರೆ ನಾಡು ಎಂದು ಪ್ರಸಿದ್ಧಿ ಪಡೆದಿರುವ ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ವಾತ್ಸಲ್ಯ ಧಾಮದ ಕುರಿತು. ಇದು ಕೇವಲ ಧಾಮವಲ್ಲ ಶಾಂತಿಯ ಬೀಡು, ಅಂತಃಕರಣದ ನಾಡು. ಇಲ್ಲಿ ಬೀಸುವ ಗಾಳಿಯಲ್ಲಿ ವಾತ್ಸಲ್ಯದ ಕಂಪಿದೆ. ಸುತ್ತ ಹಚ್ಚಹಸುರಿನ ನಡುವಿನಲ್ಲಿ ಸರಳ ಬದುಕು, ಆಧ್ಯಾತ್ಮ ಚಿಂತನೆ, ಧ್ಯಾನ, ಯೋಗ ಸತ್ಯಾನ್ವೇಷಣೆಯ ಪವಿತ್ರ ಧಾಮವೇ ಈ ವಾತ್ಸಲ್ಯ ಧಾಮ ಎಂದು ಇಲ್ಲಿಗೆ ಭೇಟಿ ನೀಡುವ ಪ್ರತಿಯೊಬ್ಬರು ಹೇಳುವ ಭಾವವಿದು.

ಭೂದಾನ ಚಳುವಳಿ ನೇತಾರ ವಿನೋಬಾ ಭಾವೆಯವರ ತಾಯಿ ರುಕ್ಮಿಣಿ ದೇವಿಯ ಸ್ಮರಣೆಯಲ್ಲಿ 1984ರಲ್ಲಿ ವಿನೋಬಾ ಸಹೋದರ ಶಿವಾಜಿ ಭಾವೆಯವರು ಈ ಆಶ್ರಮವನ್ನು ಉದ್ಘಾಟಿಸಿದರು.

ಈ ಆಶ್ರಮವು 2 ಎಕರೆ 20 ಗುಂಟೆ ಬರಡು ಭೂಮಿಯಲ್ಲಿ ನಿರ್ಮಿಸಲಾಗಿದ್ದು, ಇದೀಗ ಬಂಗಾರದ ಗೋಪುರದಂತೆ ಕಂಗೊಳಿಸುತ್ತಿದೆ. ಈ ಧಾಮದಲ್ಲಿ ಶ್ರೀ ಕೃಷ್ಣ ಮಂದಿರ,



ಹನುಮಾನ್ ಮಂದಿರ, ಶಿವಲಿಂಗ, ನಾಗದೇವತೆಗಳ ಮಂದಿರಗಳನ್ನು ಕಾಣಬಹುದಾಗಿದೆ. ಅಂದಿನ ಕಾಲದ ತೆರೆದ ಬಾವಿ, ಗೋಶಾಲೆಗಳು ಇಲ್ಲಿ ಕಾಣಸಿಗುತ್ತವೆ. ಇಂದಿನ ಆಧುನಿಕ ತಂತ್ರಜ್ಞಾನ, ರಸಾಯನಿಕತೆಗೆ ಒಗ್ಗಿಕೊಳ್ಳದೆ ಪರಿಸರ ಸ್ನೇಹಿ ಗೋಬರ್ ಗ್ಯಾಸ್ ಪ್ಲಾಂಟ್, ಹಾಲಿನ ಡೈರಿ, ಗಿರಣಿಗಳು ಈ ಆಶ್ರಮದಲ್ಲಿವೆ.

ಇಲ್ಲಿನ ಮರ, ಗಿಡ, ಪ್ರಾಣಿ, ಪಕ್ಷಿ, ಆಶ್ರಯವಾಸಿಗಳ ಅಂತಃಕರಣದಲ್ಲಿ ಮಹಾತ್ಮನ ಸ್ಪರ್ಶ, ಇಲ್ಲಿನ ಬದುಕು, ಭಾವನೆ, ಸ್ವಾವಲಂಬನೆ ನಮ್ಮನ್ನು ಮಹಾತ್ಮನ ವಾರ್ಧಾ ಆಶ್ರಮವನ್ನು ಕಲ್ಪಿಸಿಕೊಳ್ಳುವಂತೆ ಮಾಡುತ್ತದೆ. ಇಲ್ಲಿ 15–20 ಸಾಧಕರು, ಅತಿಥಿಗಳು ಸಂತೃಪ್ತಿಯಿಂದ ಬದುಕು ಸಾಗಿಸಿದ ಪುಣ್ಯ ನೆಲೆಯಿದು.

ಈ ಪುಣ್ಯ ನೆಲೆಯ ಆಧಾರ ಸ್ತಂಭ, ಪ್ರೀತಿಯ ಅಡಿಪಾಯವೆ ಮೀರಾತಾಯಿ ಕೊಪ್ಪಿಕರ್. ಕೃಷಿಯೇ ಜೀವನ, ಭೂಮಿ ತಾಯಿಯ ಸೇವೆ, ಕಾಯಕವೇ ಉಸಿರು. ಪಂಚಭೂತಗಳೇ ಶಕ್ತಿಗಳು ಎಂದು 95 ವರ್ಷದ ಮೀರಾತಾಯಿಯವರು ಹೇಳುತಿದ್ದು, ಇಂದಿಗೂ ಮುಂಜಾವಿನಲ್ಲಿಯೇ ಎದ್ದು ದೇವರ ಸ್ಮರಣೆಯೊಂದಿಗೆ ದಿನ ಆರಂಭಿಸುತ್ತಾರೆ. ಇವರದ್ದು ಸಾತ್ವಿಕ ಬದುಕು. ಉಚ್ಚ ವಿಚಾರಗಳನ್ನು ಮಾದರಿ ಜೀವನವನ್ನು ಮೆಲುಕು ಹಾಕುತ್ತಿರುವ ಇವರು ಹುಬ್ಬಳ್ಳಿಯ ಕೊಪ್ಪಿಕರ್ ಶ್ರೀಮಂತ ಮನೆತನದವರು. ಕೋಟ್ಯಾಂತರ ಮೌಲ್ಯದ ಆಸ್ತಿಯನ್ನು ನಿರಾಕರಿಸಿ ವಾತ್ಸಲ್ಯ ಧಾಮದಲ್ಲಿ ನೆಲೆನಿಂತ ತ್ಯಾಗಮಯಿ. ಜ್ಞಾನವೃದ್ಧರಾದ ಶ್ರೀ ಸೇವಾನಂದ ಸ್ವಾಮಿಗಳ ನೆರಳಿನಂತೆ ಸೇವೆಯನ್ನೆ ಬದುಕಾಗಿಸಿಕೊಂಡವರು.

ಸಾವಯವ ಕೃಷಿಯಲ್ಲಿ ಇವರು ಗೈದ ಸಾಧನೆಗಾಗಿ ರಾಜ್ಯ ಸರ್ಕಾರ 2009ರಲ್ಲಿ ಇವರಿಗೆ ರಾಜ್ಯೋತ್ಸವ ಪ್ರಶಸ್ತಿ ಘೋಷಿಸಿದ್ದರು. ಆದರೆ ಪ್ರಶಸ್ತಿ ಪುರಸ್ಕಾರಗಳನ್ನು ನಿರಾಕರಿಸಿದ್ದನ್ನು ಗಮನಿಸಿ ಸಚಿವ ಗೋವಿಂದ ಕಾರಜೋಳ ಅಂದಿನ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪನವರ ಗಮನಕ್ಕೆ ತಂದರು. ಮುಖ್ಯಮಂತ್ರಿಗಳು ಆಶ್ರಮಕ್ಕೆ ಭೇಟಿ ನೀಡಿ ಪ್ರಶಸ್ತಿ ನೀಡಿದರು. ಪ್ರಶಸ್ತಿ ರೂಪದಲ್ಲಿ ಬಂದ 3 ಗ್ರಾಂ ಬಂಗಾರದ ಪದಕವನ್ನು ಬಡವರಿಗೆ ದಾನ ಮಾಡಿದ್ದಾರೆ. 1 ಲಕ್ಷ ರೂ. ನೀಡಿದ್ದ ಚೆಕ್ ಹಣವನ್ನು ಇಂದಿಗೂ ಜನಸೇವೆಗಾಗಿ ಮೀಸಲಿರಿಸಿದ ಮಹಾತಾಯಿ ಇವರಾಗಿದ್ದಾರೆ.

ಪಕ್ಕಾ ಗಾಂಧಿವಾದಿಯಾಗಿರುವ ಇವರು ಸತಃ ನೂಲು ನೇಯ್ದು ವಸ್ತ್ರ ಧರಿಸುತ್ತಾರೆ. ಮುಂದಿನ 4 ವರ್ಷಗಳಿಗಾಗುವಷ್ಟು ಉಡುಪನ್ನು ತಯಾರಿಸಿಟ್ಟುಕೊಂಡ ಸ್ವಾವಲಂಬಿ. ಅಂದು ವಿನೋಬಾ ಭಾವೆಯವರೊಂದಿಗೆ ಭೂದಾನ ಚಳುವಳಿಯಲ್ಲಿ ತೊಡಗಿ ಕರ್ನಾಟಕದಿಂದ ಒಟ್ಟು 40 ಸಾವಿರ ಎಕರೆ ಭೂಮಿಯನ್ನು ದಾನ ಮಾಡಿಸುವಲ್ಲಿ ಯಶಸ್ವಿಯಾದ ಸಾಧಕಿ. ಸಮಾಜಕ್ಕೆ ಏನನ್ನಾದರೂ ಕೊಡಬೇಕು, ಸ್ವಂತಕ್ಕೆ ಏನನ್ನು ಬಯಸಬಾರದು ಎಂಬುದು ಇವರ ಧ್ಯೇಯವಾಗಿದೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಂಯುಕ್ತ ಆಶ್ರಯದಲ್ಲಿ ನೀಡುವ ಮಹಾತ್ಮಾ ಗಾಂಧಿ ಸೇವಾ ಪ್ರಶಸ್ತಿಯನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಅಶೋಕ ಬಂಗಾರೆಪ್ಪ ಇಂಚಿಗೇರಿ ಇವರ ಅಧ್ಯಕ್ಷತೆಯಲ್ಲಿ ರಚಿಸಿದ ಸಮಿತಿ ಮೀರಾಬಾಯಿಯವರನ್ನು ಆಯ್ಕೆ ಮಾಡಿದ್ದು, 2020ರ ಸಾಲಿನ



Downloaded From: www.kpscvaani.com

ಪ್ರಶಸ್ತಿ ಪುರಸ್ಕೃತರು ಇವರಾಗಿದ್ದಾರೆ. ತಮ್ಮ ಇಡೀ ಜೀವನವನ್ನೇ ಜನಸೇವೆಗಾಗಿ ಮುಡಿಪಾಗಿಟ್ಟ ಆದರ್ಶಮಯಿ, ಸರಳಜೀವಿ, ಶಾಂತ ಸ್ವರೂಪಿಣಿ ಮೀರಾತಾಯಿ ಅವರು ಇಂದಿನ ಯುವ ಪೀಳಿಗೆಗೆ ಮಾದರಿಯ ರಾಯಭಾರಿಯಾಗಿದ್ದಾರೆ.

**ಅವಿಶ್ರಾಂತ ಕಾಯಕ ತಪೋನೆಲ ಶ್ರೀ ಸಿದ್ಧಗಂಗಾ ಮಠ:**

ಜಾತಿ-ಧರ್ಮ, ಪಂಥ-ಪ್ರದೇಶದ ಭೇದವಿಲ್ಲದೆ ಲಕ್ಷಾಂತರ ಮಕ್ಕಳಿಗೆ ಅನ್ನ, ಅಕ್ಷರ, ಆಶ್ರಯಗಳ ತ್ರಿವಿಧ ದಾಸೋಹ ಸೇವೆಗೈದು ವಿಶ್ವ ವಿಖ್ಯಾತಿ ಪಡೆದಿರುವ ಶ್ರೀ ಸಿದ್ಧಗಂಗಾ ಮಠಕ್ಕೆ 2021ನೇ ಸಾಲಿನ ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ ಲಭಿಸಿದೆ.

ಅವಿಶ್ರಾಂತ ಕಾಯಕದ ತಪೋನೆಲ ಶ್ರೀ ಸಿದ್ಧಗಂಗಾ ಮಠ ಸರ್ವ ಧರ್ಮಿಯರ ನೆಲೆವೀಡಾಗಿದ್ದು, ಇಲ್ಲಿ ಸದ್ದುಗದ್ದಲವಿರದ ಸಾಧನೆಯೇ ಗದ್ದುಗೆಯೇರಿದೆ. ಕಾಯಕ ಯೋಗಿ, ತ್ರಿವಿಧ ದಾಸೋಹಿ ಸಿದ್ಧಗಂಗಾ ಶ್ರೀಗಳ ಕಾರ್ಯಕ್ಷೇತ್ರವಾಗಿರುವ ಸಿದ್ಧಗಂಗಾ ಮಠಕ್ಕೆ ಪರಂಪರೆಯ ಇತಿಹಾಸವಿದೆ. ಶ್ರೀ ಸಿದ್ಧಗಂಗಾ ಕ್ಷೇತ್ರವನ್ನು ಒಳಗೊಂಡಿರುವ ತುಮಕೂರು ನಡೆದಾಡುವ ದೇವರು ನೆಲೆಸಿದ ಪುಣ್ಯ ಭೂಮಿಯೆಂದೇ ಹೆಸರುವಾಸಿಯಾಗಿದೆ.

ವಿಶ್ವವಿಖ್ಯಾತಿಗಳಿಸಿರುವ ಸಿದ್ಧಗಂಗಾ  ಕ್ಷೇತ್ರದ ಸಾಧನೆ ಜಗದಗಲ ಅಚ್ಚರಿಗೆ ಜೀವಂತ ಸಾಕ್ಷಿಯಾಗಿದೆ. ಈ  ಸಾಧನೆಗೆ ನೂರಹತ್ತು ವಸಂತಗಳನ್ನು ಲೋಕೋಪಕಾರಕ್ಕಾಗಿಯೇ ಪೂರೈಸಿದ ಮಹಾಬೆಳಕು ಲಿಂಗೈಕ್ಯರಾದ ಡಾ. ಶ್ರೀ ಶಿವಕುಮಾರ ಸ್ವಾಮೀಜಿ ಕಾರಣ.

ಹೊಟ್ಟೆ ತುಂಬುವಷ್ಟು ಅನ್ನ, ಬಿಸಲು-ಮಳೆಯಿಂದ ರಕ್ಷಿಸಿಕೊಳ್ಳುವಷ್ಟು ಆಶ್ರಯ, ಪ್ರಪಂಚವನ್ನು ನೋಡಬೇಕಾಗಿರುವ ಜ್ಞಾನದ ಕಣ್ಣು. ಈ ಮೂರು ಮೂಲಭೂತ ಅವಶ್ಯಕತೆಗಳನ್ನು ಸಿದ್ಧಗಂಗಾ ಮಠದ ಮೂಲಕ ಪೂರೈಸಿರುವ ಮಹಾದಾಸೋಹಿ ಡಾ. ಶ್ರೀ ಶಿವಕುಮಾರ ಸ್ವಾಮೀಜಿ ಅಗಣ ಭಕ್ತ ಗಣದ ಮನದಲ್ಲಿ ನಡೆದಾಡುವ ದೇವರಾಗಿ ನೆಲೆಯೂರಿದ್ದಾರೆ.

**ಶ್ರೀಮಠಕ್ಕಿದೆ ಸುವರ್ಣ ಇತಿಹಾಸ:-**

ತುಮಕೂರಿನ ಸಿದ್ಧಗಂಗಾ ಮಠಕ್ಕೆ ಅದರದ್ದೇ ಆದ ಸುವರ್ಣ ಇತಿಹಾಸ ಇದೆ. 14ನೇ ಶತಮಾನದಲ್ಲಿ ಶ್ರೀ ಮಠ 'ಶೂನ್ಯ ಸಿಂಹಾಸನ'ದ ಶ್ರೀ ಗೋಸಲ ಸಿದ್ದೇಶ್ವರ ಸ್ವಾಮೀಜಿಯವರಿಂದ ಸ್ಥಾಪಿತವಾಗಿದೆ.

ಶ್ರೀ ಗೋಸಲ ಸಿದ್ದೇಶ್ವರ ಸ್ವಾಮಿಗಳು ಮಹಾನ್ ತಪಸ್ವಿಗಳಾಗಿದ್ದು, ಅವರು ಕಲ್ಲು ಬಂಡೆಯೊಂದರಿಂದ ಗಂಗೋದ್ಭವ ಮಾಡಿದ್ದ ಕಾರಣ ಈ ಸ್ಥಳಕ್ಕೆ ಸಿದ್ಧಗಂಗೆ ಎಂದು ಹೆಸರು ಬಂದಿದೆ. ಶ್ರೀ ಗೋಸಲ ಸಿದ್ದೇಶ್ವರ ಸ್ವಾಮೀಜಿ ಧಾರ್ಮಿಕ ಕಾರ್ಯಗಳಿಗೆ ಸಿದ್ಧಗಂಗೆಯಲ್ಲಿ ಮಠ ಸ್ಥಾಪನೆ ಮಾಡಿದರು. ನಂತರ ಶ್ರೀ ಸಿದ್ದಲಿಂಗೇಶ್ವರ ಸ್ವಾಮಿ ಸೇರಿದಂತೆ ಶ್ರೀ ಮಠದ ಗುರುಪರಂಪರೆಯಲ್ಲಿ ಅನೇಕ ಶಿವಯೋಗಿಗಳು ಆಗಿಹೋಗಿದ್ದಾರೆ.

ಹದಿನೆಂಟನೇ ಶತಮಾತನದಿಂದೀಚೆಗೆ ಶ್ರೀ ನಂಜುಂಡಸ್ವಾಮೀಜಿ, ಶ್ರೀ ರುದ್ರಸ್ವಾಮಿ, ಶ್ರೀ ಸಿದ್ದಲಿಂಗ ಸ್ವಾಮೀಜಿಗಳು ಮಠವನ್ನು ಮುನ್ನಡೆಸಿಕೊಂಡು ಬಂದರು. ಇವರಾದ ಬಳಿಕ ಶ್ರೀ ಅಟವೀ ಸ್ವಾಮೀಜಿ(1853-1901)ಯವರಿಂದ ಮಠದ ಹೊಸ ಇತಿಹಾಸ ಪ್ರಾರಂಭವಾಯಿತು.

ಅಟವಿ ಸ್ವಾಮೀಜಿ ಅವರ ಅಮೃತ ಹಸ್ತದಿಂದ ಹಚ್ಚಿದ ಅಡುಗೆ ಒಲೆ ಇಂದಿಗೂ ನಂದದೆ ಮಠಕ್ಕೆ ಬರುವ ಲಕ್ಷಾಂತರ ಭಕ್ತಾದಿಗಳಿಗೆ ಹಸಿವು ನೀಗಿಸುತ್ತಿದೆ. ಅಟವೀ ಸ್ವಾಮೀಜಿಗಳ ನಂತರ ಶ್ರೀ ಉದ್ದಾನ ಶಿವಯೋಗಿಗಳು ಮಠದ ಉತ್ತರಾಧಿಕಾರಿಯಾದರು. ಅಟವೀ ಸ್ವಾಮೀಜಿ  ದಾಸೋಹ ಜ್ಯೋತಿಯನ್ನು ಹಚ್ಚಿದ ಮಹಾನುಭಾವರಾದರೆ, ಶ್ರೀ ಉದ್ದಾನ ಶಿವಯೋಗಿಗಳು ಜ್ಞಾನದ ಜ್ಯೋತಿಯನ್ನು ಬೆಳಗಿಸಿದ  ಮಹಾ

> **ಶ್ರೀ ಶ್ರೀ ಶ್ರೀ ಶಿವಕುಮಾರ ಶ್ರೀಗಳು ಆಧ್ಯಾತ್ಮಿಕ ಶಿಕ್ಷಣದ ಜೊತೆಗೆ ಅಕ್ಷರ ಶಿಕ್ಷಣವನ್ನೂ ಸಹ ಕೊಟ್ಟ ಶತಮಾನ ಕಂಡ ಮಹಾ ಪುರುಷರಾಗಿದ್ದರು. ಅರವತ್ತರ ದಶಕದಲ್ಲಿ ನಾಡಿಗೆ ಬಂದಿದ್ದ ತೀವ್ರ ಬರಗಾಲದ ಸಂದರ್ಭದಲ್ಲಿಯೂ ಮಕ್ಕಳಿಗೆ ತ್ರಿವಿಧ ದಾಸೋಹ ಕೊಡುವ ಕಾರ್ಯವನ್ನು ನಿರಂತರವಾಗಿ ನಡೆಸುವುದಕ್ಕಾಗಿ ಭಿಕ್ಷಾಟನೆ ಮಾಡಿ ಮಕ್ಕಳಿಗೆ ಅನ್ನ ಕೊಟ್ಟಂತಹ ಮಾತೃ ಹೃದಯಿಯಾಗಿದ್ದಾರೆ.**





Downloaded From: www.kpscvaani.com



ಮಾನವತಾವಾದಿಯಾದರು. ಶ್ರೀ ಉದ್ದಾನ ಶಿವಯೋಗಿ ಸ್ವಾಮೀಜಿ ಲಿಂಗೈಕ್ಯರಾದ ಬಳಿಕ 1941ರ ಜನವರಿ 11ರಂದು ಡಾ. ಶ್ರೀ ಶ್ರೀ ಶಿವಕುಮಾರ ಶ್ರೀಗಳು ಮಠಾಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು.

ಅಟವೀ ಸ್ವಾಮೀಜಿ ಹಾಗೂ ಶ್ರೀ ಉದ್ದಾನ ಶಿವಯೋಗಿ ಸ್ವಾಮೀಜಿಗಳು ಹಚ್ಚಿದ ದಾಸೋಹ ಮತ್ತು ಜ್ಞಾನದ ಜ್ಯೋತಿಯನ್ನು 'ಮಹಾಜ್ಯೋತಿ'ಯನ್ನಾಗಿ ಮಾಡಿದ ಶ್ರೀ ಶಿವಕುಮಾರ ಶ್ರೀಗಳು ಲಕ್ಷಾಂತರ ಬಡ, ದೀನ, ದಲಿತ, ಗ್ರಾಮೀಣ ವಿದ್ಯಾರ್ಥಿಗಳಿಗೆ ಆಸರೆ ಕಲ್ಪಿಸಿ ಅವರ ಭವಿಷ್ಯವನ್ನು ಉಜ್ವಲವಾಗುವಂತೆ ಮಾಡುವ ಮೂಲಕ ಶ್ರೀ ಸಿದ್ಧಗಂಗಾ ಮಠದ ಕೀರ್ತಿಯನ್ನು ವಿಶ್ವಮಟಕ್ಕೇರಿಸಿದರು.

ನಾಡು ಕಂಡ ಶ್ರೇಷ್ಠ ಪುರುಷರ ಸಾಲಿನಲ್ಲಿ ಶತಮಾನದ ಸಂತ, ಶಿಕ್ಷಣದ ಹರಿಕಾರ ಶ್ರೀ ಶಿವಕುಮಾರ ಮಹಾಸ್ವಾಮಿಗಳು ಉಚ್ಚ ಪಂಕ್ತಿಯಲ್ಲಿ ನಿಲ್ಲುತ್ತಾರೆ. 'ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ' ಎಂಬ ಬಸವಣ್ಣನವರ ವಾಣಿಯಂತೆ ಗ್ರಾಮೀಣ ಭಾಗಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ ಕರ್ನಾಟಕದ ಅಕ್ಷರ ಕ್ರಾಂತಿಗೆ ನಾಂದಿ ಹಾಡಿದ ಶ್ರೀಗಳು ಮಠವನ್ನು ಕೇವಲ ಧಾರ್ಮಿಕ ಕೇಂದ್ರವನ್ನಾಗಿ ಮಾಡದೆ ಅಕ್ಷರದ ಮೂಲಕ ಅರಿವಿನ ಕ್ರಾಂತಿಯನ್ನು ಸಹ ಮಾಡಿದರು. ಅವರೇನಾದರೂ ಶಿಕ್ಷಣಕ್ಕೆ ಮಹತ್ವ ಕೊಡದೇ ಹೋಗಿದ್ದಲ್ಲಿ ಲಕ್ಷಾಂತರ ಬಡ ಮಕ್ಕಳ ಬದುಕು ಅಂಧಕಾರದಲ್ಲಿಯೇ ಕೊನೆಗೊಳ್ಳಬೇಕಾಗಿತ್ತು.

ಸ್ವತಃ ಮಕ್ಕಳಿಗೆ ಪಾಠ ಹೇಳುತ್ತಿದ್ದ ಶ್ರೀಗಳು ಶಿಕ್ಷಕ ಪಾತ್ರವನ್ನೂ ಸಹ ನಿರ್ವಹಿಸಿದ್ದಾರೆ. ಆಧ್ಯಾತ್ಮಿಕ ಶಿಕ್ಷಣದ ಜೊತೆಗೆ ಅಕ್ಷರ ಶಿಕ್ಷಣವನ್ನೂ ಸಹ ಕೊಟ್ಟ ಶತಮಾನ ಕಂಡ ಮಹಾ ಪುರುಷರಾಗಿದ್ದರು. ಅರವತ್ತರ ದಶಕದಲ್ಲಿ ನಾಡಿಗೆ ಬಂದಿದ್ದ ತೀವ್ರ ಬರಗಾಲದ ಸಂದರ್ಭದಲ್ಲಿಯೂ ಮಕ್ಕಳಿಗೆ ತ್ರಿವಿಧ ದಾಸೋಹ ಕೊಡುವ ಕಾರ್ಯವನ್ನು ನಿರಂತರವಾಗಿ ನಡೆಸುವುದಕ್ಕಾಗಿ ಭಿಕ್ಷಾಟನೆ ಮಾಡಿ ಮಕ್ಕಳಿಗೆ ಅನ್ನ ಕೊಟ್ಟಂತಹ ಮಾತೃ ಹೃದಯಿಯಾಗಿದ್ದಾರೆ.

ಡಾ. ಶ್ರೀ ಶ್ರೀ ಶಿವಕುಮಾರ ಶ್ರೀಗಳು 2019ರ ಜನವರಿ 21ರಂದು ಲಿಂಗೈಕ್ಯರಾದ ಬಳಿಕ ಶ್ರೀ ಸಿದ್ಧಲಿಂಗ ಸ್ವಾಮೀಜಿ 2011ರ ಆಗಸ್ಟ್ 4ರಂದು ಶ್ರೀ ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ.

**ಶ್ರೀ ಮಠದ ಶೈಕ್ಷಣಿಕ ಕ್ರಾಂತಿ:**

ಶ್ರೀ ಉದ್ದಾನ ಸ್ವಾಮೀಜಿ ಅವರು ಮಠದ ಉತ್ತರಾಧಿಕಾರಿಯಾದ ಬಳಿಕ ಮಠದ ಆವರಣದಲ್ಲಿ 1904ರಲ್ಲಿ 20 ವಿದ್ಯಾರ್ಥಿಗಳನ್ನೊಳಗೊಂಡ ಸಂಸ್ಕೃತ ಪಾಠಶಾಲೆಯೊಂದಿಗೆ ಗ್ರಾಮೀಣ ಪ್ರದೇಶ ಅನಾಥ ಮಕ್ಕಳಿಗಾಗಿ ಜಾತಿ, ಮತ, ಭೇದ ಇಲ್ಲದೆ ಉಚಿತ ವಿದ್ಯಾರ್ಥಿನಿಲಯವನ್ನು ಆರಂಭಿಸಿದರು. ಈ ಸಂಸ್ಕೃತ ಶಾಲೆಗೆ 1917ರಲ್ಲಿ ಸರ್ಕಾರಿಂದ ಮಾನ್ಯತೆ ದೊರೆಯಿತು. ನಂತರ 1938ರಲ್ಲಿ ಶ್ರೀ ಶಿವಕುಮಾರ ಶ್ರೀಗಳು ಈ ಸಂಸ್ಕೃತ ಪಾಠಶಾಲೆಯನ್ನು ಸಂಸ್ಕೃತ ಕಾಲೇಜನ್ನಾಗಿ ಮೇಲ್ದರ್ಜೆಗೇರಿಸಿದರು.

ಮೈಸೂರು ಸಂಸ್ಥಾನದ ಆಸ್ಥಾನ ವಿದ್ವಾಂಸರಾಗಿ ಗೌರವ ಪಡೆದಿದ್ದ ವಿದ್ವಾಂಸ ಎಂ.ಜಿ. ನಂಜುಂಡಾರಾಧ್ಯ, ಮೈಸೂರು ವಿಶ್ವ ವಿದ್ಯಾನಿಲಯ ಸಂಸ್ಕೃತ ವಿಭಾಗದಲ್ಲಿ ಪ್ರೊಫೆಸರ್ ಹಾಗೂ ಪ್ರಾಚ್ಯ ಸಂಶೋಧನಾ ಕೇಂದ್ರದ ನಿರ್ದೇಶಕರಾಗಿದ್ದ ಜಿ. ಮರಳು ಸಿದ್ದಯ್ಯ, ಬೆಂಗಳೂರಿನ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ಪ್ರಥಮ ಉಪಕುಲಪತಿಯಾಗಿ ಸೇವೆ ಸಲ್ಲಿಸಿರುವ ಶ್ರೀ ಮಲ್ಲೇಪುರಂ ವೆಂಕಟೇಶ್ ಮಠದ ಸಂಸ್ಕೃತ ಶಾಲೆಯಲ್ಲಿ ವ್ಯಾಸಂಗ ಮಾಡಿರುವುದು ಮಠದ ಹೆಗ್ಗಳಿಕೆ.

ಮಠದಿಂದ 1963ರಲ್ಲಿ ಸ್ಥಾಪನೆಯಾದ ಸಿದ್ಧಗಂಗಾ ವಿದ್ಯಾಸಂಸ್ಥೆಯು ಈವರೆಗೂ 12 ಪೂರ್ವ ಪ್ರಾಥಮಿಕ ಶಾಲೆ, 13 ಕಿರಿಯ ಪ್ರಾಥಮಿಕ ಶಾಲೆ, 13 ಹಿರಿಯ ಪ್ರಾಥಮಿಕ ಶಾಲೆ, 61 ಪ್ರೌಢಶಾಲೆ, 13 ಪದವಿ ಪೂರ್ವ ಕಾಲೇಜು, 2 ಶಿಕ್ಷಣ ತರಬೇತಿ ಕಾಲೇಜು, 1 ಸಂಸ್ಕೃತ ಕಾಲೇಜು, 1 ವೀರಶೈವಾಗಮ ಕಾಲೇಜು, 22 ಸಂಸ್ಕೃತ ಶಾಲೆ, 1 ಕನ್ನಡ ಪಂಡಿತ್ ಕಾಲೇಜು, 5 ಪ್ರಥಮ ದರ್ಜೆ ಕಾಲೇಜು, 1 ಶಿಕ್ಷಣ ತರಬೇತಿ ಕಾಲೇಜು, 1 ಪಾಲಿಟೆಕ್ನಿಕ್, 1 ಫಾರ್ಮಸಿ ಕಾಲೇಜು, 1 ನರ್ಸಿಂಗ್ ಕಾಲೇಜು, 2 ಅಂಧಮಕ್ಕಳ ಶಾಲೆ, 4 ಐಟಿಐ ಕಾಲೇಜು, 1 ಸಮನ್ವಯ ಶಿಕ್ಷಣ ಸಂಸ್ಥೆ, 1 ಎಂಬಿಎ ಕಾಲೇಜು, 1 ಬಿಪಿಇಡಿ ಕಾಲೇಜು, 1 ತಾಂತ್ರಿಕ ಮಹಾವಿದ್ಯಾಲಯ ಸೇರಿದಂತೆ 158 ಶಾಲಾ-ಕಾಲೇಜುಗಳನ್ನು ತೆರೆದು ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಅಕ್ಷರ ಜ್ಞಾನವನ್ನು ನೀಡುತ್ತಾ ಬಂದಿದೆ. ಶ್ರೀ ಶಿವಕುಮಾರ ಶ್ರೀಗಳು ಮಠದ ಅಧಿಕಾರ ವಹಿಸಿಕೊಂಡ ಬಳಿಕ ಶೈಕ್ಷಣಿಕ ಸಂಸ್ಥೆ ವಿಸ್ತಾರವಾಗಿರುವುದು ಸಿದ್ಧಗಂಗಾ ವಿದ್ಯಾ ಸಂಸ್ಥೆ ಬೆಳವಣಿಗೆಗೆ ಸಾಕ್ಷಿಯಾಗಿದೆ.

ಐಜಿಪಿ ರೇವಣ್ಣ ಸಿದ್ದಯ್ಯ, ಹಿರಿಯ ಚಲನಚಿತ್ರ ನಟ ಮುಖ್ಯಮಂತ್ರಿ ಚಂದ್ರು, ಅಮೇರಿಕಾದಲ್ಲಿ ನೆಲೆಸಿರುವ ಕೆಮಿಸ್ಟ್ರಿ ಪ್ರೊಫೆಸರ್ ತಿಮ್ಮಯ್ಯ, ಕೇಂದ್ರ ಸಚಿವ ಭಗವಂತ್ ಖೂಬಾ, ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ, ಸಾಹಿತಿ ಕುಂ. ವೀರಭದ್ರಪ್ಪ, ರಾಜಕಾರಣಿ ಉಗ್ರಪ್ಪ ಸೇರಿದಂತೆ ಐಎಎಸ್, ಐಪಿಎಸ್ ಇನ್ನಿತರ ಭಾರತೀಯ ಸೇವೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಲವಾರು ಮಂದಿ ಮಠದ ಶೈಕ್ಷಣಿಕ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿರುವುದು ಹೆಮ್ಮೆಯ ಸಂಗತಿ.

ಶ್ರೀ ಸಿದ್ಧಗಂಗಾ ಮಠ ಕೊಟ್ಟ ಮಠವಲ್ಲ, ಕಟ್ಟಿದ ಮಠವಾಗಿದೆ. ದೇಶದಲ್ಲಿ ಗುರುತಿಸಿರುವ ಗುರುಕುಲಗಳಲ್ಲಿ ಶ್ರೀ ಸಿದ್ಧಗಂಗಾ ಮಠವೂ ಒಂದಾಗಿದೆ. ಶ್ರೀ ಸಿದ್ಧಗಂಗಾ ಮಠವು ಗ್ರಾಮೀಣ ಪ್ರದೇಶದಲ್ಲಿ ಶೈಕ್ಷಣಿಕ ಕ್ರಾಂತಿ ಮೂಡಿಸಿದ ಉನ್ನತ ಮಠವಾಗಿದ್ದು, ಇಲ್ಲಿ ಕಲಿತ ಹಲವರು ದಾರ್ಶನಿಕ, ವಿದ್ವಾಂಸ, ಸಾಹಿತಿ, ಕವಿಗಳು, ಪ್ರಗತಿ ಪರ ರೈತರಾಗಿದ್ದಾರೆ.



Downloaded From: www.kpscvaani.com

# ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಆಸ್ಪತ್ರೆ

**ಸಾಮಾನ್ಯವಾಗಿ ನಗರವಾಸಿಗರಲ್ಲೇ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದ ಕ್ಯಾನ್ಸರ್ ರೋಗವು ಇತ್ತೀಚೆಗೆ ಗ್ರಾಮೀಣ ಭಾಗದ ಜನರಲ್ಲೂ ಕಾಣಿಸಿಕೊಳ್ಳಲಾರಂಭಿಸಿದೆ. ಗ್ರಾಮೀಣ ಭಾಗದ ಜನರು ಕ್ಯಾನ್ಸರ್ ಚಿಕಿತ್ಸೆಗೆ ಬೆಂಗಳೂರಿಗೇ ಬರಬೇಕಾದ ಅನಿವಾರ್ಯತೆಯನ್ನು ಮನಗಂಡ ಸರ್ಕಾರ ಇತರೆ ಜಿಲ್ಲೆಗಳಲ್ಲೂ ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಆಸ್ಪತ್ರೆಯನ್ನು ನಿರ್ಮಾಣ ಮಾಡಲು ಮುಂದಾಗಿದೆ. ಈ ಹಿನ್ನೆಲೆಯಲ್ಲಿ ತುಮಕೂರಿನಲ್ಲಿ ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡಿದೆ.**

ರಿಶಿಕೇಶ್

ರಾಜ್ಯದ ಎಲ್ಲಡೇ ಸುಸಜ್ಜಿತ ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣ ಮಾಡಲು ಪಣ ತೊಟ್ಟಿರುವ ಬಸವರಾಜ ಎಸ್ ಬೊಮ್ಮಾಯಿ ಅವರು ಇತ್ತೀಚಿಗೆ ತುಮಕೂರಿನಲ್ಲಿ ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಆಸ್ಪತ್ರೆಯ ನೂತನ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡಿದ್ದಾರೆ. ಇದು ಅವರ ಆರೋಗ್ಯ ಕರ್ನಾಟಕದ ಕಲ್ಪನೆಯ ಸಾಕಾರಕ್ಕೆ ಸ್ಫೂರ್ತಿಯಾಗಲಿದೆ ಎಂದರೆ ತಪ್ಪಾಗಲಾರದು. ತಮ್ಮ ಜಿಲ್ಲೆಗೆ ಕ್ಯಾನ್ಸರ್ ಆಸ್ಪತ್ರೆ ಬರುತ್ತಿರುವುದು ತುಮಕೂರು ಭಾಗದ ಜನರಿಗಂತೂ ಸಂಜೀವಿನಿ ಸಿಕ್ಕಷ್ಟು ಸಂತೋಷವಾಗಿದೆ.

ಇದೇ ತಿಂಗಳ ನವೆಂಬರ್ 7 ರಂದು ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನ. ಕ್ಯಾನ್ಸರ್ ರೋಗಲಕ್ಷಣಗಳು, ಚಿಕಿತ್ಸೆ ಮತ್ತು ರೋಗ ಪತ್ತೆಹಚ್ಚುವ ಬಗ್ಗೆ ಹಾಗೂ ಆರಂಭಿಕ ಹಂತದಲ್ಲಿ ಜನರು ರೋಗಲಕ್ಷಣಗಳನ್ನು ನಿರ್ಲಕ್ಷಿಸಬಾರದೆಂದು ಅರಿವು ಮೂಡಿಸಲು ಈ ದಿನವನ್ನು ಆಚರಿಸಲಾಗುತ್ತದೆ. ಮನುಕುಲಕ್ಕೆ ಅಂಟಿದ ಬಹುದೊಡ್ಡ ಕಾಯಿಲೆಗಳಲ್ಲಿ ಕ್ಯಾನ್ಸರ್ ಕೂಡ ಒಂದು. ಸಮುದಾಯ ಮಟ್ಟದಲ್ಲಿ ಬೇಗ ಗುರುತಿಸಲು ಸಾಧ್ಯವಾಗಿದ್ದರೂ, ಸಕಾಲದ ಚಿಕಿತ್ಸೆಯಿಂದ ಗುಣಪಡಿಸಬಹುದು. ಸಕಾಲದಲ್ಲಿ ಚಿಕಿತ್ಸೆ ನೀಡುವುದರಿಂದ ಕ್ಯಾನ್ಸರ್‌ನಿಂದ ಸಾಯುವವರಲ್ಲಿ ಶೇ. 34 ರಷ್ಟು ಜನರನ್ನು ಗುಣಪಡಿಸಬಹುದಾಗಿದೆ. ಈ ಹಿನ್ನಲೆಯಲ್ಲಿ ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇದಕ್ಕೆ ಸಾಕ್ಷಿಯಾಗಿ ಇತ್ತೀಚಿಗೆ ತುಮಕೂರು ನಗರದಲ್ಲಿ ಸುಮಾರು 9906.21 ಲಕ್ಷ ರೂ. ಅಂದಾಜು ವೆಚ್ಚದ 100 ಹಾಸಿಗೆಗಳ ಸಾಮರ್ಥ್ಯವುಳ್ಳ ಪೆರಿಫರಲ್ ಕ್ಯಾನ್ಸರ್ ಕೇಂದ್ರ ಸ್ಥಾಪನೆ ನಿರ್ಮಾಣಕ್ಕೆ ಚಾಲನೆ ನೀಡುವ ಮೂಲಕ ರಾಜ್ಯ ಸರಕಾರವು ರಾಜ್ಯದ ಎಲ್ಲಡೇ ಸುಸಜ್ಜಿತ ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣ ಮಾಡಲು ಪಣ ತೊಟ್ಟಿದ್ದಾರೆ. ಈ ಬಗ್ಗೆ ಒಂದು ವಿಶೇಷ ವರದಿ.

ರಾಜ್ಯದ ಏಕೈಕ ಸರಕಾರ ಸ್ವಾಮ್ಯದ ಕ್ಯಾನ್ಸರ್ ಆಸ್ಪತ್ರೆಯಾಗಿರುವ ಬೆಂಗಳೂರಿನ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಚಿಕಿತ್ಸೆ ಪಡೆಯಲು ರಾಜ್ಯದ ನಾನಾ ಭಾಗಗಗಳಿಂದ ಸುಮಾರು 4 ಲಕ್ಷ ಕ್ಯಾನ್ಸರ್ ಪೀಡಿತರು ಚಿಕಿತ್ಸೆಗಾಗಿ ಬರುತ್ತಿದ್ದಾರೆ. ಅವರೆಲ್ಲಾ ಬೆಂಗಳೂರಿನ ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಆಸ್ಪತ್ರೆಯನ್ನೇ ಅವಲಂಬಿಸಿದ್ದಾರೆ. ಇದರಿಂದ ಕಿದ್ವಾಯಿ ಆಸ್ಪತ್ರೆಯ ಮೇಲೆ ಒತ್ತಡ ಹೆಚ್ಚಾಗುವುದರ ಜೊತೆಗೆ ಬಹಳಷ್ಟು ರೋಗಿಗಳು







Downloaded From: www.kpscvaani.com

ರೋಗ ನಿರ್ಧರಿಸುವ ಮುನ್ನವೇ ಸಾವಿನ ಮನೆ ಸೇರುತ್ತಿದ್ದಾರೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿದ ಸರ್ಕಾರವು ಇದನ್ನು ತಪ್ಪಿಸಲು ರೋಗಿಗಳು ತಮ್ಮ ಸಮೀಪದ ಆಸ್ಪತ್ರೆಯಲ್ಲಿಯೇ ಕ್ಯಾನ್ಸರ್ ರೋಗದ ಚಿಕಿತ್ಸೆ ಸೌಲಭ್ಯವನ್ನು ಪಡೆದುಕೊಳ್ಳುವಂತಾಗಲು ರಾಜ್ಯ ಸರಕಾರ ವ್ಯವಸ್ಥೆ ಕಲ್ಪಿಸಲು ಸಜ್ಜಾಗಿದೆ.

ಹೊಸ ತಂತ್ರಜ್ಞಾನ ಅಳವಡಿಸಿಕೊಳ್ಳುವ ಮೂಲಕ ಬಡ ರೋಗಿಗಳಿಗೆ ಗುಣಮಟ್ಟದ ಹಾಗೂ ಅತ್ಯಾಧುನಿಕ ಆರೋಗ್ಯ ಸೇವೆ ಒದಗಿಸಲು ಮುಂದಾಗಿದೆ. ರಾಜ್ಯದ ಹಲವು ಕಡೆಗಳಲ್ಲಿ ಆಸ್ಪತ್ರೆಗಳನ್ನು ಅಭಿವೃದ್ಧಿ ಪಡಿಸುವ ಮೂಲಕ ರೋಗಿಗಳಿಗೆ ಉಚಿತವಾಗಿ ಗುಣಮಟ್ಟದ ಸೇವೆ ದೊರೆಯುವಂತಾಗಲು ಮುಖ್ಯಮಂತ್ರಿಗಳು ಪಣ ತೊಟ್ಟಿದ್ದಾರೆ. ತುಮಕೂರು ರಾಜ್ಯದ ಎರಡನೇಯ ಅತಿ ದೊಡ್ಡ ಜಿಲ್ಲೆ. ತೆಂಗಿಗೆ ಹೆಸರಾಗಿ ಕಲ್ಪತರು ನಾಡೆಂದು ಪ್ರಸಿದ್ಧವಾಗಿರುವ ಜಿಲ್ಲೆ. ಸಾಂಸ್ಕೃತಿಕ ಕೇಂದ್ರ, ಶೈಕ್ಷಣಿಕ ನಾಡಾಗಿ ಮಾತ್ರವಲ್ಲದೆ ಇದೀಗಾ ವೈದ್ಯಕೀಯ ಸೇವೆಯಲ್ಲಿಯೂ ಹೆಗ್ಗಳಿಕೆ ಪಡೆಯಲು ಹೊರಟಿದೆ.

ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದ ನಂತರ ಜನಸಾಮಾನ್ಯರಿಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸಲು ಆರೋಗ್ಯ ಕ್ಷೇತ್ರವನ್ನು ಬಲಪಡಿಸುವ ನಿಟ್ಟಿನಲ್ಲಿ ಮಹತ್ವದ ಕ್ರಮಗಳನ್ನು ಕೈಗೊಂಡಿದೆ. ಅದರಲ್ಲೂ ಕೋವಿಡ್ ಆರೋಗ್ಯ ಕ್ಷೇತ್ರದಲ್ಲಿ ಸೃಷ್ಟಿಸಿದ ತುರ್ತು ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಿದೆ. ರಾಜ್ಯ ವೈದ್ಯಕೀಯ ಕಾಲೇಜುಗಳು ಮತ್ತು ಆಸ್ಪತ್ರೆಗಳು ಒಳಗೊಂಡಂತೆ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಅಗತ್ಯ ಕ್ರಮ ವಹಿಸಲಾಗಿದೆ. ಬಹುತೇಕ ಸರ್ಕಾರಿ ಆಸ್ಪತ್ರೆಗಳು ಖಾಸಗಿ ಆಸ್ಪತ್ರೆಗಳ ಮಟ್ಟಕ್ಕೆ ಹೈಟೆಕ್ ಸ್ಪರ್ಶ ಪಡೆದುಕೊಂಡಿವೆ. ಇದೀಗಾ ಮುಂದುವರೆದು ಕಿದ್ವಾಯಿ ಸ್ಮಾರಕ ಗಂಥಿ ಆಸ್ಪತ್ರೆ (ಕ್ಯಾನ್ಸರ್) ಮಾದರಿಯಲ್ಲೇ ರಾಜ್ಯದ ಪ್ರತಿ ಕಡೆಯಲ್ಲಿಯೂ ಒಂದು ಸುಸಜ್ಜಿತ ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣ ಮಾಡಲು ಮುಂದಾಗಿದ್ದಾರೆ. ಈ ಸೆಪ್ಟೆಂಬರ್ 25 ರಂದು ತುಮಕೂರಿನಲ್ಲಿ ಬೆಂಗಳೂರು ಕಿದ್ವಾಯಿ ಸ್ಮಾರಕ ಗಂಥಿ ಆಸ್ಪತ್ರೆ (ಕ್ಯಾನ್ಸರ್) ಮಾದರಿಯಲ್ಲೇ ಒಂದು ಸುಸಜ್ಜಿತ ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣ ಮಾಡುವ ಕಾರ್ಯಕ್ಕೆ ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ಜಿಲ್ಲಾಸ್ಪತ್ರೆ ಆವರಣದಲ್ಲಿ 'ಪೆರಿಫಿರಲ್ ಕ್ಯಾನ್ಸರ್ ಕೇಂದ್ರ', 'ತಾಯಿ ಮತ್ತು ಮಕ್ಕಳ ಆಸ್ಪತ್ರೆ' ಮತ್ತು 'ಪೌಷ್ಟಿಕ ಪುನಶ್ಚೇತನ ಕೇಂದ್ರ'ಗಳ ನೂತನ ಕಟ್ಟಡಗಳ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದರು.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯು ನಿರ್ಮಿಸುತ್ತಿರುವ ಈ ಆಸ್ಪತ್ರೆಯಲ್ಲಿ ಹೊರ ರೋಗಿಗಳ ವಿಭಾಗದ ಕಟ್ಟಡ ಹಾಗೂ ಹಲವು ವಿಶೇಷ ಸೌಲಭ್ಯಗಳನ್ನು ಇರಲಿವೆ. ಹೊರ ರೋಗಿ ವಿಭಾಗದ ಕಟ್ಟಡ, ಕಾಗದ ರಹಿತ ಸರ್ಕಾರಿ ಆಸ್ಪತ್ರೆ ಸೇರಿದಂತೆ ಹಲವಾರು ವಿಶೇಷ ಹಾಗೂ ವಿಶ್ವ ದರ್ಜೆ ಸೌಲಭ್ಯಗಳು ಸಿಗಲಿವೆ. ಬೋನ್ ಮ್ಯಾರೋ ಟ್ರಾನ್ಸ್‌ಪ್ಲಾಂಟ್ ಘಟಕ (ಅಸ್ಥಿಮಜ್ಜೆ ಕಸಿ), ಪೊಸಿಟ್ರಾನ್ ಎಮಿಷನ್ ಟೊಮೊಗ್ರಫಿ (ಪಿಇಟಿ) ಸ್ಕ್ಯಾನ್ ಬಂಕರ್, ಮಾಲಿಕ್ಯುಲರ್ ಆಂಕಾಲಜಿ ಲ್ಯಾಬ್, ಮಕ್ಕಳ ಐಸಿಯು, ಬ್ರಾಕಿಥೆರಪಿ ಹಾಗೂ ಸಿಮ್ಯುಲೇಟರ್, ನವೀಕೃತ ಔಷಧಾಲಯ, ಶಸ್ತ್ರಚಿಕಿತ್ಸಾ ಕೊಠಡಿಗಳು ಇರಲಿವೆ.

ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಮಾತನಾಡಿ, ರಾಜ್ಯಾದ್ಯಂತ ಸರ್ಕಾರಿ ಕ್ಯಾನ್ಸರ್ ಆಸ್ಪತ್ರೆಗಳಲ್ಲಿ ಕಡಿಮೆ ದರದಲ್ಲಿ ಔಷಧಿ ಒದಗಿಸಲು ಖಾಸಗಿ ಸಂಸ್ಥೆಗಳ ಸಹಯೋಗದಲ್ಲಿ ವ್ಯವಸ್ಥೆ ಮಾಡುವ ಚಿಂತನೆಯಿದೆ ಎಂದು ತಿಳಿಸಿದ್ದಾರೆ.

ಕ್ಯಾನ್ಸರ್ ಗಂಭೀರ ಕಾಯಿಲೆ, ಹೀಗಾಗಿ ಎಲ್ಲರಿಗೂ ಸೂಕ್ತ ಸಮಯದಲ್ಲಿ ಚಿಕಿತ್ಸೆ ದೊರೆಯುವಂತೆ ಮಾಡಲು ರಾಜ್ಯದ ವಿವಿಧೆಡೆ ಕ್ಯಾನ್ಸರ್ ಆಸ್ಪತ್ರೆ ನಿರ್ಮಿಸಲಾಗುತ್ತಿದೆ. ಈಗಾಗಲೇ ಶಿವಮೊಗ್ಗ, ಕಲಬುರಗಿಯಲ್ಲಿ ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆ ಶಾಖೆಗಳು ಪ್ರಾರಂಭವಾಗಿವೆ. ಸದ್ಯದಲ್ಲೇ ಹುಬ್ಬಳ್ಳಿ-ಧಾರವಾಡ ಭಾಗಕ್ಕೂ ಒಂದು ಆಸ್ಪತ್ರೆ ನಿರ್ಮಿಸಲು ಕ್ರಮವಹಿಸಲಾಗುತ್ತಿದೆ. ಆದ್ದರಿಂದ ಇದಕ್ಕೆ ಬೇಕಾದ ಸಿದ್ಧತೆಯನ್ನು ಕಿದ್ವಾಯಿ ಸಂಸ್ಥೆ ಹಾಗೂ ಆರೋಗ್ಯ ಇಲಾಖೆ ಮಾಡಿಕೊಳ್ಳಬೇಕು ಎಂದು ತಿಳಿಸಿದ್ದಾರೆ.

**ರಿಯಾಯಿತಿ ಔಷಧ ವಿತರಣೆ:**

ಕ್ಯಾನ್ಸರ್ ರೋಗಿಗಳಿಗೆ ಚಿಕಿತ್ಸೆ ಕೊಡಿಸುವುದು ದುಬಾರಿ ಕೆಲಸ. ಸರ್ಕಾರ ಉಚಿತ ಹಾಗೂ ರಿಯಾಯಿತಿ ದರದಲ್ಲಿ ಚಿಕಿತ್ಸೆ ಕೊಟ್ಟರೂ ಔಷಧಿಗಾಗಿ ಹೆಚ್ಚು ಹಣ ವ್ಯಯಿಸಬೇಕಾಗುತ್ತದೆ. ಹೀಗಾಗಿ ರಾಜ್ಯ ಸರ್ಕಾರವು ಖಾಸಗಿ ಸಂಸ್ಥೆಗಳು ಹಾಗೂ ಖಾಸಗಿ ಸಂಸ್ಥೆಗಳ ಸಾಮಾಜಿಕ ಹೊಣೆಗಾರಿಕೆ ನಿಧಿಯಿಂದ ಕಿದ್ವಾಯಿ ಸ್ಮಾರಕ ಗಂಥಿ ಹಾಗೂ ಅದರ ಘಟಕಗಳಲ್ಲಿ ಕಡಿಮೆ ದರದಲ್ಲಿ ಔಷಧ ವಿತರಣೆ ಮಾಡಲು ವ್ಯವಸ್ಥೆ ಮಾಡಲಾಗುವುದು ಎಂದರು.

**ತುಮಕೂರು ನಗರದಲ್ಲಿ ರಿಫರಲ್ ಕ್ಯಾನ್ಸರ್ ಕೇಂದ್ರ:**


ಸುಮಾರು 27,84,099 ಜನಸಂಖ್ಯೆ ಹೊಂದಿರುವ ತುಮಕೂರು ಜಿಲ್ಲೆಯು ರಾಜ್ಯದ ಹಲವು ಜಿಲ್ಲೆಗಳಿಗೆ ಸಂಪರ್ಕ ಸಾಧಿಸುವ ಕೇಂದ್ರವಾಗಿದ್ದು, 5 ಜಿಲ್ಲೆಗಳೊಂದಿಗೆ ಗಡಿಯನ್ನು ಹಂಚಿಕೊಂಡಿರುವ ಈ ಜಿಲ್ಲಾ ಕೇಂದ್ರದ ಜಿಲ್ಲಾಸ್ಪತ್ರೆಯಲ್ಲಿ ವಿವಿಧ ಆರೋಗ್ಯ ಸೇವೆಗಳಿದ್ದರೂ ಕ್ಯಾನ್ಸರ್‌ಗೆ ಸಂಬಂಧಿಸಿದಂತೆ ಸೂಕ್ತ ಚಿಕಿತ್ಸೆ ಲಭ್ಯವಿಲ್ಲ. ಇದರಿಂದ ತುಮಕೂರು ಹಾಗೂ ನೆರೆ ಜಿಲ್ಲೆಗಳ ಸಾವಿರಾರು ವಿವಿಧ ಬಗೆಯ ಕ್ಯಾನ್ಸರ್ ರೋಗಿಗಳು ಚಿಕಿತ್ಸೆಗಾಗಿ ಬೆಂಗಳೂರಿನ ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಆಸ್ಪತ್ರೆಯನ್ನೇ ಅವಲಂಬಿಸುವುದು ತಪ್ಪಲಿದೆ. ತುಮಕೂರು ಜಿಲ್ಲಾ ಆಸ್ಪತ್ರೆ ಆವರಣದಲ್ಲಿ 100 ಹಾಸಿಗೆಗಳ ಸಾಮರ್ಥ್ಯವುಳ್ಳ ಪೆರಿಫರಲ್ ಕ್ಯಾನ್ಸರ್ ಕೇಂದ್ರವನ್ನು ಸುಮಾರು 9906.21 ಲಕ್ಷ ರೂ. ಅಂದಾಜು ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ. ಈ ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣಕ್ಕೆ ಟೆಂಡರ್ ಪ್ರಕ್ರಿಯೆ ಮುಗಿದಿದ್ದು, ಗುತ್ತಿಗೆದಾರರನ್ನು ಗುರುತಿಸಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಜಿಲ್ಲೆಯಲ್ಲೇ ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣವಾಗುವುದರಿಂದ ಕ್ಯಾನ್ಸರ್ ರೋಗಿಗಳು ಬೆಂಗಳೂರಿಗೆ ತೆರಳುವ ಅನಿವಾರ್ಯ ತಪ್ಪಲಿದ್ದು, ಜಿಲ್ಲೆಯಲ್ಲಿಯೇ ಕ್ಯಾನ್ಸರ್ ರೋಗಕ್ಕೆ ಸೂಕ್ತ ಚಿಕಿತ್ಸೆ ದೊರೆಯಲಿದೆ. ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣದಿಂದ ಕ್ಯಾನ್ಸರ್‌ಗೆ ಸಂಬಂಧಿಸಿದ ಶಸ್ತ್ರಚಿಕಿತ್ಸೆ, ಕಿಮೊಥೆರಪಿ, ರೇಡಿಯೋಥೆರಪಿ ಸೇರಿದಂತೆ ಇತರೆ ಚಿಕಿತ್ಸೆಗಳು ಲಭ್ಯವಾಗಲಿವೆ.



Downloaded From: www.kpscvaani.com

# ಪದಬಂಧ-24



ವಿದ್ಯಾ ವಿ. ಹಾಲಭಾವಿ

**ಎಡದಿಂದ ಬಲಕ್ಕೆ**

1. ಕುದುರೆ ಇಲ್ಲಿದೆ (3)
3. ಶ್ರೀ ಕೃಷ್ಣನ ಸೋದರಮಾವ (2)
5. ಹತ್ತಿರದಲ್ಲೇ ಕಾಣಿಸಿದ ಅರಳೆ! (2)
6. ಅನುಕರಣೆಗೆ ಯೋಗ್ಯವಾದುದು (3)
7. ಹಲಗೆ ಹತ್ತಿರ ಉಳುವ ಸಾಧನವಿದೆ! (2)
8. ರಾಜ್ಯದ 31 ನೇ ಜಿಲ್ಲೆಯಾಗಿ ಉದಯಿಸಿದ ಜಿಲ್ಲೆ (6)
10. ಅನೇಕ ಸುಂದರ ಜಲಪಾತಗಳಿರುವ ಕರಾವಳಿ ಜಿಲ್ಲೆ (6)
14. ಅರಣ್ಯ ಇಲ್ಲಿ ಕಾಣುತ್ತಿದೆ (2)
15. ಅವಸರ ಅಥವಾ ಕುತೂಹಲ (3)
16. ದಾರದ ಉಂಡೆ (2)
17. ತಿರುಗಿದ ವರನಿಗೆ ಕೇಳಿದ ಧ್ವನಿ (2)
18. ಬೆಲೆಯನ್ನು ಹೀಗೂ ಹೇಳುವರು (3)

**ಮೇಲಿಂದ ಕೆಳಕ್ಕೆ**

1. ರಾಜ್ಯದ ಈ ಜಿಲ್ಲೆಯಲ್ಲಿ ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಆಸ್ಪತ್ರೆ ನಿರ್ಮಿಸಲಾಗುತ್ತಿದೆ (4)
2. ಹಂಚಿಕೆಯಿಲ್ಲಿ ತಿರುವುಮುರುವಾಗಿದೆ (4)
4. ನೆಮ್ಮದಿಗೊಂದು ಪರ್ಯಾಯ ಪದ (4)
5. ದಾವಣಗೆರೆ ಜಿಲ್ಲೆಯ ಈ ತಾಲೂಕು ತುಂಗಭದ್ರಾ ನದಿದಡದಲ್ಲಿದೆ (4)
9. ಯಮನ ಹತ್ತಿರವಿರುವ ಜೋಡಿ! (3)
10. ಶರಣೆ ಅಕ್ಕಮಹಾದೇವಿಯ ಹುಟ್ಟೂರು (4)
11. ಬೆಲೆ ಬಾಳುವ ಮಣಿಗಳನ್ನು ಅಡಗಿಸಿಕೊಂಡಿರುವಸಮುದ್ರ (4)
12. ಪೇಢೆಗೆ ಹೆಸರುವಾಸಿಯಾದ ನಗರವು ಉಲ್ಟಾ ಆಗಿದೆ (4)
13. ಈಕೆ ಅತ್ಯಂತ ಬುದ್ಧಿವಂತೆ! (4)

**ಉತ್ತರ**

**ಮೇಲಿಂದ ಕೆಳಕ್ಕೆ**

1. ತುಮಕೂರು 2. ಗಯೋನಿವಿ 4. ಸಮಾಧಾನ 5. ಹರಿಹರ 9. ಯಮಕ 10. ಉಡುತಡಿ 11. ರತ್ನಾಕರ 12. ಡವಾರಧಾ 13. ಕಡುಜಾಣೆ

**ಎಡದಿಂದ ಬಲಕ್ಕೆ**

1. ತುರಗ 3. ಕಂಸ 5. ಹತ್ತಿ 6. ಮಾದರಿ 7. ಹಲ 8. ವಿಜಯನಗರ 10. ಉತ್ತರಕನ್ನಡ 14. ಕಾಡು 15. ತವಕ 16. ಲಡಿ 17. ರವ 18. ಧಾರಣೆ

**-: ಸೂಚನೆ :-**

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ-ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Sri G. Jagadeesha,IAS, Commissioner, Department of Information & Public Relations, 17, Varthasoudha, Bhagwan Mahaveer Road, Bangalore - 560 001
Printed at :M/s Lavanya Mudrana, #19, Vidyapeeta Circle, Banashankari 1st Stage, Bangalore-560050

Downloaded From: www.kpscvaani.com



ಅಕ್ಟೋಬರ್ ಮಾಹೆಯಲ್ಲಿ ರಾಜ್ಯಕ್ಕೆ ಆಗಮಸಿದ ಗೌರವಾನ್ವಿತ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರನ್ನು ವಿಮಾನ ನಿಲ್ದಾಣದಲ್ಲಿ ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ಬರಮಾಡಿಕೊಂಡ ಸಂದರ್ಭ.




ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ತಮ್ಮ ಅಧಿಕೃತ ನಿವಾಸದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ಕುಂದುಕೊರತೆಗಳನ್ನು ಆಲಿಸುತ್ತಿರುವುದು.

Downloaded From: www.kpscvaani.com

RNI No. KAR/KAN/2017/75029

Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26




Downloaded From: www.kpscvaani.com